# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 5 | Issue : 11 | March 2023 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 5 | ಸಂಚಿಕೆ : 11 | ಮಾರ್ಚ್ 2023 | ಪುಟಗಳು : 32 | ₹ 20 ರೂ.



॥ ಜೈ ಶ್ರೀ ಗುರುದೇವ್ ॥

ಆದಿಚುಂಚನಗಿರಿ ವಿಶ್ವವಿದ್ಯಾಲಯ





# ಆದಿಚುಂಚನಗಿರಿ ಆಸ್ಪತ್ರೆ

ADICHUNCHANAGIRI HOSPITAL

ಬಿ ಜಿ ನಗರ – 571 448, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ



## ಪ್ಲಾಸ್ಟಿಕ್ ಸರ್ಜರಿ ತಜ್ಞರು

- ಕಾಸ್ಮೆಟಿಕ್ ಸರ್ಜರಿ
- ಸುಟ್ಟಗಾಯ ಚಿಕಿತ್ಸೆ
- ಸೀಳುತುಟಿ (Cleft Lip, Cleft Palate Correction)
- ಪುನರ್‌ನಿರ್ಮಾಣ (Reconstruction) ಶಸ್ತ್ರ ಚಿಕಿತ್ಸೆ



## ಮಧುಮೇಹ ತಜ್ಞರು (ಡಯಾಬಿಟಿಸ್)

- ಮಧುಮೇಹ ಚಿಕಿತ್ಸೆ
- ಮಧುಮೇಹ ಕಣ್ಣಿನ ಚಿಕಿತ್ಸೆ
- ಮಧುಮೇಹ ಹೃದಯ, ಮೂತ್ರಪಿಂಡ & ಪಾದದ ಆರೈಕೆ
- ಮಧುಮೇಹ ತಡೆಗಟ್ಟುವಿಕೆ



## ಕ್ಯಾನ್ಸರ್ ತಜ್ಞರು

- ಕ್ಯಾನ್ಸರ್ ತಪಾಸಣೆ
- ಕ್ಯಾನ್ಸರ್ ಶಸ್ತ್ರಚಿಕಿತ್ಸೆ
- ಬಾಯಿ ಮತ್ತು ಗಂಟಲು, ಸ್ತನ ಮತ್ತು ಗರ್ಭಕೋಶ, ಕರುಳು ಕ್ಯಾನ್ಸರ್ ಚಿಕಿತ್ಸೆ
- ಕೀಮೋ ತೆರಪಿ, ರೇಡಿಯೋ ಥೆರಪಿ



## ಹೃದ್ರೋಗ ತಜ್ಞರು

- ECG • ECHO • TMT
- ಅತ್ಯಾಧುನಿಕ Cath Lab • ಆಂಜಿಯೋಗ್ರಫಿ
- ಆಂಜಿಯೋ ಪ್ಲಾಸ್ಟಿ • ಸ್ಟಂಟ್ ಅಳವಡಿಕೆ
- ಪ್ರತ್ಯೇಕ ಹೃದಯ ಸಂಬಂಧಿತ ಐಸಿಯು ಘಟಕ



## ನ್ಯೂರೋ ಸರ್ಜರಿ ತಜ್ಞರು

- ಸುಸಜ್ಜಿತವಾದ ಶಸ್ತ್ರಚಿಕಿತ್ಸಾ ಕೊಠಡಿಗಳು
- ಪ್ರತ್ಯೇಕ ನ್ಯೂರೋ ಐಸಿಯು
- ಬ್ರೈನ್ ಟ್ಯೂಮರ್
- ಬೆನ್ನುಮೂಳೆ (Spine) ಚಿಕಿತ್ಸೆ
- ಪಾರ್ಶ್ವವಾಯು (Stroke) ಚಿಕಿತ್ಸೆ



## ಮೂತ್ರಪಿಂಡ ತಜ್ಞರು

- ಮೂತ್ರಪಿಂಡದಲ್ಲಿ ಕಲ್ಲು
- ಪ್ರೋಸ್ಟೇಟ್ ಗ್ರಂಥಿಗೆ ಸಂಬಂಧಪಟ್ಟಂತೆ ಸಮಸ್ಯೆಗಳು
- ಮೂತ್ರಪಿಂಡಗಳ ಶಸ್ತ್ರ ಚಿಕಿತ್ಸೆಗಳು
- ಮೂತ್ರಪಿಂಡಗಳಿಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳಿಗೆ ಚಿಕಿತ್ಸೆ



## ಕ್ಯಾತ್ ಲ್ಯಾಬ್ ಸೇವೆಗಳು

- ಆಂಜಿಯೋಗ್ರಫಿ • ಆಂಜಿಯೋಪ್ಲಾಸ್ಟಿ
- ಪೇಸ್ ಮೇಕರ್ ಅಳವಡಿಕೆ

## RHEUMATOLOGY
(ಸಂಧಿವಾತ)
ಸೇವೆಗಳು ಲಭ್ಯ

ಸಂಪ್ರೀತಿ – ಸಮೃದ್ಧಿ
ನಿಮ್ಮ ಮನ ಮನೆಗಳಿಗೆ...
ಮಾಸಿಕ

# ಸಂಪಾದಕೀಯ

ಮಾರ್ಚ್ : 2023
ಸಂಪುಟ 5, ಸಂಚಿಕೆ 11

ಸಂಪಾದಕರು
ಡಾ|| ಸಿ. ನಂಜುಂಡಯ್ಯ

ಚಂದಾ ವಿವರ :

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಂಪಾದಕರು
ಸಂಪ್ರೀತಿ – ಸಮೃದ್ಧಿ
ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

#66, ಸಂಪ್ರೀತಿ – ಸದನ
ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,
ಮಾಗಡಿ – 562 120 ರಾಮನಗರ ಜಿಲ್ಲೆ.

ಮುದ್ರಕರು
■ ಕಂಪ್ಯೂಟರ್ ವರ್ಲ್ಡ್
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು – 560 023.

■ ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.
sampreethisamruddhi@gmail.com
8971608213

ಸಂಪ್ರೀತಿ - ಸಮೃದ್ಧಿ

ಋತುಗಳ ರಾಜ ವಸಂತನ ಆಗಮನಕ್ಕೆ ಪ್ರಕೃತಿ ಮೈಯೊಡ್ಡಲು ಆರಂಭಿಸಿದೆ. ತರುಲತೆಗಳು ಚಿಗುರಿ ಹೊಸ ಹೂಗಳು ಕಂಪನ್ನು ಬೀರುತ್ತಾ ವಸಂತನಿಗೆ ಸ್ವಾಗತ ಕೋರುತ್ತಿವೆ.

ಯಾರಿ ವಸಂತ ಎಂದು ಹುಬ್ಬೇರಿಸಬೇಡಿ ಇದು ವಸಂತ ಋತುವಿನ ಕುರಿತಾದ ವಿಚಾರ. ಎಂದಿನಂತೆ ಋತುಮಾನಗಳು ಬದಲಾಗುತ್ತಿದೆ. ಅದರಲ್ಲೂ ಶಿಶಿರ ಋತು ಅಂತ್ಯಗೊಳ್ಳುತ್ತಿದ್ದು, ಪ್ರಕೃತಿ ಸಣ್ಣ ಬದಲಾವಣೆಯನ್ನು ಕಾಣುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಕೃತಿಯ ಸೌಂದರ್ಯವನ್ನು ಕಣ್ಣತುಂಬಿಕೊಳ್ಳುವುದೇ ಆನಂದ.

ಒಂದು ವರ್ಷದ ಕಾಲಾವಧಿಯನ್ನು ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ ಮತ್ತು ಶಿಶಿರ ಎಂಬುದಾಗಿ 6 ಭಾಗಗಳನ್ನಾಗಿ ಮಾಡಿ ವಿಂಗಡಿಸಲಾಗಿದೆ. ಚೈತ್ರ ವೈಶಾಖ ಮಾಸಗಳನ್ನು ಸೇರಿ ವಸಂತ ಋತು ಇರುತ್ತದೆ.

ವರ್ಷದಲ್ಲಿ 6 ಋತುಗಳು ಇದ್ದರೂ ಕವಿಗಳಿಗೆ ತುಂಬಾ ಪ್ರಿಯವಾದ ಋತು ಎಂದರೆ ಅದು ವಸಂತ ಋತು. ಹೂವುಗಳ ಮಕರಂದ ಕುಡಿದು ದುಂಬಿಗಳು ಹೂಗಳನ್ನು ಮತ್ತೆ ಮತ್ತೆ ಮುತ್ತಿಡುತ್ತಿವೆ. ಮಂದ ಮಂದವಾಗಿ ಬೀಸುವ ಗಾಳಿ ನವಿರಾದ ಚಿಗುರನ್ನು ನೃತ್ಯವಾಡಿಸುತ್ತಿದೆ ಎನ್ನುವ ಕಾಳಿದಾಸನಿಂದ ಹಿಡಿದು ಅನೇಕ ಕವಿಗಳು ಇದರ ಅಂದಗಳನ್ನು, ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳನ್ನು ತಮ್ಮ ಕಾವ್ಯದ ಮೂಲಕ ಸೆರೆಹಿಡಿಯುವ ಪ್ರಯತ್ನ ಮಾಡಿದ್ದಾರೆ.

ಅನೇಕ ಮರಗಳು ಬಗೆ ಬಗೆಯ ಹೂಗಳಿಂದ ತುಂಬಿದ್ದು, ಹಳದಿ, ಕೆಂಪು, ಬಿಳಿ ಮತ್ತು ನೀಲಿ ಹೀಗೆ ನಾನಾ ಬಣ್ಣಗಳಿಂದ ತುಂಬಿದ ಹೂಗಳನ್ನು ನೋಡಬಹುದು.

ವರ್ಷವಿಡೀ ವ್ಯವಸಾಯ ಮಾಡಿದ ರೈತರಿಗೆ ಬೆಳೆಗಳನ್ನು ಬೆಳೆದು ನೆಮ್ಮದಿಯ ನಿಟ್ಟುಸಿರು ಬಿಡುವ ಕಾಲವಾಗಿದೆ. ಒಕ್ಕಣೆಯ ಸುಗ್ಗಿ ಕಾಲದಲ್ಲಿ ಧವಸ ಧಾನ್ಯಗಳನ್ನು ಶೇಖರಿಸಿ ಇಟ್ಟು ಆದರ ಆನಂದವನ್ನು ಅನುಭವಿಸುವ ಕಾಲ ಹಾಡು, ಕುಣಿತ, ನಾಟಕ, ಮತ್ತು ಜಾತ್ರೆಗಳು ಈ ಋತುವಿನಲ್ಲಿ ಹೆಚ್ಚಾಗಿ ನಡೆಯುತ್ತವೆ.

ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು ಎಂಬ ಕವಿ ವಾಣಿಯಂತೆ ಮರಗಳ ತುಂಬೆಲ್ಲಾ ಹೊಸ ಚಿಗುರು ಮೇಳೈಸಿದೆ. ತರಗೆಲೆಗಳೆಲ್ಲಾ ಉದುರಿವೆ. ಹೊಸತವನ್ನು ಆಹ್ವಾನಿಸುವ ವಸಂತ ಋತುವಿನಲ್ಲಿ ಪ್ರಕೃತಿಯ ರಮ್ಯ ಸೊಬಗನ್ನು ಆಸ್ವಾದಿಸುವುದೇ ಒಂದು ಖುಷಿ. ॐ



# ಚಾಂದ್ರಮಾನ ಯುಗಾದಿ

**"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ'**

ಯುಗಾದಿಯು ಮುಖ್ಯವಾಗಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಆಚರಿಸಲಾಗುವ ಹಿಂದೂ ಹಬ್ಬವಾಗಿದೆ. ಯುಗಾದಿಯು ಚೈತ್ರ ಮಾಸದಿಂದ ಪ್ರಾರಂಭವಾಗುವ ಹೊಸ ಹಿಂದೂ ಕ್ಯಾಲೆಂಡರ್ ವರ್ಷದ ಆರಂಭವನ್ನು ಸೂಚಿಸುತ್ತದೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಈ ಹಬ್ಬವನ್ನು 'ಯುಗಾದಿ' ಎಂದೂ ಕರ್ನಾಟಕದಲ್ಲಿ 'ಉಗಾದಿ' ಎಂದೂ ಕರೆಯುತ್ತಾರೆ. ಯುಗಾದಿಯು ಎರಡು ಪದಗಳ ಸಂಯೋಜನೆಯಾಗಿದೆ.

ಯುಗಾದಿಯ ಅರ್ಥವೇನೆಂದರೆ 'ಯುಗದ ಆದಿ'. 'ಯುಗಾದಿ' ಎಂಬ ಶಬ್ದ ಸಂಸ್ಕೃತದ 'ಯುಗ' ಮತ್ತು 'ಆದಿ' ಎಂಬ ಎರಡು ಶಬ್ದಗಳಿಂದ ಕೂಡಿದೆ. ಯುಗವೆಂದರೆ ಸೃಷ್ಟಿಯ ಕಾಲಮಾನ. ಅರ್ಥಾತ್ ಹೊಸ ವರ್ಷ; ಆದಿ ಎಂದರೆ ಆರಂಭ. ಯುಗಾದಿ ತತ್ಸಮ ಪದವಾದರೆ ಉಗಾದಿ ತದ್ಭವ, ಯುಗಾದಿ ಹಬ್ಬವು ಪೌರಾಣಿಕ ಹಾಗೂ ಐತಿಹಾಸಿಕ ವಿಶೇಷತೆಗಳ ದಿನವಾಗಿದೆ. ಇದು ಬ್ರಹ್ಮದೇವನ ಸೃಷ್ಟಿಯ ದಿನ. ಚೈತ್ರಶುದ್ಧ ಪಾಡ್ಯದಂದು ಸೂರ್ಯೋದಯವಾಗುತ್ತಿರುವಾಗ ಬ್ರಹ್ಮನು ವಿಶ್ವವನ್ನು ಸೃಷ್ಟಿಸಿದನೆಂದೂ, ಅಂದಿನಿಂದ ಕಾಲಗಣನೆಗಾಗಿ ಗ್ರಹ–ನಕ್ಷತ್ರ–ಮಾಸ–ಋತು–ವರ್ಷ ಇವುಗಳನ್ನು ಏರ್ಪಡಿಸಿದನೆಂದೂ ವ್ರತಖಂಡದಲ್ಲೂ ಪುರಾಣಗಳಲ್ಲೂ ಉಲ್ಲೇಖವಿದೆ.

ಪಕ್ಷಿಗಳಲ್ಲಿ ನವಿಲು, ಪ್ರಾಣಿಗಳಲ್ಲಿ ಮಾನವ, ಋತುಗಳಲ್ಲಿ ವಸಂತ ಋತು ಶ್ರೇಷ್ಠವಾದಂತೆ ಎಲ್ಲ ಹಬ್ಬಗಳಲ್ಲಿ ಯುಗಾದಿಯು ಶ್ರೇಷ್ಠ. ಈ ಹಬ್ಬವನ್ನು ಭಾರತ ಪರ್ವದಲ್ಲಿ ಬೇರೆ–ಬೇರೆ ಹೆಸರಿನಿಂದ, ಸಾಮಾನ್ಯವಾಗಿ ಎಲ್ಲರೂ ಆಚರಿಸುವರು. ಹಬ್ಬಗಳಲ್ಲಿ ಶ್ರೇಷ್ಠವಾದ ಪ್ರಸಿದ್ಧವಾದ ಯುಗಾದಿ ಹಬ್ಬ ಚೈತ್ರ ಮಾಸದ ಶುಕ್ಲ ಪಕ್ಷದ ಪಾಡ್ಯದಂದು ಬರುತ್ತದೆ. ಯುಗಾದಿ ಹಬ್ಬವು ಹಿಂದುಗಳ ದೃಷ್ಟಿಯಲ್ಲಿ ವರ್ಷಾರಂಭದ ಪವಿತ್ರ ದಿನ.



**ಆಚರಣೆ:-**

ಯುಗಾದಿಯನ್ನು ಚಂದ್ರಮಾನ-ಸೌರಮಾನ ಹೀಗೆ ಎರಡು ಬಗೆಯಲ್ಲಿ ಆಚರಿಸುವ ಪದ್ಧತಿ ಇದೆ. ಚಂದ್ರನ ಚಲನೆಯನ್ನು ಗುರುತಿಸಿ ಮಾಡುವ ಪದ್ಧತಿಗೆ ಚಂದ್ರಮಾನ ಯುಗಾದಿ ಎನ್ನುವರು. ಹಾಗೂ ಸೂರ್ಯ ಮೇಷರಾಶಿಗೆ ಬಂದಾಗ ಸೌರಮಾನ ಯುಗಾದಿ ಎನ್ನುವರು. ದಕ್ಷಿಣ ಭಾರತೀಯರು ಚಾಂದ್ರಮಾನವನ್ನು ಅನುಸರಿಸಿ ಚೈತ್ರಶುದ್ಧ ಪಾಡ್ಯಮಿಯಂದು ಯುಗಾದಿ ಆಚರಿಸುತ್ತಾರೆ.

ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ ಗುಜರಾತ್‌ಗಳಲ್ಲಿ ಚಂದ್ರಮಾನ ಯುಗಾದಿ ಆಚರಿಸಿದರೆ ತಮಿಳುನಾಡು, ಕೇರಳ ಮತ್ತು ಉತ್ತರ ಭಾರತದ ಕೆಲವು ಸ್ಥಳಗಳಲ್ಲಿ ಸೌರಮಾನ ಯುಗಾದಿ ಆಚರಿಸುತ್ತಾರೆ. ಉತ್ತರಭಾರತದಲ್ಲಿ ಕಾರ್ತಿಕ ಶುದ್ಧ ಪಾಡ್ಯಮಿಯನ್ನು ಯುಗಾದಿಯೆನ್ನುವರು. ಈ ಹಬ್ಬವನ್ನು ಭಾರತದಲ್ಲಿ ಬೇರೆ-ಬೇರೆ ಹೆಸರಿನಿಂದ ಆಚರಿಸುವರು. ಕರ್ನಾಟಕದಲ್ಲಿ 'ಯುಗಾದಿ', ಮಹಾರಾಷ್ಟದಲ್ಲಿ 'ಗುಢಿಪಾಡವಾ', ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ 'ಹೊಸ ವರ್ಷದ ಹಬ್ಬ'ವೆಂದು, ಉತ್ತರ ಭಾರತದಲ್ಲಿ 'ಬೈಸಾಖಿ' ಎಂದು ಇದು ಆಚರಿಸಲ್ಪಡುತ್ತದೆ.

ಎಲ್ಲ ಶಾಸ್ತ್ರ, ಗ್ರಂಥಗಳಲ್ಲಿ ಯುಗಾದಿಯನ್ನು ಕುರಿತು ಈ ರೀತಿ ಹೇಳಲಾಗಿದೆ. ಶ್ರೀರಾಮನು ರಾವಣನನ್ನು ಸಂಹರಿಸಿ ಬಂದಾಗ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ಪಟ್ಟಾಭಿಷೇಕವಾದ ದಿನ. ಅಲ್ಲದೆ ಮಹಾಭಾರತದಲ್ಲಿ ಬರುವ ಚೇದಿರಾಜ್ಯದ ಅರಸು ವಸುವಿನ ಉಗ್ರ ತಪಸ್ಸಿಗೆ ಮೆಚ್ಚಿದ ಇಂದ್ರನು ವೈಜಯಂತಿ ಮಾಲೆಯನ್ನು ಅವನಿಗೆ ಕೊಟ್ಟು, ಚಿನ್ನದ ಕಲಶವುಳ್ಳ ಚಕ್ರಾಧಿಪತ್ಯದ ಧ್ವಜವನ್ನು ರಾಜನ ತಲೆಯ ಮೇಲೆ ಇಟ್ಟಿರುವ ದಿನ.

ದಕ್ಷಿಣ ಭಾರತವನ್ನು ಆಳಿದ ಶಾಲಿವಾಹನನು ಚೈತ್ರಶುದ್ಧ ಪಾಡ್ಯಮಿಯಂದು ಶಾಲಿವಾಹನ ರಾಜ ಸಿಂಹಾಸನಾರೂಢನಾದನೆಂದೂ, ಆಗಿನಿಂದ ಶಾಲಿವಾಹನ ಶಕೆ ಆರಂಭವಾಯಿತೆಂದೂ ಹೇಳಲಾಗುತ್ತದೆ. ಹಿಂದುಗಳು ಶಾಲಿವಾಹನ ಶಕೆಯ ಸಂವತ್ಸರಗಳನ್ನಾಧರಿಸಿ ಆಯಾ ಸಂವತ್ಸರವನ್ನು ಚೈತ್ರ ಮಾಸದ ಪ್ರತಿಪದೆಯಿಂದ ಆರಂಭಿಸುವರು. ಯುಗಾದಿಯು ಚಂದ್ರಮಾನದ ಸಂವತ್ಸರದ ಆರಂಭದ ದಿನ.

ಸರ್ಗದ ಮೈತುಂಬಿ... 'ಯುಗಾದಿ' ಬಂದಿತೆಂದರೆ ಎಲ್ಲಡೆಯಲ್ಲಿ ಸಂತೋಷ, ಸಂಭ್ರಮ ತುಂಬಿ ತುಳುಕುತ್ತಿರುತ್ತದೆ. ಚೈತ್ರಮಾಸದಿಂದ ವಸಂತ ಋತು ಶುರುವಾಗುತ್ತದೆ. ವನಗಳೆಲ್ಲ ಚಿಗುರಿ ಹೂ ಬಿಟ್ಟು ಯುಗಾದಿಯ ಹರ್ಷವನ್ನು ಬೀರುವವು. ಎಲ್ಲಿ ನೋಡಿದರೂ ಮರಗಿಡಬಳ್ಳಿಗಳು ಹಸಿರಾಗಿ ನಳನಳಿಸುತ್ತಿರುವುದು. ಯುಗಾದಿಯ ದಿನ ಮುಂಜಾನೆ ಬೇವು ಮಿಶ್ರಿತ ನೀರಿನಿಂದ ಸ್ನಾನ ಮಾಡಿ, ಹೊಸಬಟ್ಟೆ ಧರಿಸಿ ತಂತಮ್ಮ ದೇವರನ್ನು ಪೂಜಿಸಿ, ಬೇವು ಬೆಲ್ಲವನ್ನು ಸೇವನೆ ಮಾಡುತ್ತಾರೆ. ಬೇವು-ಬೆಲ್ಲವು ಸುಖ-ದುಃಖ, ರಾತ್ರಿ-ಹಗಲು ಇವುಗಳ ಸಂಕೇತಗಳಾಗಿವೆ. ಮಾನವರ ಬದುಕಿನಲ್ಲಿ ಸುಖ-ದುಃಖಗಳು ಅವಿಭಾಜ್ಯ ಅಂಶಗಳು. ಇವೆಲ್ಲವುಗಳೊಂದಿಗೆ ಸಮತೋಲನ ಕಾಯ್ದುಕೊಂಡೇ ಮನುಷ್ಯ ಬದುಕಬೇಕು. ಜೀವನ ಕಷ್ಟ-ಸುಖ. ನೋವು ನಲಿವುಗಳ ಸಮ್ಮಿಶ್ರಣವಾಗಿದೆ. ಇವೆರಡೂ ಒಟ್ಟಿಗೆ ಇರುವವು. ಎರಡನ್ನೂ ಸಮದೃಷ್ಟಿಯಿಂದ ಸವಿಯುವುದನ್ನು ಕಲಿಯಲೆಂದೇ ಯುಗಾದಿಯಂದು ಬೇವು-ಬೆಲ್ಲವನ್ನು ತಿನ್ನಿಸುವರು. ನೋವು ನಲಿವು ಎರಡಕ್ಕೂ ನಾವು ಸ್ವಾಗತ ನೀಡಬೇಕು. ನಾವು ಬೇವಿನ ಸಮಾನವಾದ ದು:ಖ, ಅಶಾಂತಿಯ, ಪ್ರಪಂಚದಲ್ಲಿದ್ದರೂ ಬೆಲ್ಲದ ಸಮಾನವಾದ ಶಾಂತಿ, ಅತೀಂದ್ರಿಯ ಸುಖ, ಆತ್ಮೀಯತೆ, ಸ್ನೇಹ, ಮಧುರತೆಯ ಅನುಭವ ಮಾಡುವುದು ಎಂಬ ನಿಜ ಅರ್ಥವಾಗಿದೆ.

ಬೇವಿನ ಎಲೆಯೂ ಮಾನವನ ಆರೋಗ್ಯಕ್ಕೆ ಸಹಕಾರಿಯಾಗುವುದು.'ಶತಾಯುರ್ವಜ್ರ ದೇಹಾಯ


**ಮನೆ ಮದ್ದು :**

**ದಾಳಿಂಬೆ ರಸಕ್ಕೆ ಏಲಕ್ಕಿ ಪುಡಿಯನ್ನು ಸೇರಿಸಿ ಸೇವಿಸಿದರೆ ತಲೆ ಸುತ್ತುವಿಕೆ ನಿವಾರಣೆಯಾಗುತ್ತದೆ.**

ಸರ್ವಸಂಪತ್ಕರಾಯಚ// ಸರ್ವಾರಿಷ್ಟವಿನಾಶಾಯ ನಿಂಬಕಂ ದಳ ಭಕ್ಷಣಂ//' ಎಂದು ಆಯುರ್ವೇದವು ಬೇವಿನ ಮಹಿಮೆಯನ್ನು ಸಾರಿದೆ. ಯುಗಾದಿಯಂದು ಇಷ್ಟದೇವತೆಯ ಪೂಜೆ ಮಾಡುವರು. ಅಷ್ಟೇ ಅಲ್ಲದೇ ನವಗ್ರಹ ಪೂಜೆಗಳನ್ನು ಮಾಡುವರು ಹಾಗೂ ದಾನ ಮಾಡುವ ಸಂಪ್ರದಾಯಗಳೂ ಇರುವವು. ವಿವಿಧ ರಾಜ್ಯಗಳಲ್ಲಿ ಯುಗಾದಿ ಪರ್ವ ಗುಜರಾತ್, ಮತ್ತು ಮಹಾರಾಷ್ಟ್ರದಲ್ಲಿ ಯುಗಾದಿಯ ದಿನ ಪ್ರತಿಯೊಂದು ಮನೆಯ ಮುಂದೆಯೂ ಗುಡಿಯನ್ನು ನಿಲ್ಲಿಸುವ ಪದ್ಧತಿ ಇರುವುದರಿಂದ ಯುಗಾದಿಯನ್ನು 'ಗುಡಿಪಾಡ್ಯ' ಎಂದು ಕರೆಯುವರು. ಗುಡಿ ಎಂದರೆ ಧ್ವಜ. ಒಂದು ಕೋಲಿನ ತುದಿಗೆ ರೇಷ್ಮೆ ಬಟ್ಟೆ ಏರಿಸಿ, ಅದರ ಮೇಲೆ ಬೆಳ್ಳಿ ಅಥವಾ ಹಿತ್ತಾಳೆಯ ಸಣ್ಣ ಬಿಂದಿಗೆಯನ್ನು ಕಟ್ಟಿ ಬೇವು ಮತ್ತು ಮಾವಿನ ಎಲೆಗಳಿಂದ ಅಲಂಕರಿಸುವರು. ಮಹಾಭಾರತದಲ್ಲಿ ಇದರ ಪ್ರಸ್ತಾಪವಿದೆ. ಯುಗಾದಿಯ ಮಾರನೆಯ ದಿನವೂ ಹಬ್ಬದ ವಾತಾವರಣವೇ ಇರುತ್ತದೆ. ಮುಂಜಾನೆ ಎದ್ದು ಸ್ನಾನ ಮಾಡಿ ಮಡಿಯುಟ್ಟು ದೇವರನ್ನು ಪೂಜಿಸಿ ಗುರುಹಿರಿಯರಿಗೆ ನಮಸ್ಕರಿಸುವರು.

**ವರ್ಷ ತೊಡಕು :–**

ಬಿದಿಗೆ ಚಂದ್ರ ದರ್ಶನ ಅಂದು 'ವರ್ಷ ತೊಡಕು' ಎಂದು ಆಚರಿಸಲಾಗುತ್ತದೆ. ಅಂದರೆ ಸತ್ಕಾರ್ಯಗಳಿಗೋಸ್ಕರ ನಮ್ಮನ್ನು ತೊಡಗಿಸಿಕೊಳ್ಳುವ ದಿನ. ವರ್ಷವಿಡೀ ಸುಖ ನೀಡುವಂತೆ, ಕಷ್ಟ ನಿವಾರಿಸುವಂತೆ ದೇವರಲ್ಲಿ ಕೇಳಿಕೊಳ್ಳುವ ದಿವಸ. ಈ ದಿನ ಯಾರಿಗೆ ಏನನ್ನು ಪಡೆಯುವರೋ ಅದು ಇಡೀ ವರ್ಷದವರೆಗೆ ಇರುತ್ತದೆ ಎಂಬ ನಂಬಿಕೆ ಇದೆ. ಅಷ್ಟೇ ಅಲ್ಲದೇ ಅಂದು ಬಿದಿಗೆಯ ದಿನ ಚಂದ್ರದರ್ಶನ ಮಾಡುವರು. 'ಆದಿ' ಎಂಬ ಎರಡು ಶಬ್ದಗಳಿಂದ ಕೂಡಿದೆ. ಸೃಷ್ಟಿ ನಾಟಕದಲ್ಲಿ ನಾಲ್ಕು ಯುಗಗಳು ಇವೆ. ಸತ್ಯಯುಗ, ತ್ರೇತಾಯುಗ, ದ್ವಾಪರಯುಗ, ಮತ್ತು ಕಲಿಯುಗ. ಆದಿ' ಎಂದರೆ ಪ್ರಾರಂಭ, ಪೂರ್ವಕಾಲ ಎಂದಾಗುತ್ತದೆ. ತಮಸೋಮಾ ಜ್ಯೋತಿರ್ಗಮಯಾ... ವರ್ತಮಾನ ಸಮಯ ಕಲಿಯುಗದ ಕೊನೆಯ ಹಾಗೂ ಸತ್ಯಯುಗದ ಸಂಗಮಸಮಯ, ಸಂಗಮಯುಗವಾಗಿದೆ. ಹೀಗೆ ಕಲಿಯುಗದ ಅಂಧಕಾರದ ರಾತ್ರಿಯನ್ನು ಸತ್ಯಯುಗದ ಸುಜ್ಞಾನದ ಬೆಳಕನ್ನಾಗಿ ಪರಿವರ್ತಿಸುವ ಉದಯ ಕಾಲವೇ ಯುಗಾದಿ'. ಈ ಯುಗಾದಿಯ ಸಮಯದಲ್ಲಿ ನಿರಾಕಾರ ಶಿವನು ಪ್ರಜಾಪಿತ ಬ್ರಹ್ಮಾರವರ ಶರೀರದಲ್ಲಿ ಪ್ರವೇಶ ಮಾಡಿ, ಹೊಸ ಸೃಷ್ಟಿಯ ಸ್ಥಾಪನೆ ಮಾಡುವನು. ಕಲಿಯುಗದ ತಮೋಪ್ರಧಾನ ಮನುಷ್ಯಾತ್ಮರಿಗೆ ಸತ್ಯ ಜ್ಞಾನವನ್ನು ನೀಡಿ, ಅವರಿಗೆ ಸಹಜ ರಾಜಯೋಗವನ್ನು ಕಲಿಸಿ, ಅವರನ್ನು ಸ್ವರ್ಗ ಅಥವಾ ರಾಮರಾಜ್ಯಕ್ಕಾಗಿ ಬೇಕಾಗುವ ಶ್ರೀ ಲಕ್ಷ್ಮೀ–ನಾರಾಯಣ, ಶ್ರೀರಾಮ–ಸೀತೆಯರ ಸಮಾನ ದೇವಾತ್ಮರನ್ನಾಗಿ ಮಾಡುತ್ತಾನೆ. ಅದಕ್ಕಾಗಿಯೇ ರಾಮಾಯಣದಲ್ಲಿ ಇಂದ್ರನು ವೈಜಯಂತಿ ಮಾಲೆಯನ್ನು ಹಾಗೂ ಚಿನ್ನದ ಕಲಶವನ್ನು ವಸುವಿಗೆ ನೀಡಿದ ದಿನವೆಂದು ಹೇಳಲಾಗುತ್ತದೆ. ಈ ರೀತಿಯಾಗಿ ಯುಗಾದಿಯು ನಾಡಿಗೆ ಮಾತ್ರವಲ್ಲದೆ, ಇಡೀ ವಿಶ್ವಕ್ಕೇ ಉಜ್ವಲತೆಯನ್ನು, ಜನತೆಗೆ ಸುಖ ಶಾಂತಿಯನ್ನು ನೀಡುವ ವಜ್ರಸಮಾನ ಸಮಯ. ಹೀಗೆ ಯುಗಾದಿಯು ಭಕ್ತರಿಗಾಗಿ, ವಿಶಾಲ ಹೃದಯದ ಶಿವ ಶರಣೆಯರಿಗಾಗಿ, ಮುಕ್ತಿ ಬಯಸುವ ಆರಾಧಕರಿಗಾಗಿ, ಶಿವನು ಭಕ್ತರ ಕರೆಗೆ ಓಗೊಟ್ಟು, ಅವರ ಭಕ್ತಿಯ ಫಲವನ್ನು ನೀಡಲು ಧರೆಗೆ ಬಂದಿದ್ದಾನೆ' ಎಂಬ ಪರಮ ಸಂದೇಶವನ್ನು ನೀಡುವ ಮಹಾನ್ ಪರ್ವವಾಗಿದೆ. ॐ




**"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ**
**ಹೊಸತು ಹೊಸತು ತರುತಿದೆ "**
**ಎಂದು ಹೇಳುತ್ತಾ ನಾವು ಎಲ್ಲರೂ**
**ಯುಗಾದಿಯನ್ನು ಆಚರಿಸೋಣ.**

**ಸಂಪ್ರೀತಿ ಸುಘೋಷ**




ಮಾನಸಿಕ ಆರೋಗ್ಯ
ಸದೃಢವಾಗಬೇಕಾದರೆ
ಉತ್ತಮ ಆಲೋಚನೆ, ಧ್ಯಾನ,
ಜಪ ಅನುಷ್ಠಾನ ಮಾತ್ರದಿಂದ
ಸ್ವಸ್ಥಚಿತ್ತವನ್ನು ಬೆಳೆಸಿಕೊಳ್ಳಬೇಕು.

**ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ**



## ವಿಜ್ಞಾನ ದಿಗ್ಗಜ

# ಆಲ್ಬರ್ಟ್ ಐನ್‌ಸ್ಟೈನ್



**ವಿಜ್ಞಾನ ಎಂದರೆ ತಟ್ಟನೆ ನೆನಪಾಗುವ ಅಕ್ಕರೆ ವಿಜ್ಞಾನಿ, ವಿಜ್ಞಾನ ಸಾಮ್ರಾಟ ಐನ್‌ಸ್ಟೈನ್.**

ಐನ್‌ಸ್ಟೈನ್ ಹೆಸರೇ ವಿಜ್ಞಾನ ಪ್ರಿಯರಿಗೆ ಕುತೂಹಲ ಹಾಗೂ ಮನದಲ್ಲಿ ವಿಜ್ಞಾನ ಭಾವನೆ ಮೂಡಲು ಪ್ರೇರೇಪಿಸುತ್ತದೆ. ಶಾಲೆಯ ನಾಲ್ಕು ಗೋಡೆಗಳ ನಡುವೆ ಶಿಕ್ಷಣ ಕಲಿಯದ ಬಾಲಕ ಹೊರ ಪ್ರಪಂಚದ ಅನುಭವದಿಂದಲೇ ವಿಜ್ಞಾನಿಯಾಗಿ ಬೆಳೆದು ವಿಜ್ಞಾನ ಲೋಕವೇ ಬೆರಗುಗೊಳಿಸುವಂತ ಸಾಧನೆ ಮಾಡಿದ ಮಹಾನ್ ವಿಜ್ಞಾನಿ ಮಂಡಿಸಿದ ವೈಜ್ಞಾನಿಕ ಅನ್ವೇಷಣೆಗಳು ಇಂದಿಗೂ ಮನುಕುಲಕ್ಕೆ ಮಹಾ ಉಪಯೋಗ ನೀಡುತ್ತಾ ಬಂದಿವೆ..

**ಹೀಗಿತ್ತು ವಿಜ್ಞಾನಿಯ ಬಾಲ್ಯ :**

1879 ರ ಮಾರ್ಚ್ 14 ರಂದು ಆಲ್ಬರ್ಟ್ ಐನ್‌ಸ್ಟೈನ್ ಜರ್ಮನ್ ಸಾಮ್ರಾಜ್ಯದ ಒಂದು ಭಾಗವಾದ ಉಲ್ಮ್‌ನಲ್ಲಿ ಜನಿಸಿದರು. ಅವರ ತಂದೆ ಹರ್ಮನ್ ಐನ್‌ಸ್ಟೈನ್ ಅವರು ಎಂಜಿನಿಯರ್ ಆಗಿದ್ದರು. ಅವರ ತಾಯಿ ಪಾಲಿನ್ ಐನ್‌ಸ್ಟೈನ್.

ಉಲ್ಮ್‌ನ್ ಪಟ್ಟಣವು ಕೇವಲ 120,000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಅವರ ಮನೆ ನಿಂತಿದ್ದ ಒಂದು ಸಣ್ಣ ಸ್ಮರಣಾರ್ಥ ಫಲಕವಿದೆ (ಇದು ಎರಡನೆಯ ಮಹಾಯುದ್ಧದ ಸಮಯದಲ್ಲಿ ನಾಶವಾಗಿದೆ). ಐನ್‌ಸ್ಟೈನ್ ಜನನದ ಸ್ವಲ್ಪ ಸಮಯದ ನಂತರ ಕುಟುಂಬವು ಮ್ಯೂನಿಚ್‌ಗೆ ಸ್ಥಳಾಂತರಗೊಂಡಿತು ನಂತರ ಇಟಲಿಗೆ ಹೋದಾಗ ಅವರ ತಂದೆ ತನ್ನ ಸ್ವಂತ ವ್ಯವಹಾರವನ್ನು ನಡೆಸುವಲ್ಲಿ ಸಮಸ್ಯೆಗಳನ್ನು ಎದುರಿಸಿದರು.

ಐನ್‌ಸ್ಟೈನ್‌ನ ತಂದೆ ಹರ್ಮನ್ ಎಲೆಕ್ಟ್ರೋಕೆಮಿಕಲ್ ಕಾರ್ಖಾನೆಯನ್ನು ನಡೆಸುತ್ತಿದ್ದರು ಮತ್ತು ಅವರ ತಾಯಿ ಪಾಲಿನ್ ಆಲ್ಬರ್ಟ್ ಮತ್ತು ಅವರ ತಂಗಿ ಮಾರಿಯಾಳನ್ನು ನೋಡಿಕೊಂಡಿದ್ದರು.

ಐನ್‌ಸ್ಟೈನ್ ತನ್ನ ಕೆಲವು ಶಿಕ್ಷಕರ ಸರ್ವಾಧಿಕಾರಿಧೋರಣೆಯ ವಿರುದ್ಧ ದಂಗೆ ಎದ್ದು, 16 ನೇ ವಯಸ್ಸಿನಲ್ಲಿ ಶಾಲೆಯಿಂದ ಹೊರಗುಳಿದನು. ನಂತರ ಅವನು ಜುರಿಚ್‌ನ ಸ್ವಿಸ್ ಫೆಡರಲ್ ಪಾಲಿಟೆಕ್ನಿಕ್ ಶಾಲೆಗೆ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಂಡನು. ಭೌತಶಾಸ್ತ್ರ ಮತ್ತು ಗಣಿತದಲ್ಲಿ ಅವನ ಪ್ರದರ್ಶನಗಳು ಅತ್ಯುತ್ತಮವಾಗಿದ್ದರೂ, ಅವನ ಅಂಕಗಳು ಇತರ ಪ್ರದೇಶಗಳು ಸಬ್‌ಪಾರ್ ಆಗಿದ್ದವು ಮತ್ತು ಅವನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಲಿಲ್ಲ.

**ಬಾಲ್ಯದಲ್ಲೇ ಆವಿಷ್ಕಾರ :**

ಆಲ್ಬರ್ಟ್ ಐನ್‌ಸ್ಟೈನ್ ವಿದ್ವಾಂಸ ಹ್ಯಾನ್ಸ್–ಜೋಸೆಫ್‌ಕೊಪ್ಪರ್ ಅವರ ಪ್ರಕಾರ, ಐನ್‌ಸ್ಟೈನ್ ತನ್ನ ಆತ್ಮಚರಿತ್ರೆಯಲ್ಲಿ ಎರಡು "ಅದ್ಭುತಗಳು" ತನ್ನ ಆರಂಭಿಕ ವರ್ಷಗಳನ್ನು ಬಹಳವಾಗಿ ಪ್ರಭಾವಿಸಿದವು.

ಯುವ ಐನ್‌ಸ್ಟೈನ್ ತನ್ನ ಮೊದಲ ಅದ್ಭುತವನ್ನು ದಿಕ್ಸೂಚಿ, 5 ನೇ ವಯಸ್ಸಿನಲ್ಲಿ ಗ್ರಹಿಸಿದನು. ಅದೃಶ್ಯ ಶಕ್ತಿಗಳು ಸೂಜಿಯನ್ನು ತಿರುಗಿಸಬಲ್ಲವು ಎಂದು ಅವನಿಗೆ ಅತೀಂದ್ರಿಯವಾಯಿತು. ಇದು ಕಾಣದ ಶಕ್ತಿಗಳ ಮೇಲೆ ಆಜೀವ

ಮೋಹಕ್ಕೆ ಕಾರಣವಾಗುತ್ತದೆ. ಎರಡನೆಯ ಆಶ್ಚರ್ಯವು 12 ನೇ ವಯಸ್ಸಿನಲ್ಲಿ ಜ್ಯಾಮಿತಿಯ ಪುಸ್ತಕವನ್ನು ಕಂಡುಹಿಡಿದನು, ಅದನ್ನು ಅವನು ಪೂಜಿಸಿದನು, ಅದನ್ನು ಅವನ "ಪವಿತ್ರಜ್ಯಾಮಿತಿ ಪುಸ್ತಕ" ಎಂದು ಕರೆದನು.

**ಐನ್‌ಸ್ಟೈನ್‌ನ ಮಹಾನ್ವೇಷಣೆಗಳು :**

ಐನ್‌ಸ್ಟೈನ್ ಒಟ್ಟಾರೆ ತಮ್ಮ ಜೀವಿತಾವಧಿಯಲ್ಲಿ 300ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ಮತ್ತು ಇತರ 150 ಕ್ಕೂ ಹೆಚ್ಚು ಪ್ರಬಂಧಗಳನ್ನು ಬರೆದಿದ್ದಾರೆ. ಭಾರತದ ಸತ್ಯೇಂದ್ರನಾಥ್ ಬೋಸ್ ಜೊತೆಗೂಡಿ ನೀಡಿದ 'ಬೋಸ್–ಐನ್‌ಸ್ಟೈನ್ ಸ್ಟಾಟಿಸ್ಟಿಕ್ಸ್' ಸೇರಿದಂತೆ 'ಐನ್‌ಸ್ಟೈನ್ ರೆಫ್ರಿಜರೇಟರ್', 'ಐನ್‌ಸ್ಟೈನ್–ಕಾರ್ಟನ್ ಸಿದ್ಧಾಂತ', 'ಐನ್‌ಸ್ಟೈನ್ –ಇನ್ಫೆಲ್ಡ್–ಹಾಫ್ಮನ್ ಇಕ್ವೇಷನ್ಸ್', 'ಐನ್‌ಸ್ಟೈನ್ –ಪೊಡೊಲೊಸ್ಕಿ–ರೋಸೆನ್ ಪ್ಯಾರಾಡಾಕ್ಸ್' ಇವುಗಳಲ್ಲಿ ಪ್ರಮುಖವಾದವು. ಇರ್ವಿನ್ ಶ್ರೋಡಿಂಗರ್'ಗೆ ಸಂಶೋಧನೆಗೆ ಸೂಚಿಸಿದ್ದು ಐನ್‌ಸ್ಟೈನ್ ಹಿರಿಮೆಗಳಲ್ಲೊಂದು.

**ನೊಬೆಲ್ ಸಮಿತಿಗೂ ಅರ್ಥವಾಗಿರಲಿಲ್ಲ :**

ತಮ್ಮ ಅದ್ಭುತ ಸಂಶೋಧನೆಯ ಹೊರತಾಗಿಯೂ ಐನ್‌ಸ್ಟೈನ್‌ಗೆ ಸಾಪೇಕ್ಷ ಸಿದ್ಧಾಂತಕ್ಕೆ ನೊಬೆಲ್ ಪ್ರಶಸ್ತಿ ಸಿಗಲೇ ಇಲ್ಲ. ಏಕೆಂದರೆ ಸಾಪೇಕ್ಷ ಸಿದ್ಧಾಂತ ನೊಬೆಲ್ ಸಮಿತಿಯವರಿಗೂ ಅರ್ಥವಾಗಿರಲಿಲ್ಲ. ಇದರ ಬದಲಾಗಿ ಇದರ ಮುಂದೆ ಚಿಲ್ಲರೆ ಎನಿಸಬಹುದಾದ 'ಫೋಟೋ ಎಲೆಕ್ಟ್ರಿಕ್ ಎಫೆಕ್ಟ್'ಗೆ ಅದೂ 16 ವರ್ಷ ಬಿಟ್ಟು 1921ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಯಿತು. ವಿಚಿತ್ರ ಎಂದರೆ ಅವರ ಕೆಲವು ಥಿಯರಿಗಳು ಸಾಕ್ಷವಿಲ್ಲದೇ ಹಾಗೇ ಉಳಿದುಕೊಂಡಿದ್ದವು. ಅವು ಸತ್ಯವೋ ಸುಳ್ಳೋ ಎಂದು ಹೇಳಲು ಸಾಮಾನ್ಯರು ಬಿಡಿ ವಿಶ್ವದ ಯಾವ ಘಟಾನುಘಟಿ ವಿಜ್ಞಾನಿಗಳಿಗೂ ಸಾಧ್ಯವಾಗಿರಲಿಲ್ಲ.

**ನಾಲಿಗೆ ಪೋಸು ಫೇಮಸ್ಸು :**

ಐನ್‌ಸ್ಟೈನ್ ಅವರ ಜನಪ್ರಿಯ ಚಿತ್ರವೆಂದರೆ ಅವರು ತಮ್ಮ ನಾಲಗೆಯನ್ನು ಹೊರಗೆ ಚಾಚಿ ಪೋಸು ನೀಡಿದ್ದು. ಐನ್‌ಸ್ಟೈನ್ ಚಿಕ್ಕ ಹುಡುಗನಂತೆ ವರ್ತಿಸಿದ್ದ ಈ ಚಿತ್ರ ತೆಗೆದಿದ್ದು ಐನ್‌ಸ್ಟೈನ್ 72ನೇ ಹುಟ್ಟುಹಬ್ಬದಂದು. ಐನ್‌ಸ್ಟೈನ್‌ಗೆ ಗೌರವ ಸೂಚಿಸಲು ಪ್ರಿನ್ಸ್‌ಟನ್ ಕ್ಲಬ್‌ನಲ್ಲಿ ಸಮಾರಂಭ ಆಯೋಜನೆಯಾಗಿತ್ತು. ಅವತ್ತು ಸ್ನೇಹಿತರು, ಸಹೋದ್ಯೋಗಿಗಳೆಲ್ಲಾ ಜಮಾಯಿಸಿದ್ದರು. ಅಲ್ಲಿಯೇ ಸಾಕಷ್ಟು ಫೋಟೋಗಳಿಗೆ ಪೋಸ್ ನೀಡಿ ನಕ್ಕು ನಕ್ಕು ವಿಜ್ಞಾನಿಗೆ ಸುಸ್ತಾಗಿತ್ತು. ಪಾರ್ಟಿ ಮುಗಿದ ಬಳಿಕ ಮನೆಗೆ ಹೊರಡಲು ಸ್ನೇಹಿತರೊಬ್ಬರ ಕಾರು ಹತ್ತಿದ ಮೇಧಾವಿಯನ್ನು ಫೋಟೊಗ್ರಾಫರ್‌ಗಳು ಬಿಡಲಿಲ್ಲ. ಮತ್ತಷ್ಟು ಫೋಟೋ ತೆಗೆಯಲು ಮುಂದಾದಾಗ ನಕ್ಕು ಸುಸ್ತಾಗಿದ್ದ ಐನ್‌ಸ್ಟೈನ್ ನಾಲಗೆಯನ್ನು ಹೊರಗೆ ಚಾಚಿ ಪೋಸು ನೀಡಿದರು.

**ಸಾಕ್ಸ್ ಹಾಕಲೇ ಇಲ್ಲ :**

ಐನ್‌ಸ್ಟೈನ್ ಅವರ ವಿಚಿತ್ರ ಡ್ರೆಸ್ಸಿಂಗ್ ಅವರ ಹೈಲೆಟ್ ಆಗಿತ್ತು. ಆದರೆ ಅವರ ಕೆದರಿದ ಕೂದಲೂ ಕೂಡ ಜನರನ್ನು ಆಕರ್ಷಿಸಿದೆ. ಅಷ್ಟೇ ಅಲ್ಲ ಅವರು ಎಂದೂ ಕೂಡ ಶೂ ಧರಿಸುವಾಗ ಸಾಕ್ಸ್ ಹಾಕುತ್ತಿರಲಿಲ್ಲವಂತೆ.. ಅದೂ ಕೂಡ ಹೆಚ್ಚಿನವರನ್ನು ಆಕರ್ಷಿಸಿದೆ. ವಿಜ್ಞಾನಿ ಐನ್‌ಸ್ಟೈನ್ ಅವರಿಗೆ ಸಾಕ್ಸ್ ಎಂದರೆ ಕಿರಿಕಿರಿ ಮಾಡುವ ಮತ್ತು ನೋವುಂಟು ಮಾಡುವ ವಸ್ತುವಾಗಿತ್ತು.

**ಸಂಗೀತ ಪ್ರಿಯ :**

ಐನ್‌ಸ್ಟೈನ್ ಅವರ ತಾಯಿ ಪೈಂಟಿಸ್ಟ್. ಆಕೆ ತನ್ನ ಮಗ ಮ್ಯೂಸಿಕ್‌ನ್ನು ಇಷ್ಟಪಡಬೇಕು ಮತ್ತು ಕಲಿಯಬೇಕು ಎಂದು ಬಯಸಿದ್ದರು. ಅಲ್ಬರ್ಟ್ ಐನ್‌ಸ್ಟೈನ್ ಚಿಕ್ಕವರಿದ್ದಾಗ ವಾಯಲಿನ್ ಕಲಿಯುವುದನ್ನು ಇಷ್ಟಪಡಲೇ ಇಲ್ಲ. ಆದರೆ ಟೀನೇಜ್‌ಗೆ ಕಾಲಿಟ್ಟ ಮೇಲೆ ಅವರು ವಯಲಿನ್ ಕಲಿತದ್ದು ಮಾತ್ರವಲ್ಲ ಹಾಡುವುದೂ ಕೂಡ ತಿಳಿದಿತ್ತು. ಮ್ಯೂಸಿಕ್ ಅನ್ನು ಬಹಳವಾಗಿ ಇಷ್ಟಪಟ್ಟರು. ಐನ್‌ಸ್ಟೈನ್‌ಗೆ ವಯೋಲಿನ್ ಮತ್ತು ಸಂಗೀತ ಎಂದರೆ ಅತೀವ ಮೋಹ. ಒಂದೊಮ್ಮೆ ನಾನು ವಿಜ್ಞಾನಿಯಾಗದಿದ್ದರೆ ಸಂಗೀತಗಾರನಾಗುತ್ತಿದ್ದೆ ಎಂದು ಸ್ವತಃ ಐನ್‌ಸ್ಟೈನ್ ಹೇಳಿಕೊಂಡಿದ್ದರು.

**ನೌಕಾಯಾನ :**

ನೌಕಾಯಾನ ಅಂದರೆ ಐನ್‌ಸ್ಟೈನ್ ಅವರಿಗೆ ಇಷ್ಟವಾಗುತ್ತಿತ್ತು. ಹಾಗಂತ ಅವರು ಅಷ್ಟೇನು ಉತ್ತಮ ನಾವಿಕರಾಗಿರಲಿಲ್ಲ. ದೋಣಿ ಹಾಳಾದರೆ ಅಕ್ಕಪಕ್ಕದವರು ಅದನ್ನು ಸರಿಪಡಿಸಿಕೊಡಬೇಕಿತ್ತು. ಅಷ್ಟೇ ಅಲ್ಲ ಅವರು ತಮ್ಮ ಜೀವನದುದ್ದಕ್ಕೂ ಈಜುವುದನ್ನು ಕಲಿಯಲೇ ಇಲ್ಲವಂತೆ. ಹಾಗಂತ ಅವರು ನೌಕಾಯಾನ ಕೈಗೊಳ್ಳುವುದನ್ನು ತಡೆಯುವುದಕ್ಕೆ ಸಾಧ್ಯವಾಗಿಲ್ಲ.

**ರೆಫ್ರಿಜರೇಟರ್ ಸಂಶೋಧನೆ :**

ಐನ್‌ಸ್ಟೈನ್ ಅವರು ಅವರ ಸೀನಿಯರ್ ಆಗಿದ್ದ ಲಿಯೋ ಸಿಜಾರ್ಡ್ ಅವರ ಜೊತೆಗೆ ರೆಫ್ರಿಜರೇಟರ್ ಅನ್ನು ಕೂಡ ಸಂಶೋಧನೆ ಮಾಡಿದ್ದರು. ಎರಡು ದಶಕಗಳ ನಂತರ ಅವರ ಥಿಯರಿಯನ್ನು ಅವರು ಪ್ರಕಟಿಸಿದರು. 1930 ರಲ್ಲಿ ಈ ರೆಫ್ರಿಜರೇಟರ್ ಅನ್ನು ಪೇಟೆಂಟ್ ಪಡೆಯಲಾಯಿತು ಮತ್ತು ಕೂಡಲೇ ಅದರ ಅಪ್‌ಡೇಟ್ ಆಗಿರುವ ವರ್ಷನ್ ಕೂಡ ಬಂತು.

**ಅಧ್ಯಕ್ಷರಾಗುವ ಆಫರ್ ಬಿಟ್ಟಿದ್ದರು :**

ಇಸ್ರೆಲ್‌ನ ಮೊದಲ ಅಧ್ಯಕ್ಷ ಚೈಮ್ ವಿಜ್ಮನ್ ಅವರು 1952, ನವೆಂಬರ್ 9 ರಂದು ಮೃತಪಟ್ಟ ನಂತರ ಇಸ್ರೆಲ್‌ನ ಎರಡನೇ ಅಧ್ಯಕ್ಷರಾಗುವಂತೆ ಆಲ್ಬರ್ಟ್ ಐನ್‌ಸ್ಟೈನ್ ಅವರಿಗೆ ಆಫರ್ ಬಂದಿತ್ತು. ಆದರೆ 73 ವರ್ಷದವರಾಗಿದ್ದ ಐನ್‌ಸ್ಟೈನ್ ನಾಜೂಕಿನಿಂದಲೇ ಅವರಿಗೆ ಬಂದ ಆಫರ್‌ನ್ನು ನಿರಾಕರಿಸಿದ್ದರು. ಅದಕ್ಕೆ ಕಾರಣವನ್ನು ಕೇಳಿದಾಗ ಅವರು "ನೈಸರ್ಗಿಕ ಯೋಗ್ಯತೆಯ ಕೊರತೆ ಮತ್ತು ಜನರನ್ನು ಸರಿಯಾಗಿ ನಿಭಾಯಿಸುವ ತಾಕತ್ತು ಇಲ್ಲದೇ ಇರುವುದು" ಎಂದು ತಿಳಿಸಿದ್ದರು. ಅಂದರೆ ನನಗೆ ವಯಸ್ಸಾಗಿದೆ ನಾನು ಅಧ್ಯಕ್ಷನಾಗುವುದು ಸೂಕ್ತವಲ್ಲ ಎಂದು ಹೇಳಿದ್ದರು.

**ಹೆಜ್ಜೆಗುರುತುಗಳು :**

1896 ರಲ್ಲಿ ಸ್ವಿಸ್ ಪಾಲಿಟೆಕ್ನಿಕ್‌ಗೆ ಪ್ರವೇಶ ಪಡೆದರು ಮತ್ತು 1901 ರಲ್ಲಿ ಭೌತಶಾಸ್ತ್ರ ಮತ್ತು ಗಣಿತವನ್ನು ಕಲಿಯಲು ಡಿಪ್ಲೊಮಾವನ್ನು ಪಡೆದರು. ಆದಾಗ್ಯೂ, ಐನ್‌ಸ್ಟೈನ್‌ಗೆ ಬೋಧನಾ ಸ್ಥಾನ ಸಿಗಲಿಲ್ಲ ಮತ್ತು ಅವರ ನೊಬೆಲ್ ಪ್ರಶಸ್ತಿ ಜೀವನಚರಿತ್ರೆಯ ಪ್ರಕಾರ 1901 ರಲ್ಲಿ ಬರ್ನ್ ಪೇಟೆಂಟ್ ಕಚೇರಿಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಪೇಟೆಂಟ್ ಅರ್ಜಿಗಳನ್ನು ವಿಶ್ಲೇಷಿಸುವ ನಡುವೆ, ಅವರು ವಿಶೇಷ ಸಾಪೇಕ್ಷತೆ ಮತ್ತು ಭೌತಶಾಸ್ತ್ರದ ಇತರ ಕ್ಷೇತ್ರಗಳಲ್ಲಿ ತಮ್ಮ ಕೆಲಸವನ್ನು ಅಭಿವೃದ್ಧಿಪಡಿಸಿದರು. ಅದು ನಂತರ ಅವರನ್ನು ಪ್ರಸಿದ್ಧಿಯನ್ನಾಗಿ ಮಾಡಿತು.

ಐನ್‌ಸ್ಟೈನ್ 1903 ರಲ್ಲಿ ಜುರಿಚ್‌ನಿಂದ ಮಿಲೇವಾ ಮಾರಿಕ್‌ರನ್ನು ಪ್ರೀತಿಸಿದರು. ಇವರಿಗೆ ಹ್ಯಾನ್ಸ್‌ಆಲ್ಬರ್ಟ್ ಮತ್ತು ಎಡ್ವರ್ಡ್ 1904 ಮತ್ತು 1910 ರಲ್ಲಿ ಜನಿಸಿದರು. ಐನ್‌ಸ್ಟೈನ್ 1919 ರಲ್ಲಿ ಮಾರಿಕ್‌ಗೆ ವಿಚ್ಛೇದನ ನೀಡಿ ಎಲ್ಸಾ ಲೊವೆಂಥಾಲ್ ಅವರನ್ನು ವಿವಾಹವಾದರು. 1955 ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು.

**ಬ್ರಿಲಿಯಂಟ್ ಬ್ರೈನ್ :**


ಐನ್‌ಸ್ಟೈನ್ ಅವರ ಹೆಸರನ್ನೇ ತೆಗೆದುಕೊಳ್ಳಿ. ಇಂಗ್ಲೀಷ್‌ನಲ್ಲಿ ಅವರ ಹೆಸರಿನ "Albert Einstein" ನಲ್ಲಿರುವ ಅಕ್ಷರಗಳನ್ನು ಆಚೀಚೆ ಮಾಡಿ ಪುನಃ ಜೋಡಿಸಿದರೆ 'Ten elite brains' ಎಂದು ಕೂಡ ಮಾಡಬಹುದು. ಇದರರ್ಥ 10 ಶ್ರೇಷ್ಠ ಮೆದುಳುಗಳು ಎಂದಾಗುತ್ತದೆ. ಇದಷ್ಟು ಸಮಂಜಸವಾಗಿಲ್ಲವೇ ಐನ್‌ಸ್ಟೈನ್ ಅವರಿಗೆ ನೀವೇ ಹೇಳಿ!

ॐ

**ಮನೆ ಮದ್ದು :**

**ಕುಂಬಳಕಾಯಿ ಬೀಜ ಹಾಗೂ ಬಾದಾಮಿಯನ್ನು ಅರೆದು ಜೇನಿನೊಂದಿಗೆ ಸೇವಿಸುತ್ತಿದ್ದರೆ ಶರೀರದ ತೂಕ ಮತ್ತು ಜ್ಞಾಪಕ ಶಕ್ತಿ ಹೆಚ್ಚಾಗುತ್ತದೆ.**

# ಮುಗ್ಧ ಭಕ್ತನಿಗೆ ಒಲಿದ  ಶ್ರೀರಾಮ



ಇದು ರಾಮಾಯಣದ ಕಾಲದಲ್ಲಿ ನಡೆದ ಒಂದು ಕಥೆ ಅಂತ ಕೇಳಿದ್ದೆ. ಅಯೋಧ್ಯ ನಗರದ ಒಂದು ಮನೆಯಲ್ಲಿ ಒಬ್ಬ ಮುಗ್ಧ ಹುಡುಗ ಕೆಲಸಕ್ಕೆ ಸೇರಿಕೊಂಡಿದ್ದ. ಆದರೆ ಅವನು ತುಂಬಾ ಸೋಮಾರಿ. ಏನೂ ಕೆಲಸ ಮಾಡುತ್ತಿರಲಿಲ್ಲ, ಆದರೆ ಅವನು ತಿಂಡಿಪೋತ, ಹಸಿವು ತಡೆಯಲು ಅವನಿಂದ ಸಾಧ್ಯವೇ ಇಲ್ಲ. ಕೆಲಸ ಮಾಡುತ್ತಿರಲಿಲ್ಲ. ತಿನ್ನುವುದು, ಮಲಗಿ ನಿದ್ರೆ ಮಾಡುವುದು ಮಾತ್ರ ಮಾಡುತ್ತಿದ್ದ. ಮನೆಯವರಿಗೆಲ್ಲ ಈ ಹುಡುಗ ಸೋಮಾರಿ, ಕೆಲಸ ಮಾಡುವುದಿಲ್ಲ ಬರೀ ತಿನ್ನುವುದು ಮಲಗುವುದು ಇಷ್ಟೇ ಎಂದು ತಿಳಿದು, ಅವನಿಗೆ 'ನೋಡಪ್ಪ ನಮ್ಮ ಮನೆಯಲ್ಲಿ ಇನ್ನು ಮೇಲೆ ನಿನ್ನನ್ನು ನೋಡಿಕೊಳ್ಳುವುದಕ್ಕೆ ಆಗುವುದಿಲ್ಲ. ಯಾವುದಾದರೂ ಆಶ್ರಮ ನೋಡಿಕೋ' ಎಂದು ಹೇಳಿದರು. ಹುಡುಗನು ಆಯಿತು ಎಂದನು. ಪಾಪ ನನ್ನಿಂದ ಇವರಿಗೆ ಏಕೆ ತೊಂದರೆ ನಾನು ಬೇರೆ ಕಡೆ ಗುರುಗಳ ಆಶ್ರಮವನ್ನು ನೋಡಿಕೊಂಡರಾಯಿತು ಎಂದು ಮನೆಯನ್ನು ಬಿಟ್ಟು ಹೊರಟನು.

ಯಾವ ಆಶ್ರಮ ಚೆನ್ನಾಗಿದೆ ಎಂದು ಹುಡುಕುತ್ತಾ ಇರುವಾಗ ಒಂದು ಆಶ್ರಮದ ಹೊರಗೆ ನಿಂತಿದ್ದ ಗುರುಗಳನ್ನು ನೋಡಿದ. ಅವರು ಬೆಳ್ಳಗೆ ಗುಂಡುಗುಂಡಗೆ ಚೆನ್ನಾಗಿದ್ದರು. ಅವನಿಗನ್ನಿಸಿತು ಈ ಆಶ್ರಮದಲ್ಲಿ ಬೇಕಾದಷ್ಟು ತಿನ್ನಲು ಇರುತ್ತದೆ ಎಂದುಕೊಂಡು ಆಶ್ರಮದ ಒಳಗೆ ಹೇಗಿದೆ ಎಂದು ನೋಡಲು ಬಂದನು. ಆಶ್ರಮದ ಒಳಗೆ ಕೆಲ ಶಿಷ್ಯರಿದ್ದರು. ಅವರೆಲ್ಲರೂ ಗುಂಡುಗುಂಡಗೆ ಕಳೆಕಳೆಯಾಗಿ ಚೆನ್ನಾಗಿದ್ದರು. ಹೋ ಈ ಆಶ್ರಮ ನನಗೆ ಸರಿಯಾದದ್ದು ಇಲ್ಲೆ ಇದ್ದರೆ ಬೇಕಾದಷ್ಟು ತಿನ್ನಲು ಸಿಗುತ್ತದೆ ಎಂದುಕೊಂಡು ಅಲ್ಲಿದ್ದ ಗುರುಗಳಿಗೆ ನಮಸ್ಕರಿಸಿ, ಗುರುಗಳೇ, ನಿಮ್ಮ ಆಶ್ರಮದಲ್ಲಿರಲು ನಾನು ಬರುತ್ತೇನೆ ಆಗಬಹುದೇ ಎಂದನು. ಗುರುಗಳು ಹುಡುಗನನ್ನು ನೋಡಿ ಆಯಿತು ಸೇರಿಕೊ ಎಂದರು. ಪುನಹ ಹುಡುಗ, ಗುರುಗಳೇ ಇಲ್ಲಿ ತಿನ್ನಲು ಬೇಕಾದಷ್ಟು ಸಿಗುತ್ತದೆ ಅಲ್ಲವೇ ಎಂದನು. ಹೊ ಹೋ ನೀನು ಎಷ್ಟು ಬೇಕಾದರೂ ತಿನ್ನಬಹುದು ಸಿಗುತ್ತದೆ ಎಂದರು. ಅವನಿಗೆ ಖುಷಿಯಾಯಿತು ಗುರುಗಳ ಆಶ್ರಮಕ್ಕೆ ಬಂದು ಸೇರಿಕೊಂಡ.

ಇವನು ಬಂದ ಎರಡು ದಿನದಲ್ಲೆ ಆ ತಿಂಗಳಲ್ಲಿ ಏಕಾದಶಿ ಬಂದಿತು. ಏನೂ ತಿಳಿಯದ ಮುಗ್ಧ ಬಾಲಕ ಸಾಮಾನ್ಯವಾಗಿ ನೋಡುತ್ತಾನೆ. ಆಶ್ರಮದಲ್ಲಿ ಯಾರು ಕಾಣುತ್ತಿಲ್ಲ, ಯಾರೂ ಯಾವ ಕೆಲಸವನ್ನು ಮಾಡುತ್ತಿರಲಿಲ್ಲ ಎಲ್ಲರೂ ಎಲ್ಲಿ ಹೋದರು ಎಂದುಕೊಂಡು ಎಲ್ಲಾ ಕಡೆ ನೋಡಿ ಕೊನೆಗೆ ಒಂದು ಕಡೆ ಬಂದ. ಅಲ್ಲಿ ಎಲ್ಲ ಶಿಷ್ಯರು ಸ್ನಾನಾದಿಗಳನ್ನು ಮುಗಿಸಿಕೊಂಡು ಸಂಧ್ಯಾವಂದನೆ ಜಪ–ತಪಗಳನ್ನು ಮಾಡುತ್ತಾ ಕುಳಿತಿದ್ದರು. ಅಲ್ಲಿದ್ದ ಶಿಷ್ಯರನ್ನು ಕೇಳಿದ. ಇಷ್ಟು ಹೊತ್ತಾದರೂ ಏನು ತಿನ್ನಲಿಕ್ಕೆ ಇಲ್ಲವೇ? ನನಗೆ ಹಸಿವಾಗುತ್ತಿದೆ ಎಂದನು. ಆಗ ಶಿಷ್ಯರಲ್ಲಿ ಒಬ್ಬ ಈ ದಿನ ಏಕಾದಶಿ ಏನು ಮಾಡುವುದಿಲ್ಲ ಎಂದನು. ಹಾಗಾದರೆ ಇಡೀ ದಿನ ಉಪವಾಸವಿರಬೇಕೇ ಎಂದು ಕೇಳಿದನು. ಹೌದು ಈ ದಿನ ಒಲೆಯನ್ನೇ ಹಚ್ಚುವುದಿಲ್ಲ. ಇದನ್ನು ಕೇಳಿದ ಹುಡುಗ ನನ್ನ ಕೈಯಲ್ಲಿ ಸಾಧ್ಯವಿಲ್ಲ. ನಾನು ಉಪವಾಸ ಇರಲಾರೆ ಎಂದನು. ಹಾಗಾದರೆ ಗುರುಗಳನ್ನು ಕೇಳು ಎಂದರು. ಆ ಹುಡುಗ ಗುರುಗಳ ಹತ್ತಿರ ಬಂದು ಗುರುಗಳೇ ಈ ದಿನ ಏಕಾದಶಿ ಅಂತ, ಏನೂ ಮಾಡುವುದಿಲ್ಲವಂತೆ. ಆದರೆ ನನಗೆ ಹಸಿವು ತಡೆಯಲಾಗುವುದಿಲ್ಲ ಏನಾದರೂ ಬೇಕು ಎಂದನು.

ಮುಗುಳ್ನಗುತ್ತಾ ಗುರುಗಳು, ಹೌದು ಮಗು ಈ ದಿನ ಏಕಾದಶಿ. ಉಪವಾಸ ಮಾಡಿದರೆ ಭಗವಂತನ ಕೃಪೆಗೆ ಪಾತ್ರರಾಗಬಹುದು. ಈ ಒಂದು ದಿನ ಉಪವಾಸ ಇರು ನಾಳೆ ನೀನು ಬೇಕಾದ್ದು ತಿನ್ನುವಂತೆ ಎಂದರು. ನನಗೆ ಆಗುವುದಿಲ್ಲ ಗುರುಗಳೇ ಎಂದನು. ಆಗ ಗುರುಗಳು, ನೋಡು ಮಗು ಆಶ್ರಮದಲ್ಲಿ ಈ ದಿನ ಏನು ಮಾಡುವುದಿಲ್ಲ ನಿನಗೆ ತಿನ್ನಬೇಕು ಎಂದಾದರೆ ಆಶ್ರಮದ ಮೇಲೆ ಒಂದು ಬೆಟ್ಟ ಇದೆ. ನೀನು ಇಲ್ಲಿಂದ ಅಡುಗೆ ಮಾಡಲು ಏನು ಬೇಕು ಆ ಸಾಮಾನುಗಳನ್ನು ತೆಗೆದುಕೊಂದು ಹೋಗಿ ಅಲ್ಲಿ ಮಾಡಿಕೊಂಡು ತಿನ್ನಬಹುದು ಎಂದರು. ಆಗಬಹುದು ಗುರುಗಳೇ ಎನ್ನುತ್ತಾ ಸದ್ಯ ಇಷ್ಟಾದರೂ ಇದೆಯಲ್ಲ ಅಂದುಕೊಂಡು ಎಲ್ಲಾ ಜೋಡಿಸಿಕೊಂಡು ಬೆಟ್ಟದ ಕಡೆ ಹೊರಟನು. ಹುಡುಗನನ್ನು ತಡೆದ ಗುರುಗಳು ನೋಡು ಮಗು ನೀನು ಏನು ಬೇಕಾದರೂ ಮಾಡಿಕೊಂಡು ತಿನ್ನು ಆದರೆ ಅಡಿಗೆಮಾಡಿ ಮುಗಿದ ಮೇಲೆ ಸಮರ್ಪಿಸಿ ತಿನ್ನಬೇಕು ಎಂದರು.

ಈ ಹುಡುಗ ಎಲ್ಲಾ ತೆಗೆದುಕೊಂಡು ಹೋಗಿ ಬೆಟ್ಟದಲ್ಲಿ ಅಡುಗೆ ಮಾಡಿದ. ಹುಡುಗ ಅದಕ್ಕೆ ಏನು ಬರುತ್ತೋ ಅದನ್ನೇ ಮಾಡಿಕೊಂಡಿದ್ದ. ನಂತರ ಮಾಡಿದ ಪದಾರ್ಥವನ್ನು ರಾಮನಿಗೆ ಸಮರ್ಪಿಸಿದರಾಯಿತು ಎಂದುಕೊಂಡು

ರಾಮ ನಾನು ಅಡಿಗೆ ಮಾಡಿದ್ದೇನೆ ಊಟಕ್ಕೆ ಬಾ ಎಂದು ಪ್ರಾರ್ಥಿಸಿದ. ಇದನ್ನು ಕೇಳಿದ ರಾಮನು ನಕ್ಕು, ಸೀತೆಯ ಹತ್ತಿರ ಬಂದು ನೋಡು ಸೀತೆ ಬಾಲಕ ಊಟಕ್ಕೆ ಕರೆದಿದ್ದಾನೆ ಹೋಗಿ ಊಟ ಮಾಡಿ ಬರೋಣಾ ಬಾ ಎನ್ನಲು, ಸೀತಾ–ರಾಮ ಇಬ್ಬರು ಊಟಕ್ಕೆ ಬಂದರು. ಹುಡುಗ ಸೀತಾಮಾತೆ ಬಂದಿದ್ದನ್ನು ಆಶ್ಚರ್ಯವಾಗಿ ನೋಡಿ, ನಾನು ಕರೆದಿದ್ದು ರಾಮನನ್ನು ಮಾತ್ರ ಈಗ ಜೊತೆಯಲ್ಲಿ

ಸೀತಮ್ಮನು ಬಂದಿದ್ದಾಳೆ. ನಾನು ಮಾಡಿರುವ ಅಡುಗೆ ಇಬ್ಬರಿಗೆ ಮಾತ್ರ ನನಗೆ ಊಟ ಸಿಕ್ಕಹಾಗೆ.. ಎಂದು ಮನದಲ್ಲಿ ಅಂದುಕೊಂಡನು. ರಾಮನು ಹುಡುಗನನ್ನು ನೋಡಿ ಯಾಕೆ ನಾನು ಬರಬಾರದಿತ್ತೆ ಎಂದು ಕೇಳಿದ. ಆ ಹುಡುಗ ಹಾಗೇನಿಲ್ಲ ಎಂದು ಹೇಳಿ ಸೀತೆಯನ್ನು ನೋಡುತ್ತಾ ಅಡುಗೆಯ ನೋಡುವುದು ಮಾಡಿದ. ಆದರೂ ರಾಮ–ಸೀತೆಯರನ್ನು ಕೂರಿಸಿ ಬಡಿಸಿದ. ರಾಮ ಸೀತೆ ಹೊಟ್ಟೆ ತುಂಬಾ ಊಟ ಮಾಡಿ ಹೊರಟರು. ಅಂದು ಅವನಿಗೆ ಏಕಾದಶಿಯೇ ಆಯಿತು.

ಹೀಗೆ ಮತ್ತೊಂದು ಏಕಾದಶಿ ಬಂದಿತು. ಈ ಸಾರಿ ಹುಡುಗ ಒಂದು ಉಪಾಯ ಮಾಡಿದ. ಮೂರು ಜನಕ್ಕಾಗುವಷ್ಟು ಅಡಿಗೆ ಮಾಡಿದ ಊಟದ ಹೊತ್ತಿಗೆ ರಾಮ ನೀನು ಬಾ ಜೊತೆಯಲ್ಲಿ ಸೀತಮ್ಮನು ಬರಲಿ ಎಂದು ಪ್ರಾರ್ಥಿಸಿದ. ಊಟದ ಸಮಯಕ್ಕೆ ಸರಿಯಾಗಿ ರಾಮ–ಸೀತೆ ಜೊತೆಗೆ ಲಕ್ಷ್ಮಣನು ಬಂದ. ಮತ್ತೆ ಹುಡುಗ ನಾನು ಕರೆದಿದ್ದು ರಾಮ ಸೀತೆ ಇಬ್ಬರನ್ನು ಮಾತ್ರ ಈಗ ಲಕ್ಷ್ಮಣನ ಸಮೇತ ಮೂರು ಜನ ಬಂದಿದ್ದಾರೆ. ಆಯ್ತು ಇವತ್ತು ನನಗೆ ಏಕಾದಶಿ ಗತಿ ಎಂದು ಮನದಲ್ಲಿ ಅಂದುಕೊಂಡ. ರಾಮ –ಸೀತೆ– ಲಕ್ಷ್ಮಣ ಮೂರು ಜನರನ್ನು ಕೂರಿಸಿ ಬಡಿಸಿದ ಸ್ವಲ್ಪವೂ ಉಳಿಯದಂತೆ ಮೂರು ಜನ ಹೊಟ್ಟೆ ತುಂಬಾ ಊಟ ಮಾಡಿ ಹೊರಟರು. ಈ ಬಾಲಕನಿಗೆ ಮತ್ತೆ ಏಕಾದಶಿಯೇ ಗತಿಯಾಯಿತು.

ಹೀಗೆ ಮತ್ತೊಂದು ಏಕಾದಶಿ ಬಂದಿತು. ಈ ಸಾರಿ ಹುಡುಗನು ಗುರುಗಳ ಹತ್ತಿರ ಗುರುಗಳೇ ನನಗೆ ಜಾಸ್ತಿ ಸಾಮಾಗ್ರಿಗಳು ಬೇಕು ಎಂದನು. ಆಯ್ತು ಅಗತ್ಯವಿರುವಷ್ಟು ತೆಗೆದುಕೊಂಡು ಹೋಗು ಎಂದರು. ಹುಡುಗ ನಾಲ್ಕು ಜನಕ್ಕೆ ಆಗುವಷ್ಟು ಸಾಮಾಗ್ರಿಗಳನ್ನು ತಂದು ಅಡಿಗೆ ಮಾಡಿ, ಪ್ರಾರ್ಥಿಸಿದ ರಾಮಾ ನೀನು ಬಾ, ಸೀತಮ್ಮ ನೀನು ಬಾ, ಜೊತೆಗೆ ಲಕ್ಷ್ಮಣನು ಬರಲಿ ಎಂದನು. ಊಟದ ಹೊತ್ತಿಗೆ ರಾಮ ಸೀತೆ ಲಕ್ಷ್ಮಣರ ಜೊತೆ ಹನುಮಂತನು ಬಂದನು. ಈ ಹುಡುಗ ಹನುಮಂತನನ್ನು ಮೇಲಿನಿಂದ ಕೆಳತನಕಾ ಮತ್ತೆ ನೋಡಿದ. ನಾನು ಕರೆದಿದ್ದು ರಾಮ ಸೀತೆ ಲಕ್ಷ್ಮಣಗೆ, ರಾಮ ಹನುಮಂತನನ್ನು ಕರೆದುಕೊಂಡು ಬಂದಿದ್ದಾನೆ. ಇವತ್ತು ನನಗೆ ಆಹಾರ ಸಿಕ್ಕ ಹಾಗೆ ಎಂದು ಮನಸ್ಸಿನಲ್ಲಿ ಅಂದುಕೊಂಡನು. ಹುಡುಗನನ್ನು ನೋಡಿದ ರಾಮ ಯಾಕಪ್ಪಾ ನಾವುಗಳು ಬರಬಾರದಿತ್ತೆ ಎಂದು ಕೇಳಿದ. ಇಲ್ಲ ಇಲ್ಲ ಹಾಗೇನು ಇಲ್ಲ ಎಂದು ಅವನು ಮಾಡಿದ ಅಡುಗೆಯನ್ನು ರಾಮ, ಸೀತೆ, ಲಕ್ಷ್ಮಣ, ಹನುಮಂತನಿಗೆ ಕೂರಿಸಿ ಬಡಿಸಿದ. ಎಲ್ಲರೂ ಹೊಟ್ಟೆ ತುಂಬಾ ಊಟ ಮಾಡಿ ಹೊರಟರು ಇವನಿಗೆ ಮತ್ತೆ ಏಕಾದಶಿ ಆಯಿತು.

ಈ ಸಾರಿ ಮತ್ತೆ ಏಕಾದಶಿ ಬಂದಿತು. ಗುರುಗಳಿಗೆ ಹೇಳಿದ. ಗುರುಗಳೇ ನನಗೆ ಅಷ್ಟು ಸಾಮಾನುಗಳು ಸಾಕಾಗುವುದಿಲ್ಲ ತುಂಬಾ ಬೇಕು ಎಂದನು. ಗುರುಗಳಿಗೆ ಆಶ್ಚರ್ಯವಾಯಿತು. ಹುಡುಗ ಎಷ್ಟು ತಿನ್ನುತ್ತಾನೆ. ಏನೇ ಮಾಡಿಕೊಂಡರು ನಾಲ್ಕೈದು ಸಲ ತಿಂದಾನು ಅಷ್ಟಕ್ಕಾದರೂ ಒಬ್ಬನಿಗೆ ಎಷ್ಟು ಬೇಕು ಎಂದುಕೊಂಡು ಹುಡುಗ ಕೇಳಿದ್ದಕ್ಕಿಂತ ಜಾಸ್ತಿ ಸಾಮಾನುಗಳನ್ನು ಕೊಟ್ಟರು. ಉಳಿದ ಶಿಷ್ಯರಿಗೆ, ಹುಡುಗ ಏನು ಮಾಡುತ್ತಾನೆ ಎಂದು ಮರೆಯಲ್ಲಿ ನಿಂತು ನೋಡಿಕೊಂಡು ಬರಲು ಹೇಳಿದರು. ಹುಡುಗ ಸಾಮಾನುಗಳನ್ನೆಲ್ಲ ತಂದು ಒಂದುಕಡೆ ಜೋಡಿಸಿಟ್ಟು, ತಾನು ಸುಮ್ಮನೆ ಕುಳಿತುಕೊಂಡ. ಊಟದ ಸಮಯ ಬಂದಿತು. ರಾಮ ನೀನು ಬಾ, ಸೀತಮ್ಮ ನೀನು ಬಾ, ಲಕ್ಷ್ಮಣ, ಹನುಮಂತ, ಭರತ, ಶತ್ರುಘ್ನನೂ ಬನ್ನಿ ಎಂದು ಪ್ರಾರ್ಥಿಸಿದ. ಮತ್ತೆ ತಾನು ಸುಮ್ಮನೆ ಕುಳಿತ. ಊಟದ ಸಮಯಕ್ಕೆ ಈ ಸಲ ಲಕ್ಷ್ಮಣ, ಹನುಮಂತ, ಭರತ, ಶತ್ರುಘ್ನ, ಕೌಸಲ್ಯೆ, ಕೈಕೆ, ಸುಮಿತ್ರಾ, ಹೀಗೆ ಎಲ್ಲ ಸಕುಟುಂಬ ಪರಿವಾರ ಸಮೇತ ರಾಮ–ಸೀತೆಯರು ಬಂದರು.

ರಾಮ ಬಂದು ನೋಡುತ್ತಾನೆ ಎಲ್ಲೂ ಮಾಡಿದ ಅಡುಗೆ ತಿಂಡಿ ಏನು ಕಾಣಲಿಲ್ಲ ಹುಡುಗನಿಗೆ ಯಾಕಪ್ಪ ಈ ದಿನ ಅಡಿಗೆ ಮಾಡಿಲ್ಲವೇ? ನನ್ನನ್ನು ಊಟಕ್ಕೆ ಯಾಕೆ ಕರೆದೆ ಎಂದು ಕೇಳಿದಾಗ, ಆ ಹುಡುಗ, ನೋಡು ರಾಮ ನಿಮಗೆಲ್ಲಾ ಏನೇನು ಬೇಕೋ ಅದನ್ನೆಲ್ಲಾ ಮಾಡಿಕೊಂಡು ಊಟ ಮಾಡಿ, ಅಲ್ಲೇ ಸಾಮಾನುಗಳನ್ನೆಲ್ಲ ಜೋಡಿಸಿಟ್ಟಿದ್ದೇನೆ ಎಂದನು. ರಾಮನು ನಕ್ಕು, ತನ್ನ ಪರಿವಾರದವರಿಗೆ ಅಡುಗೆ ಮಾಡಲು ಹೇಳಿದನು. ಸೀತೆ ತರಕಾರಿ ಹೆಚ್ಚಿದರೆ ಹನುಮಂತ ನೀರು ತರಲು ಹೋದ, ಲಕ್ಷ್ಮಣ ಒಲೆ ಹಚ್ಚಲು ಕುಳಿತ, ಹೀಗೆ ಒಬ್ಬೊಬ್ಬರು ಒಂದೊಂದು ಕೆಲಸ ಮಾಡುತ್ತಿದ್ದರು. ಜೋಡಿಸಿಟ್ಟ ಸಾಮಾನು ಹೊರತಾಗಿ ಇದಾವುದು ಶಿಷ್ಯರಿಗೆ ಕಾಣಲಿಲ್ಲ. ಇದನ್ನು ಹೋಗಿ ಗುರುಗಳಿಗೆ ಹೇಳಿದವು. ಈಗ ಗುರುಗಳೇ ಬೆಟ್ಟಹತ್ತಿ ಬಂದರು. ಬಂದು ನೋಡುತ್ತಾರೆ ಜೋಡಿಸಿಟ್ಟ ಸಾಮಾನುಗಳೆಲ್ಲ ಹಾಗೆ ಇದೆ. ಆ ಹುಡುಗ ಒಂದು ಕಡೆ ಕುಳಿತುಕೊಂಡಿತ್ತು. ಅವನನ್ನು ನೋಡಿ ಗುರುಗಳು ಯಾಕೋ ಅಷ್ಟೆಲ್ಲಾ ಸಾಮಾನು ಬೇಕು ಅಂತ ತಂದಿದಿಯಾ ಏನು ಮಾಡಿಲ್ಲವೇ ಎಂದು ಕೇಳಿದರು. ಹುಡುಗನು ಕೋಪದಿಂದ ನೋಡಿ ಗುರುಗಳೇ ನಾನೇನು ಮಾಡಿಕೊಳ್ಳಲಿ ಎಲ್ಲಾ ಅವರೇ ಮಾಡಿಕೊಂಡು ಊಟ ಮಾಡುತ್ತಿದ್ದಾರೆ ಎಂದನು. ಗುರುಗಳು ನೋಡಿದರೆ ಮತ್ತೆ ಏನು ಕಾಣಲಿಲ್ಲ ಬರೀ ಸಾಮಾಗ್ರಿಗಳು ಮಾತ್ರ ಇತ್ತು. ಎಲ್ಲಪ್ಪ ಯಾರು ಕಾಣುತ್ತಿಲ್ಲವಲ್ಲ ಎಂದರು. ಹುಡುಗನಿಗೆ ಇನ್ನೂ ಸಿಟ್ಟು ಬಂತು. ರಾಮ ನಿನಗೆ ಗೊತ್ತಾಗಲ್ಲವಾ ನಮ್ಮ ಗುರುಗಳು ಬಂದಿದ್ದಾರೆ. ಅವರಿಗೆ ಹೇಳು. ನಾವೇ ಅಡುಗೆ ಮಾಡಿಕೊಂಡು ಊಟ ಮಾಡುತ್ತಿದ್ದೇವೆ ಅಂತ. ನೀನು ಹಾಗೆ ಅಡಗಿಕೊಂಡು ಕುಳಿತರೆ ಎಲ್ಲವನ್ನೂ ನಾನೇ ತಿಂದಿದ್ದೇನೆ ಅಂತ ಗುರುಗಳು ತಿಳಿದುಕೊಳ್ಳುತ್ತಾರೆ ಎಂದನು. ರಾಮನು ನಕ್ಕು ಗುರುಗಳಿಗೆ ತನ್ನ ಪರಿವಾರ ಸಮೇತ ದರ್ಶನ ಕೊಟ್ಟು ಮಾಯವಾದನು. ಗುರುಗಳು ದಿಗ್ಭ್ರಾಂತರಾದರು. ತುಂಬಿದ ಕಣ್ಣುಗಳಿಂದ ಓಡಿಬಂದು ಭಾವುಕರಾಗಿ ಆ ಹುಡುಗನನ್ನು ತಬ್ಬಿಕೊಂಡರು. ನಿನ್ನ ಮುಗ್ಧ ಮನಸ್ಸಿಗೆ ಏನು ಹೇಳಲಿ ಮಗು, ನಿನಗಿಂತ ಭಾಗ್ಯಶಾಲಿಗಳು ಯಾರು ಇಲ್ಲ. ಯಾವ ಉಪವಾಸ, ವ್ರತ –ಕಥೆ ಪೂಜೆ– ಪುನಸ್ಕಾರ, ಎಲ್ಲಕ್ಕಿಂತ ಭಗವಂತನಿಗೆ ನಿನ್ನಂತಹ ಮುಗ್ಧ ಮನಸ್ಸಿನ ಭಕ್ತರ ನಂಬಿಕೆ, ಪ್ರೀತಿ, ಎಲ್ಲಕ್ಕಿಂತ ಹೆಚ್ಚು ಎಂಬುದನ್ನು ಸಾಬೀತುಪಡಿಸಿದೆ. ನಿನಗೆ ಯಾವ ಗುರುಗಳ ಅವಶ್ಯಕತೆಯೂ ಇಲ್ಲ ಎಂದು ಮನತುಂಬಿ ಹರಸಿದರು. ॐ



# ಡಿ.ವಿ. ಗುಂಡಪ್ಪ



ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ, ಡಿ.ವಿ.ಗುಂಡಪ್ಪ, ಡಿ.ವಿ.ಜಿ ಎಂದು ಜನಪ್ರಿಯವಾಗಿ ಪ್ರಸಿದ್ಧರಾಗಿದ್ದರು, ಡಿವಿಜಿ ಅವರು ಭಾರತದ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಮುಳಬಾಗಲು/ಮುಳಬಾಗಿಲು ತಾಲೂಕಿನಲ್ಲಿ 1887 ರಲ್ಲಿ ಜನಿಸಿದರು. ಡಿವಿಜಿಯವರು ತಮ್ಮ ಪ್ರಾಥಮಿಕ ಶಾಲಾ ಶಿಕ್ಷಣವನ್ನು 1898 ರಲ್ಲಿ ಕನ್ನಡದಲ್ಲಿ ಪೂರ್ಣಗೊಳಿಸಿದರು. ಇವರು ಕನ್ನಡದ ಪ್ರಮುಖ ಲೇಖಕರು ಮತ್ತು ದಾರ್ಶನಿಕರಾಗಿದ್ದರು. ಅವರು ಮಂಕು ತಿಮ್ಮನ ಕಗ್ಗ, ಪದ್ಯಗಳ ಸಂಗ್ರಹಕ್ಕೆ ಹೆಸರುವಾಸಿಯಾಗಿದ್ದಾರೆ.ಇವರು ಸ್ವಂತ ಆಸಕ್ತಿಯಿಂದ ಸಂಸ್ಕೃತವನ್ನು ಕಲಿಯುವುದರ ಜೊತೆಗೆ ಇಂಗ್ಲಿಷ್‌ನಲ್ಲಿ ಮೂಲಭೂತ ಶಿಕ್ಷಣವನ್ನೂ ಪಡೆದರು. ನಂತರ ಅವರು ಮಹಾರಾಜ ಪ್ರೌಢಶಾಲೆಯಿಂದ ಮೈಸೂರಿನಲ್ಲಿ ಶಿಕ್ಷಣ ಮುಂದುವರಿಸಿದರು. ಡಿವಿಜಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗ ದಿದ್ದರೂ (10 ನೇ ತರಗತಿ), ಅವರು ಮೆಟ್ರಿಕ್ಯುಲೇಷನ್ ನಂತರ ಔಪಚಾರಿಕ ಶಿಕ್ಷಣವನ್ನು ನಿಲ್ಲಿಸಿದರು, ಅವರ ಪ್ರಬಂಧಗಳನ್ನು ಪದವಿ ಪಠ್ಯ ಪುಸ್ತಕಗಳು ಮತ್ತು ಪಿಎಚ್‌ಡಿ ಪ್ರಬಂಧಗಳ ಅಧ್ಯಾಯಗಳಾಗಿ ಆಯ್ಕೆ ಮಾಡಲಾಯಿತು.

ಡಿ.ವಿ.ಜಿ ಯವರು ವೇದ, ವೇದಾಂತ, ಬ್ರಹ್ಮಸೂತ್ರ, ಧರ್ಮಸೂತ್ರ, ಸಂಸ್ಕೃತ, ಕನ್ನಡ ಮತ್ತು ಇತರ ಭಾರತೀಯ ಭಾಷೆಗಳು, ಕರ್ನಾಟಕದ ರಾಜಕೀಯ ಪರಿಸ್ಥಿತಿ, ರಾಮಾಯಣ ಮತ್ತು ಮಹಾಭಾರತ, ಎಂಜಿನಿಯರಿಂಗ್, ಸ್ವಾತಂತ್ರ್ಯ ಹೋರಾಟಗಾರರು, ಪಾಶ್ಚಾತ್ಯ ಸಾಹಿತ್ಯ, ಇಸ್ಲಾಮಿಕ್ ಸಾಹಿತ್ಯ ಈ ಕ್ಷೇತ್ರಗಳಲ್ಲಿ ಅಪಾರ ಜ್ಞಾನ ಹೊಂದಿದ್ದರು:

ಇವರ ಮಂಕುತಿಮ್ಮನ ಕಗ್ಗವನ್ನು ನೊಬೆಲ್ ಪ್ರಶಸ್ತಿ ವಿಜೇತ ವಸ್ತು ಎಂದು ಪರಿಗಣಿಸಲಾಗುತ್ತದೆ, ಇದನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದಾರೆ. ಈ ಕೃತಿಯ ಹಿರಿಮೆ ಏನೆಂದರೆ– ಕವಿಯ ಆಲೋಚನೆಗಳನ್ನು ತನ್ನದೇ ರೀತಿಯಲ್ಲಿ ಅರ್ಥೈಸಲು, ಕವಿತೆಗಳ ಮೂಲಕ ಓದುಗ ತನ್ನನ್ನು ತಾನು ನೋಡುವಂತೆ ಮಾಡುತ್ತದೆ. ಈ ಚಿಕ್ಕ ಸಾಲುಗಳಲ್ಲಿ ಅಡಗಿರುವ ತತ್ವಶಾಸ್ತ್ರವು ಸಮಾಜದ ಯಾವುದೇ ವರ್ಗಕ್ಕೆ ಅವರ ಧರ್ಮ, ಸ್ಥಾನಮಾನ, ಅರ್ಹತೆ ಇತ್ಯಾದಿಗಳನ್ನು ಲೆಕ್ಕಿಸದೆ ಸರಿಹೊಂದುತ್ತದೆ. ಮೂಲತಃ ಇದು ಇಡೀ ಮಾನವಕುಲಕ್ಕೆ ಸಂಬಂಧಿಸಿದೆ, ಇದು ಡಿವಿಜಿ ಅವರ ಹೆಚ್ಚಿನ ಸಾಹಿತ್ಯ ಕೃತಿಗಳ ಅಗಾಧತೆ ಮತ್ತು ಆಳವಾಗಿದೆ.

ಅವರು ಬೆಂಗಳೂರಿನ ಗೋಕಲೆ ಸಾರ್ವಜನಿಕ ವ್ಯವಹಾರಗಳ ಸಂಸ್ಥೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಕರ್ನಾಟಕದ ಆಗಿನ ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ನಿಟ್ಟೂರು ಶ್ರೀನಿವಾಸ ರಾವ್, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಾಹಿತ್ಯ ಪ್ರತಿಭೆ, ಪ್ರೊ.ವಿ.ಟಿ. ಶ್ರೀನಿವಾಸನ್, ಬೆಂಗಳೂರಿನ ವಿಜಯಾ ಕಾಲೇಜಿನ ಅಂದಿನ ಪ್ರಾಂಶುಪಾಲರು ಅವರ ನಿಕಟವರ್ತಿಗಳಲ್ಲಿ ಕೆಲವರು.

**ವೃತ್ತಿ** : ಡಿವಿಜಿ ಯವರು ತೆಲುಗು, ತಮಿಳು ಭಾಷಾ ಜ್ಞಾನವನ್ನೂ ಬೆಳೆಸಿಕೊಂಡು. ಪತ್ರಿಕಾ ಕ್ಷೇತ್ರದಿಂದ ತಮ್ಮ ಜೀವನವನ್ನು ಆರಂಭಿಸಿದ ಇವರು 1907 ರಲ್ಲಿ ಸ್ವತಃ 'ಭಾರತಿ' ಎಂಬ ಕನ್ನಡ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಬೇರೆ ಬೇರೆ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಆನಂತರ 'ಕರ್ನಾಟಕ' ಎಂಬ ಇಂಗ್ಲಿಷ್ ವಾರಾರ್ಧ ಪತ್ರಿಕೆಯನ್ನು ಸ್ಥಾಪಿಸಿದರು. 1928ರಲ್ಲಿ ಬಾಗಲಕೋಟೆಯಲ್ಲಿ ನಡೆದ ಕರ್ನಾಟಕ ವೃತ್ತ ಪತ್ರಕರ್ತರ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಪ್ರಶಸ್ತಿಗಳು ಮತ್ತು ಗೌರವಗಳು** ಡಾ. ಡಿವಿಜಿಗೆ 1974 ರಲ್ಲಿ ಭಾರತ ಸರ್ಕಾರವು ಪದ್ಮಭೂಷಣ ಪ್ರಶಸ್ತಿ ನೀಡಿತು. ಮುಖ್ಯಮಂತಿ ಶ್ರೀ ವೀರೇಂದ್ರ ಪಾಟೀಲ್ ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯವು 1970 ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗಳಿಗಾಗಿ ಗೌರವಿಸಿತು ಮತ್ತು ರೂ. 90,000 ಗಳನ್ನು ಬಹುಮಾನವಾಗಿ ನೀಡಿತು. ಡಾ ಡಿವಿಜಿ ಅವರು ಇಡೀ ಪ್ರಶಸ್ತಿ ಹಣವನ್ನು ಭಾರತದ ಬಸವನಗುಡಿಯ ಬುಲ್ ಟೆಂಪಲ್ ರಸ್ತೆಯಲ್ಲಿರುವ ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ (ಜಿಐಪಿಎ) ಸ್ಥಾಪನೆಗೆ ದಾನ ಮಾಡಿದರು.

ಡಿವಿಜಿ ಅವರು 7 ಅಕ್ಟೋಬರ್ 1975 ರಂದು ನಿಧನರಾದರು. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಹಲವಾರು ಮಂತ್ರಿಗಳು ಬಸವನಗುಡಿಯ ನಾಗಸಂದ್ರ ರಸ್ತೆಯಲ್ಲಿ (ಈಗ ಡಿವಿಜಿ ರಸ್ತೆ ಎಂದು ಕರೆಯುತ್ತಾರೆ) ಅವರ ನಿವಾಸದಲ್ಲಿ ಅಂತಿಮ ನಮನ ಸಲ್ಲಿಸಿದರು. ॐ






# ಅಧಿಕ ರಕ್ತದೊತ್ತಡ ಗಂಭೀರವಾಗುವರೆಗೆ ಕಾಯುವುದು ಸರಿಯೇ?

– ಡಾ. ಮಧುರಾ. ಎಂ.ಎಂ.
ಸಹಾಯಕ ಪ್ರಾಧ್ಯಾಪಕರು,
ಸಮುದಾಯ ವೈದ್ಯ ಶಾಸ್ತ್ರ ವಿಭಾಗ

ಅಧಿಕ ರಕ್ತದೊತ್ತಡ ಅಥವಾ 'ಹೈ ಬಿಪಿ' ಇದ್ದಾಗ ಬಹುತೇಕ ಬಾರಿ ಯಾವುದೇ ಲಕ್ಷಣಗಳು ಇರುವುದಿಲ್ಲ. ಇದರಿಂದ ಅನೇಕರು ಅದರ ಸಮಸ್ಯೆಗಳನ್ನು ಗುರುತಿಸುವಲ್ಲಿ ತಡ ಮಾಡುತ್ತಾರೆ. ಆದರೆ ಅಧಿಕ ರಕ್ತದೊತ್ತಡವನ್ನು ಗಮನಿಸದೆ ಇದ್ದರೆ ಇದು ಜೀವಕ್ಕೆ ಹಾನಿಕಾರಕ. ಹಾಗಾಗಿ ಈ ಸಣ್ಣ ಪುಟ್ಟ ಲಕ್ಷಣಗಳನ್ನು ತಿಳಿಯುವುದು ಅತ್ಯವಶ್ಯಕ. ಅಧಿಕ ರಕ್ತದೊತ್ತಡ ಇತ್ತೀಚಿನ ದಿನಗಳಲ್ಲಿ ಸರ್ವೇಸಾಮಾನ್ಯ ಕಾಯಿಲೆ ಎನ್ನುವಂತಾಗಿದೆ. ಭಾರತದಾದ್ಯಂತ ಉಂಟಾಗುವ ಶೇಕಡಾ 8ರಷ್ಟು ಸಾವುಗಳಿಗೆ ಸಾಂಕ್ರಾಮಿಕವಲ್ಲದ ಕಾರಣಗಳೇ ಮುಖ್ಯವಾದವು ಎಂದು ವಿಶ್ವ ಆರೋಗ್ಯ ಸಂಸ್ಥೆ ಕೂಡಾ ಹೇಳಿದೆ. ಅಧಿಕ ರಕ್ತದೊತ್ತಡ ಇದರಲ್ಲೊಂದು. ಅನೇಕ ಹೃದಯ ಸಂಬಂಧಿ ಸಮಸ್ಯೆಗಳಿಗೆ ಅಧಿಕ ರಕ್ತದೊತ್ತಡವೇ ಕಾರಣ ಎನ್ನಲಾಗಿದೆ. ಸಾಮಾನ್ಯವಾಗಿ ಬಿಪಿ ಅಥವಾ ರಕದೊತ್ತಡ 120/80 ಇರಬೇಕಾದ್ದು 130/90 ರಷ್ಟು ತಲುಪಿದರೆ ಅಧಿಕ ರಕ್ತದೊತ್ತಡ ಎನ್ನಬಹುದು. ರಕ್ತದೊತ್ತಡವನ್ನು ನಿಯಂತ್ರಣದಲ್ಲಿ ಇಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

**ಅಗತ್ಯ ಕ್ರಮಗಳು**

ಎಲ್ಲಾ ವಯೋಮಾನದವರಿಗೂ ವಾರಕ್ಕೆ ಕನಿಷ್ಠ ನೂರೈವತ್ತು ನಿಮಿಷಗಳ ವ್ಯಾಯಾಮ ಅತ್ಯಗತ್ಯ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವ ಮಂದಿಗೆ ಈ ನೂರೈವತ್ತು ನಿಮಿಷಗಳ ವ್ಯಾಯಾಮ ಕಡ್ಡಾಯ. ಸಂಶೋಧನೆಗಳ ಪ್ರಕಾರ ಈ ನಿರ್ಧಿಷ್ಟ ಅವಧಿಯ ವ್ಯಾಯಾಮ ಅಧಿಕ ರಕ್ತದೊತ್ತಡವನ್ನು ಶೇಖಡಾ 15ರಷ್ಟು ಕಡಿಮೆಗೊಳಿಸುತ್ತದೆ. ದೈಹಿಕ ವ್ಯಾಯಾಮ ಹೃದಯಕ್ಕೆ ಶಕ್ತಿ ನೀಡುತ್ತದೆ. ಬಲಿಷ್ಠ ಹೃದಯ ಹೆಚ್ಚು ರಕ್ತವನ್ನು ಪಂಪ್ ಮಾಡಬಲ್ಲದು, ಆ ಮೂಲಕ ಅಪಧಮನಿಗಳ ಮೇಲೆ ಒತ್ತಡತನ್ನು ಕಡಿಮೆ ಮಾಡಬಲ್ಲದು. ವ್ಯಾಯಾಮವು ರಕ್ತದೊತ್ತಡದ ಪ್ರಮಾಣವನ್ನು ಕಡಿಮೆ ಮಾಡುವುದು ಮಾತ್ರವಲ್ಲದೇ, ಮಾನಸಿಕ ಆರೋಗ್ಯದಲ್ಲಿ ಸುಧಾರಣೆ ತರುತ್ತದೆ.

**ಸೋಡಿಯಂ ಸೇವನೆ ಕಡಿಮೆ ಇರಲಿ** : ಅಧಿಕ ಒತ್ತಡದಿಂದ ಬಳಲುತ್ತಿರುವ ರೋಗಿಗಳು ಸಂಸ್ಕರಿಸಿದ ಆಹಾರವನ್ನು ತಿನ್ನಬಾರದು. ಅವು ಸಂಸ್ಕರಿತ ಕಾರ್ಬೋಹೈಡ್ರೇಟ್‌ಗಳನ್ನು ಹೊಂದಿರುತ್ತವೆ ಮಾತ್ರವಲ್ಲದೆ, ಚಿಪ್ಸ್ ಮತ್ತು ಇತರ ತಿನಿಸುಗಳು ಹೆಚ್ಚುವರಿ ಉಪ್ಪನ್ನು ಹೊಂದಿರುತ್ತವೆ. ಹಾಗೂ ಅದು ಅಧಿಕ ರಕ್ತದೊತ್ತಡದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಸಂಸ್ಕರಿಸಿದ ಆಹಾರಗಳನ್ನು ಕಡಿಮೆ ಮಾಡಿ, ಸಂಕೀರ್ಣ ಸಕ್ಕರೆ (ಕಾಂಪ್ಲೆಕ್ಸ್ ಕಾರ್ಬೋಹೈಡ್ರೇಟ್) ಮತ್ತು ಕೊಬ್ಬನ್ನು ಕಡಿಮೆ ಸೇವಿಸುವುದು ಸಹಾಯಕಾರಿ.

**ಪೊಟಾಶಿಯಂ ಸೇತನೆ ಹೆಚ್ಚಿಸಿ** : ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರಿಗೆ ಪೊಟಾಶಿಯಂ ಅಗತ್ಯ ಪೋಷಕಾಂಶವಾಗಿರುತ್ತದೆ, ಏಕೆಂದರೆ ಅದು ಹೆಚ್ಚುವರಿ ಸೋಡಿಯಂನ್ನು ತೊಡೆದುಹಾಕಲು ಸಹಕರಿಸುತ್ತದೆ. ಪೊಟಾಶಿಯಂ ಇರುವ ಆಹಾರಗಳ ಸೇವನೆಯಿಂದ ರಕ್ತನಾಳಗಳ ಮೇಲೆ ಒತ್ತಡ ಕಡಿಮೆ ಆಗುತ್ತದೆ. ಬಾಳೆಹಣ್ಣು, ಎಳನೀರು, ಆಪ್ರಿಕಾಟ್ಸ್ ಮತ್ತು ಹಾಲು ಈ ಖನಿಜವನ್ನು ಹೊಂದಿದೆ.

**ಧೂಮಪಾನ ಮತ್ತು ಮದ್ಯಪಾನ ಕಡಿಮೆ ಮಾಡಿ** : ಧೂಮಪಾನ ಮತ್ತು ಮದ್ಯಪಾನ ಪ್ರತೀ ಕುಟುಂಬಕ್ಕೂ ಮಾರಿ ಹಾಗೂ ಮಾನವನ ಪಾಲಿಗೆ ಯಮಸ್ವರೂಪಿ, ಇವು ರಕ್ತದೊತ್ತಡದ ಪ್ರಮಾಣ ಮತ್ತು ಹೃದಯಬಡಿತದಲ್ಲಿ ಗಮನಾರ್ಹ ಏರಿಕೆ ಉಂಟು



ಮಾಡುತ್ತದೆ. ಕೆಟ್ಟ ಅಭ್ಯಾಸವನ್ನು ಬಿಡುವುದು ಕಷ್ಟ, ಆದರೆ ಅದನ್ನು ಶಾಶ್ವತವಾಗಿ ತ್ಯಜಿಸುವುದು ಒಳ್ಳೆಯದು.

ಯೋಗಾಸನ ಅಭ್ಯಾಸ ಮಾಡಿ : ಅಧಿಕ ರಕ್ತದೊತ್ತಡವನ್ನು ಹೆಚ್ಚು ಮಾಡುವುದರಲ್ಲಿ ಒತ್ತಡದ ಪಾಲು ಹೆಚ್ಚಿರುತ್ತದೆ. ಒಳ್ಳೆಯ ನಿದ್ರೆ ಮತ್ತು ಒತ್ತಡತನ್ನು ನಿವಾರಣೆ ಮಾಡಿಕೊಳ್ಳುವುದು ಅಧಿಕ ರಕ್ತದೊತ್ತಡವನ್ನು ಕಡಿಮೆ ಮಾಡಲು ಅತ್ಯಂತ ಅಗತ್ಯ. ನೀವು ಯೋಗ ಅಥವಾ ಧ್ಯಾನ ಮಾಡಲು ಆರಂಭಿಸಿದರೆ, ಅದು ನಿಮ್ಮ ರಕ್ತದೊತ್ತಡದ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ ಹಾಗೂ ಗಮನಾರ್ಹ ಪ್ರಗತಿ ಸಾಧಿಸಲು ಸಾಧ್ಯವಿದೆ.

ಅಧಿಕ ರಕ್ತದೊತ್ತಡ ಜಗತ್ತಿನೆಲ್ಲೆಡೆ ಅತೀ ಸಾಮಾನ್ಯ ಖಾಯಿಲೆಯಾಗಿದೆ. ಬದಲಾಗುತ್ತಿರುವ ಜೀತನಶೈಲಿ ಮತ್ತು ಆಹಾರ ಸ್ಥಿತಿಗಳು ಈ ಬೆಳವಣಿಗೆಗೆ ಕಾರಣ. ಆದ್ದರಿಂದ ಈ ಸಮಸ್ಯೆ ಪತ್ತೆಯಾದ ಕೂಡಲೇ ಚಿಕಿತ್ಸೆ ಆರಂಭಿಸದಿದ್ದರೆ, ಅದು ಮಾರಣಾಂತಿಕ ಆಗುತ ಸಾಧ್ಯತೆ ಕಡಿಮೆಯಾಗುತ್ತದೆ. ಪತ್ತೆಯಾದ ಕೂಡಲೇ ವೈದ್ಯರನ್ನು ಕಂಡು ಸೂಕ್ತವಾದ ಮಾತ್ರೆಗಳನ್ನು ತೆಗೆದುಕೊಳ್ಳುವುದರಿಂದ ಇದರ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು. ಈ ವಿಚಾರಗಳನ್ನು ಪಾಲಿಸುವುದು ಅಷ್ಟೇನು ಕಷ್ಟವಲ್ಲ. ನಿಯಮಿತವಾಗಿ ಈ ಎಲ್ಲಾ ಅಭ್ಯಾಸ ರೂಢಿಸಿಕೊಂಡರೆ ರಕ್ತದೊತ್ತಡಕ್ಕೆ ಸಂಬಂಧಿಸಿದ ಯಾವ ಸಮಸ್ಯೆಗಳು ನಿಮ್ಮನ್ನು ಕಾಡುವುದಿಲ್ಲ. ಅಧಿಕ ರಕ್ತದೊತ್ತಡದ ಯಾವುದೇ ಲಕ್ಷಣಗಳನ್ನು ಹೊಂದಿರುವುದಿಲ್ಲ ಆದರೆ ಹೃದಯಾಘಾತ, ಮೆದುಳಿನ ಪಾರ್ಶ್ವವಾಯು ಮತ್ತು ಮೂತ್ರ ಪಿಂಡದ ಕಾಯಿಲೆಗಳು ಸೇರಿದಂತೆ ಅನೇಕ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣ ಆಗಬಹುದು.

ದೈಹಿಕ ಚಟುವಟಿಕೆಯ ಕೊರತೆ ಕೂಡ ಅಧಿಕ ತೂಕದ ಅಪಾಯವನ್ನು ಹೆಚ್ಚಿಸುತ್ತದೆ. ಅದೇ ರೀತಿ ವಯಸ್ಸಾದಂತೆ ಅಧಿಕ ರಕ್ತದೊತ್ತಡ, ಮಧುಮೇಹದಂತಹ ಅಪಾಯವು ಕೂಡ ಹೆಚ್ಚಾಗುತ್ತದೆ. ಕೆಲವು ಅಧ್ಯಯನದ ಪ್ರಕಾರ, ಪುರುಷರು 40ನೇ ವಯಸ್ಸಿನ ಒಳಗೆ ಮತ್ತು ಮಹಿಳೆಯರು 50 ನೇ ವಯಸ್ಸಿನ ನಂತರ ಅಧಿಕ ರಕ್ತದೊತ್ತಡದ ಸಮಸ್ಯೆಗೆ ಒಳಗಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅಧಿಕ ರಕ್ತದೊತ್ತಡ ಸೇರಿದಂತೆ ಇನ್ನು ಅನೇಕ ಕಾಯಿಲೆಗಳು ವಂಶಾವಳಿಗಳಿಂದಲೂ ಸಂಭವಿಸಬಹುದು. ಸಾಮಾನ್ಯವಾಗಿ ಯಾವುದೇ ಚಿಹ್ನೆಗಳು ದೊರೆಯದಂತೆ ಇರುವ ಈ ಮಾರಿ ಒಂದೊಮ್ಮೆ ಬಹಳಷ್ಟು ಏರಿಕೆಯಾದರೆ ವಿಪರೀತ ತಲೆನೋವಿನ ಜೊತೆಗೆ ಮೂಗಿನಲ್ಲಿ ರಕ್ತ ಬರುತ್ತದೆ. ತಲೆನೋವು ಮತ್ತು ಮೂಗಿನಲ್ಲಿ ರಕ್ತ ಬಂದರೆ ನೀವು ಕೂಡಲೇ ಆಸ್ಪತ್ರೆಗೆ ದೌಡಾಯಿಸಬೇಕು ಎಂದೇ ಅರ್ಥ. ಒಂದು ವೇಳೆ ವ್ಯಕ್ತಿಯ ರಕ್ತದೊತ್ತಡದಲ್ಲಿ ಏನಾದರೂ ಏರುಪೇರಿದ್ದರೆ ಅದು ಕೂಡಲೇ ಅವರ ನಡಿಗೆಯಲ್ಲೇ ತಿಳಿಯುತ್ತದೆ. ಮೆಟ್ಟಿಲು ಹತ್ತುವಾಗ ಅವರು ಬಹಳ ಪ್ರಯಾಸ ಪಡುತ್ತಾರೆ. ನಡೆಯುವಾಗ, ಭಾರದ ವಸ್ತುಗಳನ್ನುಎತ್ತುವಾಗಲೂ ಬಹಳ ಕಷ್ಟಪಡುತ್ತಾರೆ. ಆತಂಕ, ತಲೆನೋವು, ಕಣ್ಣು ಕತ್ತಲೆ ಬಂದಂತೆ ಆಗುವುದು ಇವರಿಗೆ ಸಹಜ ಲಕ್ಷಣಗಳು ಉತ್ತಮ ದೈಹಿಕ ಆರೋಗ್ಯ ಇರುವವರಿಗೆ ಅಧಿಕ ರಕ್ತದೊತ್ತಡವನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಸುಲಭ. ನೀವು ಅಧಿಕ ರಕ್ತದೊತ್ತಡದ ಸಮಸ್ಯೆಯಿಂದ ಬಳಲುತ್ತಿದ್ದರೆ ಈ ಕ್ರಮಗಳನ್ನು ಅನುಸರಿಸಿ ಹಾಗೂ ಪ್ರತಿ 15–20 ದಿನಗಳಿಗೊಮ್ಮೆ ವೈದ್ಯರ ಹತ್ತಿರ ನಿಮ್ಮ ರಕ್ತದೊತ್ತಡದ ಪರೀಕ್ಷೆ ಮಾಡಿಸಿಕೊಳ್ಳಿ. ॐ


**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ – 562 120

ದೂರವಾಣಿ : 8971608213. ಇ–ಮೇಲ್ : sampreethisamruddhi@gmail.com

**ಪತ್ರಿಕೆಯ ಚಂದಾವಿವರ**

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213



# ವಸಂತಾಗಮನದ ಸೂಚನೆಯ ಹೋಳಿಹಬ್ಬ

– ಡಾ.ಗುರುರಾಜ ಪೋಶೆಟ್ಟಿಹಳ್ಳಿ, ಸಂಸ್ಕೃತಿ ಚಿಂತಕರು



**ಫಾಲ್ಗುಣಮಾಸದ ಮಹತ್ವ:–**

ಚಾಂದ್ರಮಾನದ ಪ್ರಕಾರ 12ನೆಯ ಮಾಸವೇ ಫಾಲ್ಗುಣ ಮಾಸ. ಇದು ಫೆಬ್ರವರಿ– ಮಾರ್ಚ್ ತಿಂಗಳಲ್ಲಿ ಬರುತ್ತದೆ. ಈ ಮಾಸದಲ್ಲಿ ಸೂರ್ಯನು ಕುಂಭರಾಶಿಯಿಂದ ಮೀನರಾಶಿಗೆ ಪ್ರವೇಶಿಸುತ್ತಾನೆ. ಈ ತಿಂಗಳಲ್ಲಿ 'ಪೂರ್ವ' ಹಾಗೂ 'ಉತ್ತರ' ಫಲ್ಗುಣಿ ನಕ್ಷತ್ರದಲ್ಲಿ ಹುಣ್ಣಿಮೆ ದಿನಗಳು ಬರುತ್ತವೆ.

ಬಿಹಾರದ ಗಯಾ ಕ್ಷೇತ್ರದಲ್ಲಿ ಹರಿಯುವ ನದಿಯ ಹೆಸರೇ 'ಫಲ್ಗು'. ಈ ಕ್ಷೇತ್ರದ ದಕ್ಷಿಣದ 75 ಕಿ.ಮೀ. ದೂರದಿಂದ ಹರಿದು ಬರುವ ಎರಡು ನದಿಗಳು ಸೇರಿ ಫಲ್ಗು ನದಿ ಉಂಟಾಗಿದೆ. ಈ ನದಿಯ ಒಂದು ಭಾಗ ಗಂಗಾನದಿಗೆ ಸೇರುತ್ತದೆ. 'ಗುಪ್ತಗಂಗಾ' ಎಂಬ ಹೆಸರೂ ಇರುವ ಈ ನದಿ ಸೀತಾದೇವಿಯ ಶಾಪದಿಂದ ಯಾವಾಗಲೂ ಒಣಗಿರುವುದೇ ಹೆಚ್ಚು ಎಂಬುದು ಐತಿಹ್ಯ. ಅಚ್ಚರಿ ಎಂದರೆ, ಒಣಗಿರುವ ನದಿಯ ಮಣ್ಣಿನ ಭಾಗವನ್ನು ತೆಗೆದು ಒಂದಿಷ್ಟು ಅಗೆದರೆ ಶುದ್ಧ ಜಲ ಝುರಿಝುರಿಯಾಗಿ ಹರಿಯುತ್ತದೆ. ಫಲ್ಗು ನದಿಯ ಈ ನೀರು ರೋಗಗಳನ್ನು ಮುಕ್ತವಾಗಿಸುವ ಪವಿತ್ರ ಜಲವೆಂಬ ನಂಬಿಕೆ ಇದೆ. ಬಲು ಪ್ರಾಚೀನವಾದ ಈ ನದಿಯ ಉಲ್ಲೇಖ ಅಗ್ನಿ ಪುರಾಣದಲ್ಲಿದೆ.

ಫಾಲ್ಗುಣ ಮಾಸ ನಿಯಾಮಕ, ಶ್ರೀ ಗೋವಿಂದ. ಶ್ರೀವಿಷ್ಣುವಿನ ನಾಮತ್ರಯ ಜಪದಲ್ಲಿ ಅಚ್ಯುತಾಯ ನಮಃ, ಅನಂತಾಯ ನಮಃ, ಗೋವಿಂದಾಯ ನಮಃ ಎಂಬ ಮೂರು ಹೆಸರುಗಳಲ್ಲಿ ಗೋವಿಂದ ನಾಮವೂ ಒಂದು. ವಿಷ್ಣು ಸಹಸ್ರನಾಮದಲ್ಲಿ 20 ಹಾಗೂ 58ನೆಯ ಹೆಸರುಗಳಲ್ಲಿ 'ಗೋವಿಂದ'ನವು. ಕೆಲವು ಸಂಪ್ರದಾಯಗಳಲ್ಲಿ ಆಚಮನ ಮಾಡುವಾಗ ಹೇಳುವ 24 ಕೇಶವ ನಾಮಗಳಲ್ಲಿ, ಗೋವಿಂದ ನಾಮ ನಾಲ್ಕನೆಯದಾಗಿದೆ. ಸಂಕಲ್ಪ ಮಾಡುವಾಗಲೂ 'ಗೋವಿಂದ' ನಾಮವನ್ನು ಉಚ್ಚರಿಸುತ್ತಾರೆ. ಗೋವಿಂದ ಎಂದರೆ, ಗೋವುಗಳಿಗೆ ಒಡೆಯ, ಗೋವುಗಳನ್ನು ಪೊರೆಯುವವ, ಭೂಮಿಗೆ ಒಡೆದು. ಗೋವಿಂದ ಎಂದರೆ ವೇದವೂ ಹೌದು. ಆದ್ದರಿಂದ ವೇದಗಳನ್ನು ಕಾಪಾಡಿದವನು, ವೇದಗಳಲ್ಲಿ ಸ್ತುತಿಸಲ್ಪಡುವವನು ಕೂಡ ಗೋವಿಂದನಾಗಿದ್ದಾನೆ.

**ಫಾಲ್ಗುಣದಲ್ಲಿ ಪಯೋವ್ರತ**

ಬಲಿಚಕ್ರವರ್ತಿ ಸ್ವರ್ಗವನ್ನಾಕ್ರಮಿಸಿದ ಸಂದರ್ಭದಲ್ಲಿ ಕಶ್ಯಪ ಮಹರ್ಷಿಗಳ ಪತ್ನಿಯಾದ ಅದಿತಿಯು ಕೇವಲ ಹಾಲನ್ನು ಸೇವಿಸಿ ತಪಸ್ಸನ್ನಾಚರಿಸಿದಾಗ ಈ ಪಯೋವ್ರತದಿಂದ ಸಂತುಷ್ಟನಾದ ಶ್ರೀಮನ್ನಾರಾಯಣನು ಆಕೆಯ ಎದುರು ಪ್ರತ್ಯಕ್ಷನಾಗುತ್ತಾನೆ (ಭಾಗವತ). ಆಗ ಅದಿತಿಯು ವಿಷ್ಣುವಿನಲ್ಲಿ ತನ್ನ ಮಗುವಾಗಿ ಅವತರಿಸಬೇಕೆಂಬ ವರವನ್ನು ಕೇಳುತ್ತಾಳೆ. ಅಂತೆಯೇ ವಿಷ್ಣು ತನ್ನ ಎಂಟನೆಯ ಅವತಾರವಾಗಿ, ವಾಮನ ರೂಪವನ್ನು ಪಡೆದು ಅದಿತಿಯ ಮೂಲಕ ಧರೆಗಿಳಿದು ಬರುತ್ತಾನೆ. ಇಂದೂ ಸತ್‌ಸಂತಾನಕ್ಕಾಗಿ, ದೈವೀಗುಣ ಸಂಪನ್ನ ಮಕ್ಕಳನ್ನು ಪಡೆಯಲು, ಫಾಲ್ಗುಣಮಾಸದಲ್ಲಿ ಪಯೋವ್ರತವನ್ನು ವಿಧ್ಯುಕ್ತವಾಗಿ ಆಚರಿಸುತ್ತಾರೆ.

**ಆಮಲಕಿ ಏಕಾದಶೀ :** ಫಾಲ್ಗುಣಮಾಸದ ಶುಕ್ಲಪಕ್ಷದಲ್ಲಿ ಬರುವ ಏಕಾದಶಿ ಇದು. ದಾನ ಮಾಡಿದ ಪುಣ್ಯ ಬರುತ್ತದೆ; ಅಂತೆಯೇ ಮೋಕ್ಷಕಾರಕವೂ ಹೌದು ಎಂಬ ನಂಬಿಕೆಯಿದೆ. ಈ ಮಾಸದಕೃಷ್ಣಪಕ್ಷದಲ್ಲಿ ಬರುವ ಏಕಾದಶಿಗೆ ಪಾಪವಿಮೋಚನೀ ಏಕಾದಶಿ ಎನ್ನುತ್ತಾರೆ. ಫಾಲ್ಗುಣ ಮಾಸದಲ್ಲಿ ಮಾಡುವ ಗೋದಾನ, ವಸ್ತ್ರದಾನ, ಅತ್ಯಂತ ಪ್ರಶಸ್ತವೆನ್ನಲಾಗಿದೆ.

**ಹೋಳಿಹಬ್ಬ :** ಇದು ಬಣ್ಣಗಳ ಹಬ್ಬವಾದ ಹೋಳಿಯನ್ನು ಫಾಲ್ಗುಣಮಾಸದ ಪೂರ್ಣಿಮೆಯಂದು, 'ಹೋಲಿಕಾ' ದಹನದೊಂದಿಗೆ ಆಚರಿಸಲಾಗುತ್ತದೆ. ಶಿಶಿರದ ಚಳಿ ಕಳೆದು ವಸಂತಾಗಮನದ ಸೂಚನೆಯನ್ನು ಈ ಹಬ್ಬ ನೀಡುತ್ತದೆ.

ಭಾರತ ಮತ್ತು ನೇಪಾಳದಲ್ಲಿ, ದಕ್ಷಿಣ ಏಷ್ಯಾದ ಹಲವು ಭಾಗಗಳಲ್ಲಿ, ಭಾರತೀಯರು ಅಧಿಕವಿರುವ ವಿಶ್ವದ ಹೆಚ್ಚಿನೆಡೆ ಇದರ



ಆಚರಣೆಯಿದೆ. ಮುಖ್ಯವಾಗಿ ಉತ್ತರ ಅಮೇರಿಕಾ, ದಕ್ಷಿಣ ಅಮೆರಿಕಾ ಹಾಗೂ ಯೂರೋಪ್‌ನ ಹೋಳಿ ಆಚರಣೆ ವೈಶಿಷ್ಟ್ಯಪೂರ್ಣ.

ಶ್ರೀಕೃಷ್ಣ ಬೆಳೆದ ತಾಣವಾದ ವ್ರಜ ಭೂಮಿಯಲ್ಲಿ 16 ದಿನಗಳ ಕಾಲ ರಂಗನಾಟದ ಸಹಿತವಾಗಿ ರಾಧಾ-ಕೃಷ್ಣರ ಅಮರ ಪ್ರೇಮದ ಪ್ರತೀಕವಾದ ಈ ಹಬ್ಬವನ್ನು ಆಚರಿಸುತ್ತಾರೆ. ಸಾಂಸ್ಕೃತಿಕ ಮಹತ್ತ್ವವುಳ್ಳ ಈ ವಿಶಿಷ್ಟ ಹಬ್ಬ ಕಾಮದಹನವೆಂದೂ ರಂಗಪಂಚಮಿ ಎಂದೂ ಪ್ರಸಿದ್ಧ.

ಹಲವು ಪುರಾಣಗಳಲ್ಲಿ, ಕಾಳಿದಾಸನಂಥ ಮಹಾಕವಿಗಳ ಕಾವ್ಯಗಳಲ್ಲಿ, ಸಂಸ್ಕೃತ ನಾಟಕ 'ರತ್ನಾವಳಿ' (ಕ್ರಿ.ಶ. ಏಳನೆಯ ಶತಮಾನ)ಯಲ್ಲೂ ಹೋಳೀ ಹಬ್ಬದ ವರ್ಣನೆ ದೊರೆಯುತ್ತದೆ.

17ನೆಯ ಶತಮಾನದಲ್ಲಿ ಭಾರತಕ್ಕೆ ಬ್ರಿಟಿಷರ ಆಗಮನದ ಅನಂತರ ಯುರೋಪ್‌ನಲ್ಲೂ ಹೋಳಿಯು ರಂಗು ಪಡೆದುಕೊಂಡಿತು. ಹೀಗೆ ಹೋಳಿ ಹಬ್ಬದ ಸಾಂಸ್ಕೃತಿಕ ಬೇರುಗಳು, ಸಾಮಾಜಿಕ ಮಹತ್ವ, ಆಚರಣೆಯ ವಿಶಿಷ್ಟತೆ ವಿಶ್ವದ ಹಲವೆಡೆ ತನ್ನದೇ ಆದ ಛಾಪು ಮೂಡಿಸಿದೆ.

ಸಾಂಪ್ರದಾಯಿಕವಾಗಿ ಅರಸಿನ, ಕುಂಕುಮ, ಕೇಸರಿ, ಬೇವಿನ ಎಲೆಯ ಬಣ್ಣ ಮೊದಲಾದ ನೈಸರ್ಗಿಕ ರಂಗುಗಳನ್ನು ಪಿಚಕಾರಿಯ ಮೂಲಕ ಪರಸ್ಪರ ರಚಿ ನಾಟ್ಯ, ಗಾನ, ಸಂಗೀತಗಳೊಂದಿಗೆ ಆನಂದಿಸುತ್ತಾರೆ.

ಪಂಜಾಬಿನಲ್ಲಿ ಫಗ್ವಾ, ಅಸ್ಸಾಮ್‌ನಲ್ಲಿ ಬಸಂತೋತ್ಸವ್, ಮಥುರಾದಲ್ಲಿ ಲಾಠ್‌ಮಾರ್ ಹೋಲಿ, ನೇಪಾಳದಲ್ಲಿ ಹೋಲೀ ಎಂದೆಲ್ಲ ಪ್ರಾದೇಶಿಕ ವೈವಿಧ್ಯದೊಂದಿಗೆ ಈ ಹಬ್ಬ ಆಚರಿಸಲ್ಪಡುತ್ತದೆ. ಕಾನ್ಪುರದ ಗಂಗಾತಟದಲ್ಲಿ 'ಹೋಲಿ ಮೇಲಾ' ಎಂಬ ಜಾತ್ರೆಯೂ ನಡೆಯುತ್ತದೆ.

ಉತ್ತರಾಖಂಡದ ವೈಶಿಷ್ಟ್ಯವೆಂದರೆ, ಶಾಸ್ತ್ರೀಯ ಗಾಯನದ ವೈಭವದ ರಾಗರಂಜನೆಯ ಹೋಲಿ. ಕುಮಾಂವೀ ಹೋಲಿ ಎಂದು ಕರೆಯುವ ಈ ಆಚರಣೆ, ಮೊದಲು ದೇವಾಲಯಗಳಲ್ಲಿ ಬೈಠಕೀ ಹೋಲಿ (ನಿರ್ವಾಣನ ಕೀ ಹೋಲಿ) ಎಂಬ ಹೆಸರಿನೊಂದಿಗೆ ಆರಂಭವಾಗುತ್ತದೆ. 'ಹೋಲ್ಯಾರ್'ಗಳು ವಿಶಿಷ್ಟ ಹೋಲಿ ಹಾಡುಗಳನ್ನು ಶಾಸ್ತ್ರೀಯವಾಗಿ ಹಾಡುತ್ತಾರೆ. ದಿನವಿಡೀ ನಡೆಯುವ ಈ ರಾಗರಂಜನೆಯಲ್ಲಿ ಹೋಲ್ಯಾರ್‌ಗಳು 'ಬೆಳಗ್ಗಿನ ಹಾಡು'ಗಳನ್ನು ಹಾಡಿದರೆ, ಮಧ್ಯಾಹ್ನದ ಸಮಯದಲ್ಲಿ ಮಾಧ್ಯಾಹ್ನಿಕ ಶಾಸ್ತ್ರೀಯ ರಾಗಗಳನ್ನು (ಸಾರಂಗ್, ನೀಮ್‌ಚಲಾಸಿ, ಪೀಲು) ಅಳವಡಿಸಿದ ಹಾಡುಗಳಿರುತ್ತವೆ. ಸಂಜೆಕಲ್ಯಾಣ್, ಶ್ಯಾಮ್‌ಕಲ್ಯಾಣ್, ಯಮನ್ ಮೊದಲಾದ ಸಾಯಂಕಾಲದ ಶಾಸ್ತ್ರೀಯ ರಾಗಗಳೊಂದಿಗೆ ಹಾಡು/ ಗಾಯನ ನಡೆಯುತ್ತವೆ. ಇದು ಭಕ್ತಪ್ರಧಾನ ಹೋಲಿ ಆಚರಣೆಯ ರೂಪವೆನ್ನಬಹುದು. ಹೋಲಿಯ ಇನ್ನೊಂದು ಆಚರಣೆಯೆಂದರೆ, ಖಾರೀ ಅಥವಾ ಖಾಡೀ ಹೋಳಿ. ಇದು ಕುವತಾನ್ ಪ್ರದೇಶದ ಜಾನಪದ ರೀತಿಯ ದಿರಿಸು, ಸಂಪ್ರದಾಯಗಳೊಂದಿಗೆ ಆಚರಿಸುವ ಹೋಲಿ.

ಬಿಹಾರ 'ಹೋಲಿ ಮಿಲನ್' ಎಂಬ ಆಚರಣೆಗಾಗಿ ಖ್ಯಾತವಾಗಿದ್ದರೆ, ಪಶ್ಚಿಮ ಬಂಗಾಳದಲ್ಲಿ ನಡೆಯುವ 'ಢೋಲ್‌ಜಾತ್ರಾ'ದಲ್ಲಿ ಕೃಷ್ಣ-ರಾಧೆಯರ ಮೂರ್ತಿಗಳ ಮೆರವಣಿಗೆಯಿರುತ್ತದೆ. 'ಅಬೀರ್' ಅಥವಾ ಬಣ್ಣಬಣ್ಣದ ಪುಡಿಗಳನ್ನು ಸಂಭ್ರಮದಿಂದ ಎರಚಿಕೊಂಡು ವೀಣೆ, ಏಕತಾರಾ, ಢೋಲ್ ಮೊದಲಾದ ವಾದ್ಯಗಳೊಂದಿಗೆ ಸ್ತ್ರೀ-ಪುರುಷರು, ಮಕ್ಕಳು ನರ್ತಿಸಿ ಹಾಡಿ ಸಂಭ್ರಮಿಸುತ್ತಾರೆ.

ಒಡಿಶಾದಲ್ಲಿ ಹೋಲಿಯ ಆಚರಣೆಯ ಹೆಸರೇ 'ಡೋಲಾ'. ಇಲ್ಲಿಯ ಪುರಿಜಗನ್ನಾಥನಿಗೆ 'ಡೋಲಾಯಾತ್ರಾ' ಎಂಬ ಮೆರವಣಿಗೆ ಜಾತ್ರೆ ನಡೆಸಿ, 'ಭೋಗಾ' ಎಂಬ ಸಿಹಿ ನೈವೇದ್ಯವನ್ನು ಅರ್ಪಿಸಲಾಗುತ್ತದೆ. ಪುರಿಯ ಹೋಲಿ 1560ರಿಂದಲೇ ಆರಂಭವಾಗಿದೆ. ಜಗನ್ನಾಥ, ಬಲಭದ್ರ, ಸುಭದ್ರೆಯರ ಮೂರ್ತಿಗಳನ್ನು ಹೋಲಿಯ ಡೋಲಾಯಾತ್ರಾ ದಿನದಂದು, ಮೆರವಣಿಗೆಯಲ್ಲಿ ಒಯ್ದು, ತದನಂತರ ಬಣ್ಣಗಳನ್ನು ದೇವರಿಗೆ ಎರಚಿ, ಇತರರೂ ರಂಗಿನಾಟ ಆಡಿ ನೈವೇದ್ಯ-ಭಕ್ಷ್ಯಗಳನ್ನು ಸ್ವೀಕರಿಸಿ ಆನಂದಿಸುತ್ತಾರೆ.

ಗೋವಾದಲ್ಲಿ ಕೊಂಕಣಿಗರು ಹೋಲಿಯನ್ನು 'ಶಿಗ್ಮೋ' ಎಂದು ಕರೆಯುತ್ತಾರೆ. ಅಲ್ಲಿ ಈ ಹಬ್ಬ 'ಶಿಶಿರೋತ್ಸವ' ಎಂಬ ಹೆಸರಿನಿಂದ ವಿವಿಧ ಸಾಂಸ್ಕೃತಿಕ, ಧಾರ್ಮಿಕ, ಲಲಿತಕಲಾ ಕಾರ್ಯಕ್ರಮಗಳೊಂದಿಗೆ ಒಂದು ತಿಂಗಳ ಕಾಲ ನಡೆಯುತ್ತದೆ. ಹೋಲಿಕಾ ಪೂಜಾ, ಹೋಲಿಕಾದಹನ, ಧೂಲೀ ವಂದನ್ ಮೊದಲಾದವು ಹೋಲಿ ಆಚರಣೆಯ ಮುಖ್ಯ ಭಾಗಗಳಾದರೆ, 'ಹಲ್‌ದುಣೆ' (ಹಳದಿ ಮತ್ತುಕೇಸರಿ ಬಣ್ಣ)ಯನ್ನು ದೇವರಿಗೆ ಎರಚಿ ತಾವೂ ಎರಚಿಕೊಂಡಯ ರಂಗಿನಾಟ ನಡೆಸುವುದು ಗೋವಾದ ವೈಶಿಷ್ಟ್ಯ.

ಮಹಾರಾಷ್ಟ್ರದಲ್ಲಿ ಐದರಿಂದ-ಏಳು ದಿನಗಳ ಕಾಲ ನಡೆಯುವ ಈ ಹಬ್ಬಕ್ಕೆ 'ಶಿಂಗ್ಮಾ' ಎನ್ನುತ್ತಾರೆ. ಒಂದು ವಾರ ಮೊದಲಿನಿಂದಲೇ ಕಟ್ಟಿಗೆಯನ್ನು ಸಂಗ್ರಹಿಸಿ, ಪೇರಿಸಿಟ್ಟು, ಹಬ್ಬದ ದಿನದಂದು ಎಲ್ಲರೂ ನೆರೆದು ಅದಕ್ಕೆ ಬೆಂಕಿ ಕತ್ತಲು ಶಿಶಿರ ಚಳಿಯಲ್ಲಿ, ಮಂಜಿನ ವೈಭವವನ್ನು, ಪ್ರಕೃತಿಯ ರಮಣೀಯತೆಯನ್ನು ಅನುಭವಿಸಿ ಆನಂದಿಸಲು ಭಾರತದ ಈ ಕೆಳಗಿನ ಪ್ರವಾಸೀ ತಾಣಗಳು ಬಲು ಪ್ರಶಸ್ತ.

**ಹಿಮಾಚಲ ಪ್ರದೇಶದ ಮನಾಲಿ :** ಶಿಶಿರ ಋತುವಿನ ಪ್ರಸಿದ್ಧ ತಾಣ ಮನಾಲಿ. ಮಂಜಿನಿಂದ ಆವೃತವಾದ ಪರ್ವತಗಳು,



**ಸಮೃದ್ಧಿ ಸುಜ್ಞಾನ**

ನಮ್ಮ ಕೆಲಸ ಮತ್ತು ಸಾಧನೆಗಳಿಂದ ಸುತ್ತಲಿನ ಪರಿಸರದಲ್ಲಿ ಬದಲಾವಣೆಗಳನ್ನು ತರಬಹುದೇ ಹೊರತು ನಮ್ಮ ಉಪದೇಶ ಅಥವಾ ಅಭಿಪ್ರಾಯದಿಂದಲ್ಲ.

ಸ್ಕೀಯಿಂಗ್‌ನಂಥ ಸಾಹಸೀ ಮಂಜಿನ ಆಟ, ಭಾರತೀಯ ಶೈಲಿಯ ಉಣ್ಣೆಯ ಉಡುಗೆ ತೊಡುಗೆ ಮುಂತಾದವು ಇಲ್ಲಿನ ವೈಶಿಷ್ಟ್ಯಗಳು. ಫೆಬ್ರವರಿ ಕೊನೆಯವರೆಗೂ ಇಲ್ಲಿ ಪ್ರವಾಸಿಗರಿಗೆ ಆಪ್ಯಾಯಮಾನ ವಾತಾವರಣವಿರುತ್ತದೆ.

**ತವಾಂಗ್ (ತವಂಗ್) :** ಇದು ದೆಹಲಿಯಿಂದ 2,400 ಕಿ.ಮೀ. ದೂರದಲ್ಲಿ ಅರುಣಾಚಲ ಪ್ರದೇಶವಿದೆ. ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಈ ಪ್ರವಾಸಿ ತಾಣ ಪ್ರವಾಸಕ್ಕೆ ಬಲು ಸೂಕ್ತ.

**ಕೊಚ್ಚಿ :** ಶಿಶಿರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಉತ್ತರಕ್ಕಿಂತ ಹಿಮ ಹಾಗೂ ಚಳಿ ಕಡಿಮೆ. ಇಂಥ ವಾತಾವರಣ ಇಷ್ಟ ಪಡುವವರಿಗೆ ಅದ್ಭುತ ನಿಸರ್ಗ ಸೌಂದರ್ಯದಿಂದ ಬೆಳಗುವ ಕೇರಳದ ಶಿಶಿರಕಾಲದಲ್ಲಿ ಪ್ರವಾಸಕ್ಕೆ ಸುಯೋಗ್ಯ.

ಪ್ರತಿವರ್ಷ ಜನವರಿ ಒಂದರಂದು 'ಕೊಚ್ಚಿಕಾರ್ನಿವಲ್' ಹಬ್ಬ ನಡೆಯುತ್ತದೆ. ಅದಲ್ಲದೆ ಹಲವು ಬೀಚ್, ಸಮುದ್ರತೀರದ ಅಂದದ ಸ್ಥಳಗಳು ಇಲ್ಲಿವೆ.

ಕೇರಳ ಸರಕಾರದ ಆಸರೆಯಲ್ಲಿ ವಿಶ್ವವಿಖ್ಯಾತ ಕಲಾವಿದರ ಕಲಾಕೂಟ 'ಕೊಚ್ಚಿ ಮಝಿರಿಝ್ ಬಿಯೆನ್ನೆಲ್' ಪ್ರತಿವರ್ಷ ಜನವರಿಯಲ್ಲಿ ಆರಂಭ. ಹೀಗೆ ಕಲಾರಾಧಕರಿಗೆ ಇದು ಸ್ವರ್ಗೀಯ ಅನುಭವ. ನೂತನ ವಧೂವರರಿಗೆ ಶಿಶಿರ ಕಾಲದಲ್ಲಿ ಮಧುಚಂದ್ರ ನಡೆಸಲು ಸೂಕ್ತ ತಾಣಗಳೂ ಕೊಚ್ಚಿಯಲ್ಲಿವೆ.

**ಗೋವಾ :** ಶಿಶಿರ ಋತುವಿನಲ್ಲಿ ಇಲ್ಲಿ ಪ್ಯಾಕೇಜ್ ಟೂರ್‌ನ ಮೂಲಕ ಐದು ಪ್ರಮುಖ ಬೀಚ್‌ಗಳನ್ನು, ವಿವಿಧ ದೇವಾಲಯ, ಚರ್ಚ್, ಮ್ಯೂಸಿಯಮ್‌ಗಳನ್ನು ದರ್ಶಿಸಲು ಸಾಧ್ಯ. ಪ್ರಸಿದ್ಧ ಕೋವಳಂ ಬೀಚ್‌ನಲ್ಲಿ ಸರ್ಫಿಂಗ್ ನಡೆಸಲು ಶಿಶಿರ ಕಾಲ ಬಲು ಸೂಕ್ತ.

ಇಲ್ಲಿ ಜನವರಿ ತಿಂಗಳ ಮಧ್ಯದಲ್ಲಿ ನಡೆಯುವ 'ಗ್ರಾಮಂ' ಎಂಬ ವಾರ್ಷಿಕ ಪಾರಂಪರಿಕ ಹಬ್ಬದ ಸಮಯದಲ್ಲಿ ಈ ತಾಣವನ್ನು ದರ್ಶಿಸುವುದು ಮನಸ್ಸಿಗೂ ಕಣ್ಣಿಗೂ ಹಬ್ಬ ! ಸಾಂಪ್ರದಾಯಿಕ ಜಾನಪದೀಯ ಅಡುಗೆಗಳಿಂದ ನಾಲಿಗೆಗೂ ಹಬ್ಬ !

**ಅಂಡಮಾನ್– ನಿಕೋಬಾರ್ ದ್ವೀಪ :** ಶಿಶಿರ ಕಾಲದಲ್ಲಿ, ಅದೂ ಜನವರಿ ತಿಂಗಳಲ್ಲಿ ಈ ದ್ವೀಪ ಪ್ರವಾಸಕ್ಕೆ ಯೋಗ್ಯ. ಜತೆಗೆ 10 ದಿನಗಳ ಅಂಡಮಾನ್–ನಿಕೋಬಾರ್ ಹಬ್ಬ ಸಾಮಾನ್ಯವಾಗಿ ಜನವರಿ ಮೊದಲ ವಾರದಲ್ಲಿ ಆರಂಭವಾಗುತ್ತದೆ.

ಇಲ್ಲಿ ಸಂಸ್ಕೃತಿ, ಕಲೆ, ನೃತ್ಯ, ಗಾಯನ ಹಾಗೂ ವಸ್ತು ಪ್ರದರ್ಶನ ಇತ್ಯಾದಿಗಳಿರುತ್ತವೆ. ಜತೆಗೆ ಪ್ಯಾರಾಸೈಲ್ಲಿಂಗ್ ಸರ್ಫಿಂಗ್ ಮೊದಲಾದ ಸಾಹಸೀ ಕ್ರೀಡೆಗಳ ಪ್ರದರ್ಶನವೂ ಇರುತ್ತದೆ.

**ದಿಯು ದ್ವೀಪ :** ದಿಯು–ದಾಮನ್ ದ್ವೀಪಗಳ ಸಮೂಹ ಭಾರತದ ಸಂಸ್ಕೃತಿಯ ಭಾಗವೇ ಆಗಿದೆ. ಜನವರಿ ತಿಂಗಳ ಕೊನೆಯಿಂದ ಫೆಬ್ರವರಿ ತಿಂಗಳವರೆಗೆ ದಿಯು ದ್ವೀಪದ ಪ್ರವಾಸಕ್ಕೆ ಯೋಗ್ಯ ಕಾಲ. ಹಲವು ಐತಿಹಾಸಿಕ ಸ್ಥಳ, ಕೋಟೆಗಳು, ರಮಣೀಯ ದ್ವೀಪಗಳು ಪ್ರಾಚೀನ ಚರ್ಚ್‌ಗಳು ಇಲ್ಲಿನ ಸ್ಮರಣೀಯ ತಾಣಗಳು.

**ಜೈಪುರ :** ಐತಿಹಾಸಿಕ ಸ್ಥಳಗಳನ್ನು ದರ್ಶಿಸಲು ಅವಕಾಶವಿರುವ ಜೈಪುರದಲ್ಲಿ ಶಿಶಿರಕಾಲದಲ್ಲಿ ಅಂತಾರಾಷ್ಟ್ರೀಯ 'ಜೈಪುರ್ ಲಿಟರೇಚರ್ ಫೆಸ್ಟಿವಲ್' ನಡೆಯುತ್ತದೆ.

**ಅಹಮದಾಬಾದ್ :** ಅಹಮದಾಬಾದ್‌ನಲ್ಲಿ ಶಿಶಿರದ ಈ ಸಮಯದಲ್ಲಿ ಗಾಳಿಪಟದ ಹಬ್ಬ ನಡೆಯುವುದರಿಂದ ಶಿಶಿರ ಕಾಲದಲ್ಲಿ ಈ ಸಮಯದಲ್ಲಿ ದರ್ಶಿಸಲು ಯೋಗ್ಯ.

**ಉಡುಪಿ :** ಉಡುಪಿಯಲ್ಲಿ ಪ್ರಖ್ಯಾತ 'ಪರ್ಯಾಯ ಮಹೋತ್ಸವ' ನಡೆಯುವುದು ಶಿಶಿರ ಕಾಲದಲ್ಲೇ (ಜನವರಿ 18).

**ಮಧುರೈ :** ಇಲ್ಲಿನ ಮೀನಾಕ್ಷಿ ದೇವಾಲಯದಲ್ಲಿ ದೇವಿ ಮೀನಾಕ್ಷಿ ಹಾಗೂ ಸುಂದರೇಶ್ವರ ದೇವರನ್ನು 'ತೆಪ್ಪ ಕೊಳಂ' ಎಂಬ ಸರೋವರದಲ್ಲಿ ವೈಭವೋಪೇತವಾಗಿ ಮೆರವಣಿಗೆಯಲ್ಲಿ ಕರೆತಂದು ತೆಪ್ಪೋತ್ಸವ ನಡೆಸಲಾಗುತ್ತದೆ.

ಹೀಗೆ ಹಲವು ಕಾರಣಗಳಿಂದ ಈ ಹತ್ತು–ಹಲವು ಪ್ರವಾಸೀತಾಣ ಹಾಗೂ ಕ್ಷೇತ್ರಗಳು ಶಿಶಿರ ಋತುವಿನಲ್ಲಿ ದರ್ಶಿಸಲು ಸುಯೋಗ್ಯವಾಗಿವೆ. ದುಷ್ಟಶಕ್ತಿ ನಾಶವಾಯಿತೆಂಬ ಮತ್ತೆ ಸತ್‌ಶಕ್ತಿ ಆಗಮಿಸುವುದೆಂಬ ನಂಬಿಕೆಯೊಂದಿಗೆ ಸಿಹಿ ಹಂಚಿ ಆನಂದಿಸುತ್ತಾರೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಕಟ್ಟಿಗೆಯನ್ನು ಸಂಗ್ರಹಿಸಿ, ಪೇರಿಸಿ ರಾತ್ರಿ ಕಾಮದಹನ ನಡೆಸುತ್ತಾರೆ. ಇಲ್ಲಿ ಹೋಳಿಹಬ್ಬ ಎರಡು ದಿನಗಳ ಕಾಲ ನಡೆಯುತ್ತದೆ. ಉತ್ತರಕರ್ನಾಟಕದಲ್ಲಿ ಹಬ್ಬಕ್ಕಾಗಿಯೇ ವಿಶಿಷ್ಟ ಖಾದ್ಯಗಳನ್ನು, ಸಿಹಿಗಳನ್ನು ತಯಾರಿಸುತ್ತಾರೆ. ಉತ್ತರಕನ್ನಡದ ಶಿರಸಿಯಲ್ಲಿ 'ಬೇಡರ ವೇಷದ' ಜಾನಪದ ನೃತ್ಯ ಹಬ್ಬಕ್ಕಿಂತ ಐದು ದಿನ ಮುಂಚಿನಿಂದ (ರಾತ್ರಿಯ ಸಮಯದಲ್ಲಿ) ನಡೆಸಲಾಗುತ್ತದೆ. ಈ ಆಚರಣೆ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ.

ಕೇರಳದಲ್ಲಿ ಮಂಜಲ್ ಕುಲಿ ಎಂಬ ಕೇರಳೀಯ ಕೊಂಕಣಿಗರು 'ಉಕ್ಕುಳಿ' ಎಂಬ ಹೆಸರಿನಿಂದ ಆಚರಿಸುತ್ತಾರೆ. ಗೋಶ್ರೀಪುರಂನ ತಿರುಮಲ ದೇವಾಲಯದ ಕೊಂಕಣಿಗರ ಹೋಲಿ ಹಬ್ಬ ಕೇರಳದ ವೈಶಿಷ್ಟ್ಯವಾಗಿದೆ.

ಆಂಧ್ರಪ್ರದೇಶದಲ್ಲಿ ವಸಂತ ಪಂಚಮಿ ಎಂದು ಕರೆಯಲಾಗುವ ಹೋಲಿ ಹಬ್ಬ ರಂಗಿನಾಟ, ಹೋಲಿಕಾ ದಹನ, ವಿಶೇಷ

ಭಕ್ಷ್ಯಗಳ ವಿತರಣೆಯೊಂದಿಗೆ ಆಚರಿಸುವ ಒಂದು ಮುಖ್ಯ ಹಬ್ಬ.

ತಮಿಳುನಾಡಿನಲ್ಲಿ ಫಲ್ಗುಣೀ ಪೂರ್ಣಿಮೆಯಂದು ಮಹಾಲಕ್ಷ್ಮಿಯು ಕ್ಷೀರಸಾಗರದಲ್ಲಿ ಸಮುದ್ಭೂತಳಾದಳೆಂಬ ನಂಬಿಕೆ. ಆದ್ದರಿಂದ ಹೋಳಿಯನ್ನು ವಸಂತೋತ್ಸವ ಎಂದು ಕರೆಯುತ್ತಾರೆ ಹಾಗೂ ದೇವಾಲಯಗಳಲ್ಲಿ ಆ ದಿನದಿಂದ ಉತ್ಸವ, ಪ್ರವಚನ, ಸಂಗೀತ, ನೃತ್ಯಗಳು ಆರಂಭವಾಗುತ್ತವೆ. ರಂಗಿನಾಟ ಆಡುತ್ತಾ ಶಿಶಿರದ ಕೊನೆಯನ್ನು ಆನಂದಿಸುತ್ತಾ, ವಸಂತವನ್ನು ಸ್ವಾಗತಿಸುವುದು ಇಲ್ಲಿಯ ಆಚರಣೆಯ ಮಹತ್ತ್ವ.

**ಸಾಂಪ್ರದಾಯಿಕ ಹೋಳಿ ಬಣ್ಣ: ಔಷಧೀಯ ಗುಣಗಳು**

ಸಾಂಪ್ರದಾಯಿಕವಾಗಿ ತಯಾರಿಸುವ ಹೋಲಿ ಬಣ್ಣ ಹಾಗೂ ಬಣ್ಣದ ನೀರು ಹಲವು ಔಷಧೀಯ ಮೂಲಿಕೆಯ ಆಗರ. ಈ ಬಣ್ಣಗಳಲ್ಲೂ ಔಷಧ ಅಡಗಿದೆ !

❖ಕುಂಕುಮ ನಿಸರ್ಗದತ್ತವಾಗಿ ಕಾಂತಿ ವರ್ಧಕವಾಗಿದ್ದು, ಕಲೆ, ಮೊಡವೆಗಳನ್ನು ನಿವರಣೆ ಮಾಡುತ್ತದೆ.

❖ಅರಸಿನ ಮೈಕಾಂತಿ ಹೆಚ್ಚಿಸುವುದು ಮಾತ್ರವಲ್ಲದೆ ಗಾಯ, ಕಲೆ ನಿವಾರಕ, ನಂಜು ನಿವಾರಕ (ಆಂಟಿಸೆಪ್ಟಿಕ್)ವೂ ಹೌದು.

❖ಹಸಿರು ಬಣ್ಣ ತಯಾರಿಸಲು ಬಳಸುವ ಕಹಿಬೇವು, ಬಿಲ್ವ, ದಾಸವಾಳ ಮೊದಲಾದ ಎಲೆಗಳು ಕ್ರಿಮಿನಾಶಕವಾಗಿದ್ದು, ತುರಿಕೆ, ಕಜ್ಜಿಗಳನ್ನು ನಿವಾರಿಸುತ್ತವೆ. ದಾಸವಾಳ ಕೂದಲ ಆರೋಗ್ಯ, ಕಾಂತಿಗೂ ಹಿತಕರ.

❖ಕಿತ್ತಳೆ ಬಣ್ಣಕ್ಕಾಗಿ ಪಲಾಶ (ಮುತ್ತುಗ) ಬಣ್ಣದ ಗಾಢ ವರ್ಣದ ಹೂಗಳನ್ನು, ಕೇಸರಿ ಬಣ್ಣವನ್ನು ಬಳಸಲಾಗುತ್ತದೆ. ಇವೆರಡೂ ಕ್ರಿಮಿನಾಶಕ (ಆಂಟಿ ಬ್ಯಾಕ್ಟೀರಿಯಲ್), ವೈರಾಣು ನಿರೋಧಕ (ಆಂಟಿ ವೈರಲ್).

❖ಗಾಢ ಕೆಂಪು ಬಣ್ಣಕ್ಕಾಗಿ ರಕ್ತಚಂದನದ ಪುಡಿ, ಒಣಗಿದ ಕೆಂಪು ದಾಸವಾಳ ಹೂವಿನ ಪುಡಿ, ಬೀಟ್‌ರೂಟ್‌ನ ರಸ ಮೊದಲಾವುಗಳ ಮಿಶ್ರಣ ಬಳಸಲಾಗುತ್ತದೆ.

❖ರಕ್ತಚಂದನ ದೇಹಕ್ಕೆ ರಂಗು, ಕಾಂತಿ ನೀಡುತ್ತದೆ. ದಾಸವಾಳದ ಹೂ, ಬೀಟ್‌ರೂಟ್ ರಸ ಮೊದಲಾದವು ದೇಹಕ್ಕೆ, ಚರ್ಮಕ್ಕೆ ಬಣ್ಣ ನೀಡುವುದರೊಂದಿಗೆ ಆರೋಗ್ಯಕಾರಕ ಪೋಷಕಾಂಶಗಳನ್ನೂ ಹೊಂದಿವೆ.

❖ಗಾಢ ಹಸುರು ವರ್ಣ ಪಡೆಯಲು ಮೆಹಂದಿ ಎಲೆ ಹಾಗೂ ಗುಲ್‌ಮೊಹರ್ ಎಲೆಗಳನ್ನು ಒಣಗಿಸಿ ಮಿಶ್ರ ಮಾಡಲಾಗುತ್ತದೆ. ಇವು ಕೂದಲಿನ ಆರೋಗ್ಯಕ್ಕೂ ಹಿತಕರ.

❖ವಿವಿಧ ರಂಗಿನ ಗೊಂಡೆಹೂ (ಮೆರಿಗೋಲ್ಡ್) ಅಥವಾ ಚೆಂಡುಹೂಗಳು ಬಣ್ಣಗಳೊಂದಿಗೆ ಆಹ್ಲಾದಕರ ಕಂಪನ್ನೂ ಹೊಂದಿರುವುದರಿಂದ ಮೋಲ್ಲಾಸಕರವೂ ಹೌದು. ಜೊತೆಗೆ ಚೆಂಡುಹೂಗಳ ರಂಗಿನ ನೀರು ಕೂದಲಿನ ಹೊಟ್ಟು ನಿವಾರಿಸುವುದಲ್ಲದೆ ಕೇಶಕಾಂತಿ ಹಾಗೂ ಚರ್ಮದ ಕಾಂತಿಯನ್ನೂ ಹೆಚ್ಚಿಸುತ್ತದೆ.

❖ನೀಲಿ ಬಣ್ಣ ಪಡೆಯಲು ನೀಲಿ ಗಿಡ (ಇಂಡಿಗೋ)ದ ಹೂ, ಎಲೆ, ಗಾಢ ವರ್ಣದದ್ರಾಕ್ಷಿ, ಕಪ್ಪು–ನೀಲಿ ಬಣ್ಣದ ಪುಡಿಗಳನ್ನು ಮುಖಕ್ಕೆ ಕೂದಲಿಗೆ ಲೇಪಿಸಿದರೆ ಜೀವಸತ್ವಗಳಿಂದ ಕೂಡಿದ ನೈಸರ್ಗಿಕ ಫೇಸ್‌ಪ್ಯಾಕ್, ಫೇಸ್‌ಮಾಸ್ಕ್‌ನಂತೆ ಸಹಕರಿಸುತ್ತವೆ.

❖ಬೀಟ್‌ರೂಟನ್ನು ಚೆನ್ನಾಗಿ ಕತ್ತರಿಸಿ ನೀರಲ್ಲಿ ಬೇಯಿಸಿ ಇಂಗಿಸಿದಾಗ ಮೆಜೆಂಟಾ ಬಣ್ಣ ಬರುತ್ತದೆ. ಇದು ವಿಟಮಿನ್‌ಗಳಿಂದ ಕೂಡಿದ ಬಣ್ಣದ ಓಕುಳಿಯಾಟದ ನೀರೇ ಸರಿ !!


❖ಕಂದು ಬಣ್ಣ ಪಡೆಯಲು ಒಣಗಿದ ಚಹಾದ ಪುಡಿ ಬಳಸಿದರೆ, ಗಾಢಕಂದು ಪಡೆಯಲು ಕಾಫಿಪುಡಿ, ಮೆಹಂದಿ ಎಲೆಯ ಪುಡಿ ಹಾಗೂ ಲವಂಗದ ಪುಡಿಗಳನ್ನು ಬೆರೆಸಲಾಗುತ್ತದೆ.

ಇವೆಲ್ಲಾ ಉತ್ತಮ ಹೇರ್ ಟಾನಿಕ್‌ಗಳು, ನೈಸರ್ಗಿಕ ಚರ್ಮರಕ್ಷಕಗಳು.

ಕಪ್ಪು ಬಣ್ಣವೂ ಈ ರಂಗಿನ ಓಕುಳಿಯಾಟದಲ್ಲಿ ಹೊರತಾಗಿಲ್ಲ. ಕಪ್ಪುದ್ರಾಕ್ಷಿ, ನೆಲ್ಲಿಕಾಯಿಯ ಪುಡಿ, ತರಕಾರಿಗಳನ್ನು ಸುಟ್ಟುಚೂರ್ಣ ಮಾಡಿ ತಯಾರಿಸಿದ ಪುಡಿ ಇವೆಲ್ಲಾ ತಲೆಗೂ ಕೂದಲಿನ ಆರೋಗ್ಯ, ಸೌಂದರ್ಯಕ್ಕೆ ಪೂರಕವಾದವು; ಚರ್ಮಕ್ಕೂ ಹಿತಕರ.

ಇವೆಲ್ಲವುಗಳ ಮಿಶ್ರಣಗಳನ್ನು ಬಳಸಿದಾಗ ಹಬ್ಬದ ಖುಶಿಯೊಂದಿಗೆ ದೇಹದ, ಮನದ ಆರೋಗ್ಯ, ಸೌಂದರ್ಯ ವರ್ಧನೆ ಸಹಜವಾಗಿಯೇ ಉಂಟಾಗುತ್ತದೆ. ಮಾತ್ರವಲ್ಲ, ಶಿಶಿರ ಕಾಲ ಕಳೆದು ವಸಂತ ಆಗಮಿಸುವ ಸಮಯದಲ್ಲಿ ವಿವಿಧ ವೈರಲ್ ಸೋಂಕು (ಚಿಕನ್‌ಪಾಕ್ಸ್–ಗೋರ)ಗಳನ್ನು ತಡೆಗಟ್ಟಲೂ ಇವು ಸಹಾಯಕ. ಅಲ್ಲದೆ ವಾತಾವರಣವನ್ನೂ ಶುದ್ಧೀಕರಿಸುತ್ತವೆ. ॐ

# ವಿಶ್ವಮಾನ್ಯ ಕವಿ, ಎ.ಕೆ. ರಾಮಾನುಜನ್



ಎ.ಕೆ ರಾಮಾನುಜನ್ ವಿಶ್ವಮಾನ್ಯ ಕವಿ, ವಿದ್ವಾಂಸ, ಪ್ರಾಧ್ಯಾಪಕ, ಜನಪದ ತಜ್ಞ, ಶ್ರೇಷ್ಠ ಭಾಷಾ ತಜ್ಞ, ಭಾಷಾಂತರಕಾರ ಹೀಗೆ ವಿವಿಧ ಪ್ರತಿಭೆಗಳ ಮಹೋನ್ನತ ಸಂಗಮರಾದ ಅತ್ತಿಪೇಟೆ ಕೃಷ್ಣಸ್ವಾಮಿ ರಾಮಾನುಜನ್ ಅವರು ಮಾರ್ಚ್ 16, 1929ರಲ್ಲಿ ಮೈಸೂರಿನಲ್ಲಿ ಜನಿಸಿದರು.. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಬಿ.ಎ. ಮತ್ತು ಎಮ್.ಎ. ಪದವಿ ಮುಗಿಸಿ ಅಧ್ಯಾಪಕರಾದರು. ಅಮೆರಿಕದ ಇಂಡಿಯನ್ ಯುನಿವರ್ಸಿಟಿಯಲ್ಲಿ ಭಾಷಾವಿಜ್ಞಾನದಲ್ಲಿ ಪಿ.ಎಚ್.ಡಿ. ಪದವಿ ಗಳಿಸಿದರು. 1962ರಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನ ಹಾಗೂ ದ್ರಾವಿಡ ಅಧ್ಯಯನದ ಅಧ್ಯಾಪಕರಾಗಿ ಸೇರಿದ ರಾಮಾನುಜನ್ 1993ರಲ್ಲಿ ನಿಧನರಾಗುವತನಕದ ತಮ್ಮ ಬಹುತೇಕ ವೃತ್ತಿ ಜೀವನವನ್ನು ಅಲ್ಲಿಯೇ ನಡೆಸಿದರು. ಜೊತೆಗೆ ವಿಸ್ಕಾಸಿನ್, ಬರ್ಕಲಿ, ಮಿಚಿಗನ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾದ್ಯಾಪಕರಾಗಿದ್ದರು. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ದಕ್ಷಿಣ ಏಷ್ಯಾ ಭಾಷೆಗಳ ಅಧ್ಯಯನ ಪೀಠ ಸ್ಥಾಪನೆ ಮಾಡಿದ ಕೀರ್ತಿ ಎ. ಕೆ. ರಾಮಾನುಜನ್ ಅವರಿಗೆ ಸಲ್ಲುತ್ತದೆ..

ರಾಮಾನುಜನ್ ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆಗಳನ್ನು ಕೊಡುವುದರ ಜೊತೆಗೆ ಜೊತೆಗೆ ಕನ್ನಡದ ಕಸ್ತೂರಿಯನ್ನು ವಿಶ್ವದೆಲ್ಲೆಡೆ ಇಂಗ್ಲಿಷ್ ಭಾಷೆಯ ಮೂಲಕ ಪಸರಿಸುವ ಮನೋಜ್ಞ ಕಾರ್ಯ ಮಾಡಿದರು. ಈ ನಿಟ್ಟಿನಲ್ಲಿ ಅವರು ಇಂಗ್ಲಿಷ್‌ನಲ್ಲಿ ಮೂಡಿಸಿದ ಬಸವಣ್ಣನವರ 'ಉಳ್ಳವರು ಶಿವಾಲಯವ ಮಾಡುವರು' ವಚನದ ಕನ್ನಡದ ಭಾಷಾಂತರ ಇಲ್ಲಿ ನೆನಪಾಗುತ್ತದೆ.

ಪ್ರಸಿದ್ದ ನವ್ಯ ಕವಿ ಗೋಪಾಲಕೃಷ್ಣ ಅಡಿಗರ ಪ್ರಭಾವದಿಂದ ಹೊರಬಂದು ಹೊಸ ಸಂವೇದನೆಗಳೊಂದಿಗೆ ತಮ್ಮದೇ ಆದ ರೀತಿಯಲ್ಲಿ ಕಾವ್ಯ ರಚಿಸಿದ ರಾಮಾನುಜನ್ ಅವರು ಮೂರು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಹೊಕ್ಕುಳಲ್ಲಿ ಹೂವಿಲ್ಲ' (1969) ಇವರ ಪ್ರಥಮ ಸಂಕಲನ. ಪದ್ಯ ರಚನೆ, ಭಾಷಾ ಬಳಕೆ, ಪ್ರತಿಮೆಗಳ ಬಳಕೆ– ಈ ದೃಷ್ಟಿಯಿಂದ ಇವರ ಕವನಗಳಿಗೆ ನವ್ಯ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. 'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು' ಅಲ್ಲದೆ 'ಕುಂಟೋ ಬಿಲ್ಲೆ', 'ಮತ್ತೊಬ್ಬನ ಆತ್ಮಚರಿತ್ರೆ' ಎ. ಕೆ. ರಾಮಾನುಜನ್ ಅವರ ಪ್ರಸಿದ್ಧ ಕೃತಿಗಳು. ರಾಮಾನುಜನ್ ಅವರ ಕೃತಿಗಳ ಸಮಗ್ರ ಸಂಪುಟವನ್ನು ಮನೋಹರ ಗ್ರಂಥಮಾಲೆ ಹೊರತಂದಿದ್ದು ಅದರಲ್ಲಿ ರಾಮಾನುಜನ್ ಅವರ ಮೂರು ಕವನ ಸಂಕಲನಗಳು, ಒಂದು ಕಾದಂಬರಿ, ನಾಲ್ಕು ಸಣ್ಣ ಕತೆಗಳು, ಎರಡು ರೇಡಿಯೋ ನಾಟಕಗಳು, ಗಾದೆಗಳನ್ನು ಕುರಿತ ಕಿರು ಹೊತ್ತಿಗೆಗಳು ಇಲ್ಲಿ ಕೂಡಿವೆ. 'ನಡೆದು ಬಂದ ದಾರಿ' ಗ್ರಂಥದಲ್ಲೂ, 'ಸಾಕ್ಷಿ' ಪತ್ರಿಕೆಯಲ್ಲೂ ಪ್ರಕಟವಾಗಿರುವ ಕವನಗಳೂ, ಐವತ್ತರ ದಶಕದಲ್ಲಿ ರಾಶಿ ಅವರ 'ಕೊರವಂಜಿ'ಯಲ್ಲಿ ಪ್ರಕಟವಾದ ಹಲವು ನಗೆ ಬರಹಗಳೂ ಇಲ್ಲಿ ಸೇರಿವೆ.

ಇಂಗ್ಲಿಷ್ ಭಾಷೆಯಲ್ಲಿ ಬರೆಯುತ್ತಿದ್ದ ಪ್ರಮುಖ ಭಾರತೀಯ ಲೇಖಕರಲ್ಲಿ ರಾಮಾನುಜನ್ ಅವರೂ ಒಬ್ಬರು. 1966 ರಲ್ಲಿ ರಾಮಾನುಜನ್ ಅವರ 'ದಿ ಸ್ಟ್ರೈಡರ್ಸ್' ಮತ್ತು 1971 ರಲ್ಲಿ 'ರಿಲೇಶನ್ಸ್' ಎಂಬ ಕವನ ಸಂಕಲನಗಳು ಪ್ರಕಟವಾದವು. ಕನ್ನಡ, ಇಂಗ್ಲಿಷ್, ತಮಿಳು, ಮಲಯಾಳಂ, ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿರುವ ರಾಮಾನುಜನ್ ಅವರು ಭಾಷಾವಿಜ್ಞಾನ, ಜಾನಪದ, ಭಾರತೀಯ ಸಾಹಿತ್ಯ ಈ ಮೊದಲಾದ ವಿಷಯಗಳನ್ನು ಕುರಿತಾಗಿ ಬರೆದ ಲೇಖನಗಳು ಭಾರತ, ಅಮೇರಿಕ, ಗ್ರೇಟ್‌ಬ್ರಿಟನ್, ಮೊದಲಾದ ದೇಶಗಳ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ರಾಮಾನುಜನ್ ಕೇವಲ ಕವಿಗಳಾಗಿರದೆ ಉತ್ತಮ ಭಾಷಾಂತರಕಾರರೂ ಹೌದು. ಕನ್ನಡ ವಚನ ಸಾಹಿತ್ಯವನ್ನು ಪಾಶ್ಚಾತ್ಯ ಜಗತ್ತಿಗೆ ಪರಿಚಯಿಸಿ ಕೊಡುವ ಒಂದು ವಿಶಿಷ್ಟ ಪ್ರಯತ್ನ 'ಸ್ಪೀಕಿಂಗ್ ಆಫ್ ಶಿವ' (1973). 'ದಿ ಇಂಟೀರಿಯರ್ ಲ್ಯಾಂಡ್ ಸ್ಕೇಪ್' (1970) ಎಂಬ ಪುಸ್ತಕದಲ್ಲಿ ಪ್ರಾಚೀನ ತಮಿಳು ಸಾಹಿತ್ಯದಿಂದ ಆರಿಸಿದ ಭಾಗಗಳನ್ನು ಅನುವಾದಿಸಲಾಗಿದೆ. ಎಂ.ಜಿ.ಕೃಷ್ಣಮೂರ್ತಿಯವರೊಡನೆ ಗೋಪಾಲಕೃಷ್ಣ ಅಡಿಗರ ಕೆಲವು ಕವನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಇದರ ಹೆಸರು 'ಸಾಂಗ್ ಆಫ್ ಅರ್ಥ್ ಅಂಡ್ ಅದರ್ ಪೊಯಂ' (1968). ಯು.ಆರ್. ಅನಂತಮೂರ್ತಿಯವರ ಸುಪ್ರಸಿದ್ದ ಕಾದಂಬರಿ 'ಸಂಸ್ಕಾರ'ವನ್ನು ಅವರು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ.

ರಾಮಾನುಜನ್ ಅವರು ಇಂಗ್ಲಿಷಿನಿಂದಲೂ ಕನ್ನಡಕ್ಕೆ ಕೆಲವು ಕೃತಿಗಳನ್ನು ಭಾಷಾಂತರಿಸಿದ್ದಾರೆ. 'ಹಳದಿಮೀನು' ಕಾದಂಬರಿ ಅವುಗಳಲ್ಲಿ ಒಂದು. ಕನ್ನಡ ಜನಪದ ಸಾಹಿತ್ಯದ ಒಂದು ಮುಖ್ಯ ಪ್ರಕಾರವಾದ ಗಾದೆಗಳನ್ನು ಕುರಿತಂತೆ 1955 ರಷ್ಟು ಹಿಂದೆಯೇ 'ಗಾದೆಗಳು' ಎಂಬ ಕಿರು ಗ್ರಂಥವನ್ನು ಇವರು ಪ್ರಕಟಿಸಿದ್ದರು. ಇಲ್ಲಿ ಗಾದೆಯ ರೂಪರಚನೆಗಳ ಜೊತೆಗೆ ಕೆಲವು ಕನ್ನಡ ಗಾದೆಗಳ ವಿಶ್ಲೇಷಣೆಯೂ ಸೇರಿದೆ. ಕರ್ನಾಟಕದಲ್ಲಿ ಜಾನಪದದ ಬಗ್ಗೆ ಇನ್ನೂ ಅಷ್ಟಾಗಿ ವೈಜ್ಞಾನಿಕ ಪ್ರಜ್ಞೆ ಮೂಡದೆ ಇದ್ದಂಥ ಸಂದರ್ಭದಲ್ಲಿ ಈ ಕೃತಿ ಪ್ರಕಟವಾದದ್ದು ಮಹತ್ವದ ಸಂಗತಿ.

ಕನ್ನಡ ಸಾಹಿತ್ಯದ ಬಗ್ಗೆ ಅದರಲ್ಲಿಯೂ ಸಮಕಾಲೀನ ಸಾಹಿತ್ಯದ ಬಗ್ಗೆ ಅಪಾರ ಕಾಳಜಿ, ಶ್ರದ್ಧೆ ಹೊಂದಿದ್ದ ರಾಮಾನುಜನ್ ಅವರು ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಡುವ ಕಾರ್ಯದಲ್ಲಿ ತೊಡಗಿದ್ದರು. ಈ ಕುರಿತು ಅವರು ಅಮೆರಿಕ ಮೊದಲಾದೆಡೆಗಳಲ್ಲಿ ಉಪನ್ಯಾಸಗಳನ್ನೂ ನೀಡಿದ್ದರು. ಅನೇಕ ಲೇಖನಗಳನ್ನು ಬರೆದಿದ್ದರು. 'ಡಿಕ್ಷನರಿ ಆಫ್ ಓರಿಯಂಟಲ್ ಲಿಟರೇಚರ್ – ಸೌತ್ ಅಂಡ್ ಸೌತ್ ಈಸ್ಟ್ ಏಷ್ಯಾ' (1975) ಎಂಬ ಗ್ರಂಥದಲ್ಲಿ ಕನ್ನಡದ ಪ್ರಸಿದ್ಧ ಲೇಖಕರನ್ನು ಕುರಿತಂತೆ ಇವರು ಬರೆದ ಲೇಖನಗಳಿವೆ.


ರಾಮಾನುಜನ್‌ರ ಇಂತಹ ಬಹುಮುಖ ಸೇವೆಯನ್ನು ಗಮನಿಸಿದ ಭಾರತಸರ್ಕಾರ 1976 ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1983 ರಲ್ಲಿ ಅವರಿಗೆ ಪ್ರಸಿದ್ಧ ಮ್ಯಾಕ್ ಆರ್ಥರ್ ಫೆಲ್ಲೋಷಿಪ್ ಗೌರವ ಅರ್ಪಿತವಾಯಿತು. ॐ




ಭಗವದ್ಗೀತೆ ಓದಬೇಕು ಅಂತ ಬಹುತೇಕ ಹಿಂದೂಗಳಿಗೆ ಆಸೆ ಇರುತ್ತದೆ. ಭಗವದ್ಗೀತೆಯಲ್ಲಿ ಅಂಥದ್ದೇನಿದೆ ತಿಳ್ಕೋಬೇಕೆಂಬ ಕುತೂಹಲ. ಆದರೆ, 700 ಶ್ಲೋಕಗಳಿರುವ ಪುಸ್ತಕದ ಗಾತ್ರ ನೋಡಿ ಕೆಲವರು ಓದಲು ಹಿಂಜರಿದರೆ, ಮತ್ತೆ ಕೆಲವರು ಆ ಶ್ಲೋಕ ಗೀಕ ಎಲ್ಲ ಯಾರು ಓದ್ತಾರೆ ಅಂತ ಸುಮ್ನಾಗಿರ್ತಾರೆ. ನಿಮ್ಮಂಥವರಿಗಾಗಿಯೇ ಸರಳವಾಗಿ ಒಂದೊಂದು ಅಧ್ಯಾಯಗಳ ಸಾರವನ್ನೂ ಒಂದೆರಡು ಸಾಲಿನಲ್ಲಿ ಇಲ್ಲಿ ಕೊಡಲಾಗಿದೆ.

ಭಗವದ್ಗೀತೆ

## ಅಧ್ಯಾಯ 14



### ನಿನ್ನದೃಷ್ಟಿಕೋನಕ್ಕೆ ಹೊಂದುವ ಜೀವನಶೈಲಿ ಅಳವಡಿಸಿಕೋ..

ಎಲ್ಲರಲ್ಲೂ ಮೂರು ಗುಣಗಳಿರುತ್ತವೆ. ಸಾತ್ವಿಕ ಗುಣವು ಬೆಳಕಿನ, ಸುಖದ, ವಿಚಾರದ ರೂಪ, ರಜೋಗುಣವು ಪ್ರೀತಿ, ಬಯಕೆ ಅಹಂಕಾರದ ಕ್ರಿಯಾಶೀಲ ರೂಪ, ತಮವು ಅಜ್ಞಾನ, ತಪ್ಪು ತಿಳುವಳಿಕೆ, ಆಲಸ್ಯದ ರೂಪ. ಇವುಗಳಲ್ಲಿ ಶಕ್ತವಾದ ಗುಣ ಆತ್ಮವನ್ನು ಕಟ್ಟಿಹಾಕುತ್ತದೆ. ಎಲ್ಲರಲ್ಲಿಯೂ ಇಷ್ಟೂ ಗುಣಗಳಿದ್ದರೂ ಒಂದು ಗುಣ ಮೇಲುಗೈ ಸಾಧಿಸುವುದು. ಸಾತ್ವಿಕ ಗುಣದವನು ಮೋಕ್ಷ, ರಾಜಸಿಕ ಗುಣದವನು ಪುನರ್ಜನ್ಮ ಹಾಗೂ ತಾಮಸಿಕ ಗುಣದವನು ಕೆಳಮಟ್ಟದ ಜನ್ಮವೆತ್ತುತ್ತಾನೆ ಎಂದು ಕೃಷ್ಣ ಹೇಳುತ್ತಾನೆ. ॐ

ಮುಂದುವರಿಯುವುದು................





# ಭಾರತವೆಂದರೆ ಮಾನವತೆಯ ಚಿಲುಮೆ

✍ ಡಾ. ರೋಹಿಣಾಕ್ಷ ಶಿರ್ಲಾಲು, ಸಹಾಯಕ ಪ್ರಾಧ್ಯಾಪಕರು

ಭಾರತ ವಿಶ್ವಗುರುವಾಗಬಹುದೇ? ಎಂಬ ಪ್ರಶ್ನೆಗೆ ಸ್ವಾಭಿಮಾನಿ ಭಾರತೀಯರು ಹೆಮ್ಮೆಯಿಂದ ಹೌದೆನ್ನುತ್ತಿದ್ದರೆ, ಕೆಲವು ಗುಲಾಮಿ ಮನಸ್ಥಿತಿಯ ಜನರು ಈ ಶಬ್ದವನ್ನೇ ಅಪಭ್ರಂಶಗೊಳಿಸಿ ವಿಕೃತ ಆನಂದವನ್ನು ಪಡುತ್ತಿರುತ್ತಾರೆ. ಭಾರತದ ದಾರ್ಶನಿಕರಲ್ಲೊಬ್ಬರಾದ ಮಹರ್ಷಿ ಅರವಿಂದರು ಶತಮಾನದ ಪೂರ್ವದಲ್ಲೇ ಜಗಜ್ಜನನಿ ಭಾರತದ ಕಲ್ಪನೆಯನ್ನು ಮುಂದಿಟ್ಟಿದ್ದರು. ಭಾರತದ ಶಕ್ತಿಯನ್ನು ಶ್ರೀ ಅರವಿಂದರಂತೆ ಲೋಕದ ಮುಂದೆ ಮಂಡಿಸಿದವರು ವಿರಳ. ಇನ್ನೂ ಬ್ರಿಟಿಷ್ ಗುಲಾಮಗಿರಿಯಲ್ಲಿ ಭಾರತ ನರಳುತ್ತಿದ್ದಾಗಲೂ ಭಾರತದ ಶಕ್ತಿಯು ಕುಂದಿಲ್ಲ ಎನ್ನುವ ವಿಶ್ವಾಸಭರಿತ ಮಾತುಗಳನ್ನಾಡಿದ್ದವರು ಶ್ರೀ ಅರವಿಂದರು. ಪರಕೀಯರ ಕೈಯಲ್ಲಿ ಸಿಲುಕಿಕೊಂಡಿದ್ದ ಭಾರತ ತನ್ನ ಸತ್ವವನ್ನೆಲ್ಲಾ ಕಳೆದುಕೊಂಡು ದುರ್ಬಲವಾಗಿದೆ ಎನ್ನುವ ಭಾವನೆ ಸಾರ್ವತ್ರಿಕವಾಗಿದ್ದಾಗ ಮಹರ್ಷಿ "ನಮ್ಮ ಆರ್ಷೇಯ ಭಾರತ ಸತ್ತುಹೋಗಿಲ್ಲ. ಇಲ್ಲವೇ ಲೋಕಕ್ಕೆ ತಾನು ನೀಡಬೇಕಾದ ಸಂದೇಶದ ಭರತವಾಕ್ಯವನ್ನೇನೂ ಅದು ನುಡಿದು ಮುಗಿಸಿಲ್ಲ. ಭಾರತ ಇನ್ನೂ ಜೀವಂತವಾಗಿದೆ. ಅದು ತನ್ನುದ್ಧಾರಕ್ಕಾಗಿಯೂ ಲೋಕದ ಮಾನವಕುಲೋದ್ಧಾರಕ್ಕಾಗಿಯೂ ಇನ್ನೂ ಮಾಡಬೇಕಾದ ಕೆಲಸ ಇದೆ" ಎಂದಿದ್ದರು.

ಭಾರತದ ನಿಜಶಕ್ತಿಯನ್ನು ಈ ದೇಶದ ಜನರಿಗೆ ಪರಿಚಯಿಸಿಕೊಟ್ಟವರು ತಪಸ್ವಿ ಅರವಿಂದರು. ಶತಮಾನಗಳ ಕಾಲ ಸೋಲುಗಳನ್ನು ಅನುಭವಿಸಿದರೂ ಈ ಜನಾಂಗದೊಳಗೊಂದು ಅಪಾರವಾದ ಶಕ್ತಿಯಿದೆ. ಇಡೀ ಭೂಲೋಕಕ್ಕೆ ಅನ್ವಯಿಸುವ ಭವಿಷ್ಯತ್ ಧರ್ಮವು ಭಾರತದಿಂದ ಮಾತ್ರ ಹೊರಹೊಮ್ಮಿ ವಿಶ್ವಕ್ಕೆ ಪಸರಿಸುವುದೆನ್ನುವ ವಿಶ್ವಾಸ ಅವರ ಮಾತುಗಳಲ್ಲಿ ಪ್ರಕಟವಾಗಿತ್ತು. ಈ ಭೂಖಂಡದೊಳಗೊಂದು ಅಪೂರ್ವ ಬೆಳಕಿದೆ. ಆ ಬೆಳಕನ್ನು ಭಾರತ ತನ್ನಲ್ಲಿಯೇ ಬಚ್ಚಿಟ್ಟುಕೊಳ್ಳಲಾರದು. ಇಡೀ ಭೂಖಂಡಕ್ಕೆ ಹಬ್ಬಿಸುವುದೆನ್ನುವ ವಿಶ್ವಾಸವೂ ಅಲ್ಲಿತ್ತು. ಈ ಯೋಗ ವಿದ್ಯೆಯ ಜ್ಞಾನದ ಬೆಳಕಿನಲ್ಲಿಯೇ ಮಾನವಕುಲದ ವಿಕಾಸವಿದೆ. ಲೋಕಕ್ಕೆ ಬೇಕಾದ ಬೆಳಕನ್ನು ನೀಡುವುದು ಭಾರತದ ಕರ್ತವ್ಯವಾಗಿದೆ ಎಂದಿದ್ದರು. ಶ್ರೀ ಅರವಿಂದರ ಮಾತುಗಳಿಂದು ಮತ್ತೆ ಮತ್ತೆ ಸ್ಪಷ್ಟವಾಗುತ್ತಿದೆ. ಜಗತ್ತು ಇಂದು ಭಾರತದ ಕುರಿತು ಅಂತಹದ್ದೊಂದು ನಿರೀಕ್ಷೆಯನ್ನು ಹೊಂದಿದೆ. ತತ್ಕಾಲೀನ ಆಪತ್ತು ಮಾತ್ರವಲ್ಲ, ವಿಶ್ವವು ಎದುರಿಸುತ್ತಿರುವ ಅನೇಕ ಶಾಶ್ವತ ಸಮಸ್ಯೆಗಳಿಗೆ ಪರಿಹಾರವನ್ನು ಭಾರತಮಾತ್ರ ಕೊಡಬಲ್ಲದೆನ್ನುವ ನಿರೀಕ್ಷೆಯಿಟ್ಟುಕೊಂಡಿದೆ.

ತಾತ್ವಿಕವಾಗಿ ಪಶ್ಚಿಮ ದೇಶಗಳು ಅವಸಾನದ ಕಡೆಗೆ ಸಾಗುತ್ತಿದೆ. "ಯಾವಾಗ ಶಕ್ತಿಗುಂದಿ, ಚೈತನ್ಯ ಕ್ಷೀಣವಾಗಿ ಲೋಕ ಮುಪ್ಪಾಗಿ ಮುದುಡಿ ಹೋಗುವುದೋ, ಯಾವಾಗ ವಿಪರೀತ ಪ್ರಾಪಂಚಿಕತೆ ತುಂಬಿಹೋಗಿ ತಾನು ಬಗೆಹರಿಸಲಾರದ ಸಮಸ್ಯೆಗಳಿಂದ ಬೇಸತ್ತು ಹೋಗುವುದೋ ಆಗ, ಮಾನವಕುಲಕ್ಕೆ ಯೌವನವನ್ನು, ಪೌರುಷವನ್ನು, ಅಮೃತತ್ವದ ಭರವಸೆಯನ್ನು ಕೊಡುವುದೇ ಭಾರತ ದೇಶದ ಕರ್ತವ್ಯ. ಇದಕ್ಕಾಗಿಯೇ ಭರತಖಂಡ ಭೂಲೋಕಕ್ಕೆ ಬೇಕು" (ಭಾರತದ ಮರುಹುಟ್ಟು) ಎನ್ನುವ ಮಾತಿನಲ್ಲಿ ವ್ಯಕ್ತವಾದುದು ಅಪೂರ್ವ ವಿಶ್ವಾಸ. ಭಾರತವು ಪುನಃ ತಲೆ ಎತ್ತಿ ನಿಲ್ಲುವುದರಿಂದ ಲೋಕದ ಮೇಲೆ ಅಗಾಧವಾದ ಪರಿಣಾಮ ಉಂಟಾಗುತ್ತದೆ ಎನ್ನುವ ಮಾತು ಕೇವಲ ಆಶಾವಾದವಲ್ಲ.

ಇಂದು ಅನೇಕರಿಗೆ ರಾಜಕೀಯ ಕಾರಣಗಳಿಂದ ಭಾರತದ ಹಿರಿಮೆಯ ಬಗೆಗೆ ಮಾತುಗಳನ್ನಾಡುವುದು ಸಹ್ಯವಾಗುತ್ತಿಲ್ಲ. ರಾಜಕೀಯ ಭಿನ್ನಾಭಿಪ್ರಾಯಗಳು ಬೇರೆ, ರಾಷ್ಟ್ರಾಭಿಮಾನ ಬೇರೆ ಎಂದು ಅರ್ಥಮಾಡಿಕೊಳ್ಳಲಾರದ ಕೆಲವು

ಮೂರ್ಖರು ದೇಶವನ್ನೇ ತುಚ್ಛವಾಗಿ ನಿಂಧಿಸುವ ಮಟ್ಟದಲ್ಲಿದ್ದಾರೆ. ಆದರೆ ಈ ರಾಷ್ಟ್ರವು ಕೇವಲ ತುಂಡು ನೆಲವಲ್ಲ, ಒಂದು ಸಜೀವ ಆತ್ಮ, ಇಡೀ ಭೂಲೋಕದ ಆಧ್ಯಾತ್ಮಿಕ ಜ್ಞಾನದ ಅಧಿದೇವತೆ. ಭಾರತಮಾತೆ ಲೋಕಗುರು, ಜಗಜ್ಜನನಿ ಎಂದಿದ್ದ ಶ್ರೀ ಅರವಿಂದರು "ಈ ಮಹಾನ್ ಹಾಗೂ ಪ್ರಾಚೀನ ರಾಷ್ಟ್ರವು ಒಂದು ಕಾಲಕ್ಕೆ ಮಾನವತೆಯ ಬೆಳಕಿನ ಚಿಲುಮೆಯಾಗಿತ್ತು; ಮಾನವ ನಾಗರಿಕತೆಯ ತುತ್ತತುದಿಯಾಗಿತ್ತು; ವಿವೇಕ ಹಾಗೂ ತತ್ವಜ್ಞಾನಗಳ ಗುರುವಾಗಿತ್ತು" ಎನ್ನುವ ಮೂಲಕ ಈ ನೆಲದ ಗುಣ ವಿಶೇಷವನ್ನು ವಿಶ್ವಕ್ಕೆ ತೋರಿಸಿದ್ದರು. ಈ ನೆಲದ ಜ್ಞಾನ, ಚಾರಿತ್ರ್ಯ ಮತ್ತು ಉದಾತ್ತ ಚಿಂತನೆಗಳು ಭಾರತಕ್ಕಾಗಿ ಮಾತ್ರವಲ್ಲ ಜಗತ್ತಿಗಾಗಿ ಉಳಿಸಿಕೊಳ್ಳಬೇಕಾದುದು. ಯಾಕೆಂದರೆ, "ಭಾರತ ವಿಶ್ವರಾಷ್ಟ್ರಗಳ ಗುರು. ಮಾನವನಾತ್ಮದ ಗಂಭೀರ ರೂಪದ ವ್ಯಾಧಿಗಳ ಧನ್ವಂತರಿ. ಭಾರತವು ಜಗತ್ತಿನ ಜೀವನವನ್ನು ಪುನರ್ರೂಪಿಸಲು ಬೇಕಾಗಿದೆ. ಮಾನವತೆಗಾಗಿ ನಾವು ಮಾಡಬೇಕಾಗಿರುವ ಕಾರ್ಯವನ್ನು ಬೇರಾವ ದೇಶವೂ ಮಾಡಲು ಸಾಧ್ಯವಾಗದು.

ಭಾರತವು ಒಂದು ಭವ್ಯ ಆಧ್ಯಾತ್ಮಿಕ ಪ್ರಯೋಗಾಲಯವಾಗಿದೆ" ಎನ್ನುವ ವಿಶ್ವಾಸದ ನುಡಿಗಳಲ್ಲಿ ಶ್ರೀ ಅರವಿಂದರು ಭಾರತದ ಚಿತ್ರಣವನ್ನು ನೀಡಿದ್ದರು. ಈ ಮಾತುಗಳನ್ನು ಹೇಳುತ್ತಲೇ ಭಾರತಕ್ಕೆ ಎಚ್ಚರಿಕೆಯನ್ನೂ ನೀಡಿದ್ದರು. ಬಹುಶಃ ನಮ್ಮನ್ನಾಳಿದ ವ್ಯವಸ್ಥೆ ಶ್ರೀ ಅರವಿಂದರ ಮಾತಿಗೆ ಕಿವಿಯಾಗದ ಪರಿಣಾಮವನ್ನು ನಾವಿಂದು ನೋಡುತ್ತಿದ್ದೇವೆ. "ಭಾರತವು ಯುರೋಪಿನ ಹೆಜ್ಜೆಗಳನ್ನು ಅನುಸರಿಸಿದರೆ, ಐರೋಪ್ಯ ರಾಜಕೀಯ ಆದರ್ಶಗಳನ್ನು, ಸಾಮಾಜಿಕ ವ್ಯವಸ್ಥೆಯನ್ನು, ಆರ್ಥಿಕ ತತ್ವಗಳನ್ನು ಅಂಗೀಕರಿಸಿದರೆ ಅದೇ ಜಾಡ್ಯಗಳಿಗೆ ತಾನೂ ಗುರಿಯಾಗುತ್ತದೆ. ಯಾವುದೇ ರಾಷ್ಟ್ರವು ತನ್ನಸ್ತಿತ್ವದ ಉದ್ದೇಶವನ್ನೇ ಬಿಟ್ಟುಕೊಟ್ಟು ವಿಕಾಸಗೊಳ್ಳುವುದು ಅಸಾಧ್ಯ.

ಭಾರತ ತನ್ನ ಭವಿತವ್ಯವನ್ನು ಸಾಧಿಸಬೇಕಾದರೆ ಭಾರತವಾಗಿಯೇ ಉಳಿಯಬೇಕು" ಎಂದಿದ್ದರು.ಇದು ಸಾಧ್ಯವಾಗಬೇಕಾದರೆ ವ್ಯಕ್ತಿಯೊಳಗೆ ಇರಬೇಕಾದ ಗುಣವನ್ನೂ ಗುರುತಿಸಿದ್ದರು. "ಭಾರತಮಾತೆಯ ಗರ್ಭದಲ್ಲಿ ರೂಪುಗೊಂಡ ದೇಹ, ಭಾರತಕ್ಕಾಗಿ ಮಿಡಿಯುವ ಹೃದಯ, ಆಕೆಯ ಹಿರಿಮೆಗಾಗಿ ಚಿಂತಿಸುವ ಹಾಗೂ ಯೋಚಿಸುವ ಮೆದುಳು, ಆಕೆಯನ್ನು ಆರಾಧಿಸುವ ನಾಲಿಗೆ, ಆಕೆಯ ಹೋರಾಟದಲ್ಲಿ ಪಾಲ್ಗೊಳ್ಳುವ ತೋಳುಗಳು" ಇದ್ದರೆ ಮಾತ್ರ ಭಾರತಕ್ಕೆ ಇತಹದ್ದೊಂದು ಮರುಹುಟ್ಟು ನೀಡಬಹುದು ಎನ್ನುವ ನಂಬಿಕೆ ಅವರಲ್ಲಿ ಇತ್ತು. ಹೀಗಾದಾಗ ಮಾತ್ರ ಭಾರತ ಮತ್ತೆ ಪುನರುತ್ಥಾನಗೊಳ್ಳುವುದು ಸಾಧ್ಯ.

ಹಾಗಾದರೆ ಭಾರತದ ಪುನರುತ್ಥಾನ ಎಂದರೆ ಏನು? "ಭಾರತದ ಉತ್ಥಾನವೆಂದರೆ ಸನಾತನ ಧರ್ಮದ ಉತ್ಥಾನವೇ ಆಗಿದೆ. ಭಾರತದ ಹಿರಿಮೆ ಎಂದರೆ ಸನಾತನ ಧರ್ಮದ ಹಿರಿಮೆಯೆಂದೇ ಅರ್ಥ. ಭಾರತವು ವಿಸ್ತಾರಗೊಂಡು ಬೆಳೆಯುವುದೆಂದರೆ ಸನಾತನ ಧರ್ಮವು ವಿಸ್ತಾರಗೊಂಡು ವಿಶ್ವದೆಲ್ಲೆಡೆ ಹರಡುವುದು ಎಂದು. ಭಾರತದ ಅಸ್ತಿತ್ವವು ಧರ್ಮದಿಂದಾಗಿ, ಧರ್ಮಕ್ಕಾಗಿ" ಎಂದಿದ್ದರು. ಭಾರತದ ಹಿರಿಮೆಗೆ ಕಾರಣವಾದ ಬಹುಮುಖ್ಯ ಸಂಗತಿ ಎಂದರೆ ಇಲ್ಲಿನ ಆಧ್ಯಾತ್ಮಿಕ ಜಾಗೃತಿ. ಈ ರಾಷ್ಟ್ರದ ನಿಜ ಆತ್ಮಭಾವದ ಪುನರ್ ಜಾಗೃತಿ ಮುಖ್ಯ. ಇಂತಹ ಭಾರತ ಇಚ್ಛಿಸಿದರೆ ಜಗತ್ತಿಗೆ ಮಾರ್ಗದರ್ಶಕವಾಗಬಲ್ಲದು. ಭಾರತವು ಮಾನವ ಜನಾಂಗದ ಭವಿಷ್ಯದ ಕೀಲಿಕೈ ಹೊಂದಿದೆ ಎನ್ನುವುದು ಅರವಿಂದರ ನಂಬಿಕೆಯಾಗಿತ್ತು. ಈ ಭಾರತದ ಗತಕಾಲವನ್ನು ಸರಿಯಾಗಿ ಅಧ್ಯಯನ ಮಾಡಿದರೆ ಇದರ ಶಕ್ತಿ, ಸೃಷ್ಠಿ ಸಾಮರ್ಥ್ಯ ಅರ್ಥವಾಗುತ್ತದೆ. ಇದನ್ನು ಅರಿತುಕೊಳ್ಳಬೇಕಾಗಿದೆ. ಜಗತ್ತಿನ ಯಾವ ನಾಗರಿಕತೆಗಳಿಗಿಲ್ಲದ ಅಗಾಧವಾದ ಜೀವಂತಿಕೆ, ಅಕ್ಷಯ ಜೀವನಶಕ್ತಿ, ಸಮೃದ್ಧ ಸೃಜನಶೀಲತೆ ಈ ನೆಲಕ್ಕಿದೆ. ಸಾವಿರ ಸಾವಿರ ವರ್ಷಗಳಿಂದ ಸೃಷ್ಠಿಸಿದ ಗಣತಂತ್ರ, ರಾಜ್ಯ–ಸಾಮ್ರಾಜ್ಯಗಳು, ತತ್ವಶಾಸ್ತ್ರ, ವಿಜ್ಞಾನ, ಕಲೆ, ಕಾವ್ಯಗಳು, ಅರಮನೆ, ದೇಗುಲಗಳು, ಸಂಹಿತೆ, ಪದ್ಧತಿಗಳು, ಭೌತವಿಜ್ಞಾನ, ಮನೋವಿಜ್ಞಾನಗಳೂ ಸೇರಿದಂತೆ ಬಹುಮುಖಿತ್ವದ ಸೃಷ್ಠಿಶೀಲತೆಯೇ ಈಕೆಯ ಶಕ್ತಿ. ಈಕೆಗೆ ಇದರಿಂದ ದಣಿವಾಗಿಲ್ಲ ಎನ್ನುವುದನ್ನು ಗುರುತಿಸುತ್ತಾರೆ. ಹೀಗಾಗಿಯೇ ಮನುಕುಲವು ಎದುರಿಸುತ್ತಿರುವ, ಬಳಲುತ್ತಿರುವ ಸಮಸ್ಯೆಗಳಿಗೆ ಭಾರತವು ಇಚ್ಛಿಸಿದರೆ ನಿರ್ಣಾಯಕ ತಿರುವನ್ನು ಕೊಡಬಲ್ಲುದು. ಏಕೆಂದರೆ ಅವುಗಳ ಪರಿಹಾರದ ಸುಳಿವು ಭಾರತದ ಪ್ರಾಚೀನ ಜ್ಞಾನದಲ್ಲಿದೆ. ಭಾರತ ಈ ಹಿಂದೆಯೂ ತನ್ನೊಳಗಿನ ಅನಂತ ಶಕ್ತಿಯಿಂದ ಮಹಾನತೆಯನ್ನು ಸಾಧಿಸಿದೆ. ಹಾಗೆಯೇ ಭಾರತೀಯ ನಾಗರಿಕತೆಯು ಈಗಲೂ ಸಹ ಪುನಃ ಮೇಲೆದ್ದು ಬರಲಿದೆ ಎನ್ನುತ್ತಿದ್ದರು. ಆದರೆ ಚಿಂತನ ಶಕ್ತಿಯ ಕ್ಷೀಣಿಸುವಿಕೆಯೇ ಭಾರತದ ದೌರ್ಬಲ್ಯಕ್ಕೆ ಮುಖ್ಯ ಕಾರಣ.

ನಮ್ಮ ವರ್ತಮಾನದ ಶಿಕ್ಷಣ ವಲಯ, ಬೌದ್ಧಿಕ ವಲಯ ಚಿಂತನ ಶಕ್ತಿಗೆ ಕವಿದಿರುವ ಈ ದೌರ್ಬಲ್ಯವನ್ನು ಮೀರುವಂತೆ ಸೃಷ್ಠಿಶೀಲವಾಗಬೇಕಾಗಿದೆ. ಈ ದೌರ್ಬಲ್ಯವನ್ನು ಭಾರತವು ಮೀರಬಹುದಾದರೆ ಮತ್ತೊಮ್ಮೆ ವಿಶ್ವಗುರುವೇ ಆಗಬಲ್ಲದು. ಈ ಪಥದಲ್ಲಿ ಸಾಗುವುದೆ ಶ್ರೀ ಅರವಿಂದರಂಥ ದಾರ್ಶನಿಕರಿಗೆ ಸಲ್ಲಿಸಬಹುದಾದ ನಿಜವಾದ ಗೌರವ. ॐ

# ಸುಭಾಷಿತಾನಿ



ವಿದ್ವಾನ್ ಮಲ್ಲಣ್ಣ,
ವಿಷಯ ಪರಿವೀಕ್ಷಕರು, ಮೈಸೂರು ವಲಯ.

ನಾವಾಡುವ ಮಾತು ನಮ್ಮ ಬದುಕಿಗೆ ಪೂರಕವಾಗಿ ಒದಗಬೇಕು. ಬದುಕಿನ ಆಳವನ್ನು ವಿಸ್ತಾರವನ್ನು ಅದು ತೋರಿಸಿವಂತಿರಬೇಕು. ತಮ್ಮ ಹಿತವನ್ನು ಅಹಿತವನ್ನು ತೋರಿಸುವಂತಿರಬೇಕು. ಇಷ್ಟೆಲ್ಲ ಇದ್ದರೂ ಆ ಮಾತು ಕೇಳಲು ಸಿಹಿಯಾಗಿರಬೇಕು. ಇಷ್ಟು ಗುಣಗಳನ್ನು ಒಳಗೊಂಡಿರುವುದೇ "ಸುಭಾಷಿತ" ಇದನ್ನೇ ಸುಭಾಷಿತವೊಂದು ತನ್ನ ಬಗ್ಗೆ ತಾನೇ ಹೀಗೆ ಹೇಳಿಕೊಂಡಿದೆ.

**ದ್ರಾಕ್ಷಾಮ್ಲಾನಾಮುಖೀ ಜಾತಾ ಶರ್ಕರಾ ಚಾಶ್ಮತಾಂ ಗತಾ।**
**ಸುಭಾಷಿತ ತರಸಸ್ಯಾಗ್ರೇ ಸುಧಾ ಭೀತಾ ದಿವಂಗತಾ ॥**

**–: ಸುಭಾಷಿತ ರತ್ನ ಭಾಂಡಾಗಾರ**

ಸುಭಾಷಿತದ ರುಚಿಯ ಮುಂದೆ ದ್ರಾಕ್ಷಿಯು ಬಾಡಿಹೋಯಿತು. (ಸಪ್ಪೆಯಾಯಿತು) ಸಕ್ಕರೆ ಕಲ್ಲಾಯಿತು (ರುಚಿಇಲ್ಲದ್ದು) ಅಮೃತವು ಹೆದರಿ ಸ್ವರ್ಗಕ್ಕೆ ಹೊರಟು ಹೋಯಿತು!

ಸುಭಾಷಿತಗಳಿಂದ ನಮ್ಮ ಜೀವನ ದೃಷ್ಟಿ ವಿಶಾಲವಾಗುವುದು. ಜೀವನದ ಎಷ್ಟೋ ಸಂಧರ್ಭಗಳ ಗುಣಾವಗುಣಗಳನ್ನು ಸ್ಪಷ್ಟವಾಗಿ ವಿಮರ್ಶಿಸಲು ನೆರವಾಗುತ್ತವೆ. ಅದನ್ನೆ ಸುಭಾಷಿತವೊಂದು ಹೀಗೆಂದಿದೆ.

**ಪೃಥಿವ್ಯಾಂ ತ್ರೀಣಿರತ್ನಾನಿ ಜಲಮನ್ನಂ ಸುಭಾಷಿತಂ ।**
**ಮೂಢೈಃ ಪಾಷಾಣಖಂಡೇಷು ರತ್ನಸಂಜ್ಞಾ ವಿಧೀಯತೇ ॥**

**–: ಸುಭಾಷಿತ ರತ್ನ ಭಾಂಡಾಗಾರ**

ಭೂಮಿಯಲ್ಲಿ ಸರ್ವಶ್ರೇಷ್ಠವಾದ ವಸ್ತುಗಳು ಕೇವಲ ಮೂರೇ ಇವೆ. ಜಲ, ಆಹಾರ, ಮತ್ತು ಒಳ್ಳೆಯ ಮಾತು. ಆದರೆ ಮೂರ್ಖರು ಕಲ್ಲಿನ ಚೂರುಗಳನ್ನು ರತ್ನ ಅಥವಾ ಶ್ರೇಷ್ಠ ವಸ್ತು ಎಂದು ಕರೆಯುವುದು ವಿಷಾದಕರ.

**ಸಾಮಾಧಿ ದಂಡಪರ್ಯಂತೊ ನಯಃ ಪ್ರೋಕ್ತಃ ಸ್ವಯಂಭುವಾ।**
**ತೇಷಾ ದಂಡಸ್ತು ಪಾಪೀಯಾನ್ ತಂ ಪಶ್ಚಾತ್ ವಿನಿಯೋಜಯೇತ್ ॥**

**–: ಪಂಚತಂತ್ರ**

ಕಾರ್ಯಗಳನ್ನು ಸಾಧಿಸಲು ರಾಜ್ಯಭಾರವನ್ನು ನಡೆಸಲು ಸಾಮ, ದಾನ, ಭೇದ ಮತ್ತು ದಂಡಗಳೆಂಬ ನಾಲ್ಕು ಉಪಾಯಗಳನ್ನು ತಿಳಿಸಿದ್ದಾರೆ. ಸಾಮವೆಂದರೆ ಹಿತೋಪದೇಶ, ದಾನವೆಂದರೆ ಹಣ ನೀಡುವುದು. ಭೇದವೆಂದರೆ ಇನ್ನೊಬ್ಬರನ್ನು ಹೊಗಳಿ ಕಾರ್ಯ ಸಾಧಿಸುವುದು. ದಂಡವೆಂದರೆ ಶಿಕ್ಷೆ ನೀಡುವುದು, ಎಂಬುದಾಗಿ ಬ್ರಹ್ಮನು ನಾಲ್ಕು ಉಪಾಯಗಳನ್ನು ತಿಳಿಸಿದ್ದಾರೆ. ಆದರೆ ದಂಡವು ಕೆಟ್ಟದಾಗಿದೆ. ಆದ್ದರಿಂದ ಅದನ್ನು ಕೊನೆಯಲ್ಲಿ ಅಗತ್ಯವಾದರೆ ಮಾತ್ರವೇ ಬಳಸಬೇಕೆಂದಿದ್ದಾರೆ. ದಂಡದಿಂದ ಶಿಕ್ಷೆ ಕೊಟ್ಟವರಿಗೂ ನೋವಾಗುವುದು. ಸಾಯುವ ಸ್ಥಿತಿಯು ಬರುವುದು.

**ಅಕ್ರೋಧೇನ ಜಯೇತ್ ಕ್ರೋಧಂ ಅಸಾಧುಂ ಸಾಧುನಾ ಜಯೇತ್ ॥**
**ಜಯೇತ್ ಕದರ್ಯಂ ದಾನೇನ ಜಯೇತ್ ಸತ್ಯೇನ ಚಾನೃತಂ ॥**

**–: ಮಹಾಭಾರತ**

ಮಹಾಭಾರತವನ್ನು ಜಯ ಎಂದು ಕರೆದಿದ್ದಾರೆ. ಎಲ್ಲಿ ಧರ್ಮವಿರುವುದೋ ಅಲ್ಲಿಯೇ ಜಯವಿದೆ ಎಂದು ಮಹಾಭಾರತದಲ್ಲಿ ತಿಳಿಸಿದ್ದಾರೆ. ಸಿಟ್ಟನ್ನು ಶಾಂತಿಯಿಂದ ಗೆಲ್ಲಬೇಕು ಕೆಟ್ಟದ್ದನ್ನು ಒಳ್ಳೆಯದರಿಂದ ಗೆಲ್ಲಬೇಕು. ಜಿಪುಣನನ್ನು ದಾನ ಮಾಡಿ ಗೆಲ್ಲಬೇಕು. ಮತ್ತು ಸತ್ಯ ವಾಕ್ಯದ ಬಲದಿಂದ ಸುಳ್ಳನ್ನು ಜಯಿಸಬೇಕು ಎಂದಿದ್ದಾರೆ. ಸಿಟ್ಟಿಗೆ ಸಿಟ್ಟು, ಸುಳ್ಳಿಗೆ ಸುಳ್ಳು ಕೆಟ್ಟವರಿಗೆ ಕೆಟ್ಟದ್ದು, ಮತ್ತು ಜಿಪುಣನಿಗೆ ಜಿಪುಣತನವನ್ನು ಮಾಡುವುದು ಸರಿಯಲ್ಲ ಎಂದಿದ್ದಾರೆ.

**ಅಂಧಃ ಸ ಏವ ಶ್ರುತ ವರ್ಜಿತೋ ಯಃ**<br>
**ಶಠಃ ಸ ಏವಾರ್ಥಿ ನಿರರ್ಥಕೋ ಯಃ ।**<br>
**ಮೃತಃ ಸ ಏವಾರ್ಥಿ ಯಶೋ ನ ಯಸ್ಯ**<br>
**ಧರ್ಮ ಸ ಧೀಃ ಯಸ್ಯ ಸ ಏವ ಶೋಚ್ಯಃ ॥**

**–: ಚತುರ್ವರ್ಗ ಸಂಗ್ರಹ**

ಕಣ್ಣಿಲ್ಲದವನು ಕುರುಡ, ಮೂರ್ಖನು ದುಷ್ಟನು, ಆಯುಷ್ಯ ತೀರಿ ಮರಣ ಹೊಂದಿದವನು, ಮೃತ ಬಡವನು ದುಃಖಿತನು ಎಂದು ಎಲ್ಲರೂ ತಿಳಿದ್ದಿದ್ದಾರೆ. ಆದರೆ ಇದು ಪರಿಹರಿಸಲಾಗದ ಸ್ಥಿತಿಯಿಂದಾದದ್ದು, ಯಾರು ವಿದ್ಯೆ ಗಳಿಸಿಕೊಳ್ಳುವುದಿಲ್ಲವೋ ಅವರು ಮೂರ್ಖರು, ಯಾರು ವ್ಯರ್ಥ ಕಾಲ ಕಳೆಯುತ್ತಾರೋ ಅವರು ಸತ್ತಂತೆ. ಯಾರು ಧರ್ಮ ಕಾರ್ಯಗಳಲ್ಲಿ ಲಕ್ಷ್ಯ ಹಾಕುವುದಿಲ್ಲವೋ ಅವರು ಸದಾ ಸುಖಿತರೆನಿಸುತ್ತಾರೆ.

**ಆತ್ಮಾನದೀ ಭಾರತ ಪುಣ್ಯತೀರ್ಥಾ**<br>
**ಸತ್ಯೋದಕಾ ಶೀಲತಟಾ ದಯೋರ್ಮಿಃ ।**<br>
**ಆತ್ಮಾಭಿಷೇಕಂ ಕುರು ಪಾಂಡುಪುತ್ರ**<br>
**ನವಾರಿಣಾ ಶುಧ್ಯತಿ ಚಾಂತರಾತ್ಮ॥**

**–: ಹಿತೋಪದೇಶ**

ಭಾರತ ದೇಶದ ವಿವಿಧ ನದಿಗಳ ಪವಿತ್ರ ನೀರಿನಲ್ಲಿ ಸ್ನಾನ ಮಾಡಿ ತೀರ್ಥ ಕ್ಷೇತ್ರ ಸಂಚರಿಸಿ ಪವಿತ್ರವಾಗುವುದು ಉತ್ತಮವೆಂದು ತಿಳಿದಿದ್ದಾರೆ. ಆದರೆ ಒಳ್ಳೆಯ ಮೌಲ್ಯಗಳಿಂದ, ಗುಣಗಳಿಂದ ಇದ್ದಲ್ಲಿಯೇ ಪವಿತ್ರರಾಗುವಂತಹ ವಿಶೇಷ ಯಾತ್ರೆಯನ್ನು ಪವಿತ್ರ ಭಾವ ಪಡೆಯುವುದನ್ನು ಇಲ್ಲಿ ತಿಳಿಸಿದ್ದಾರೆ.


ಆತ್ಮವೇ ನದಿ, ಭಾರತ ದೇಶವೇ ತೀರ್ಥ ಕ್ಷೇತ್ರ, ಸತ್ಯವೇ ನೀರು, ಶೀಲವು (ಸಚ್ಚಾರಿತ್ರ) ದಢವು, ದಯೆಯು ತರಂಗಗಳು. ಈ ರೀತಿಯ ಆತ್ಮಾಭಿಷೇಕವನ್ನು ಮಾಡು ಪಾಂಡುಪುತ್ರನೇ, ಭಾರತೀಯನೇ ನೀನು ನೀರಿನಿಂದ ಶುದ್ಧಿ ಪಡೆಯದೇ ಗುಣಗಳಿಂದ ಪವಿತ್ರನಾಗು ಎಂದಿದ್ದಾರೆ.

**ನಾಸ್ತಿ ಸತ್ಯಾತ್ ಪರೋ ಧರ್ಮಃ**<br>
**ಸಂತುಷ್ಟಿಃ ನಾತ್ಮ ಜಾತ್ ಪರಃ ।**<br>
**ನಾನ್ನದಾನಾತ್ ಪರಂ ದಾನಂ**<br>
**ವಂದನಾತ್ ನ ಉಪಚಾರಕಂ ॥**

**–: ಪ್ರಯೋಗ ರತ್ನಮಾಲಾ**

ಸದಾಚಾರವೆಂಬುದು ಧರ್ಮದ ಸಂಕ್ಷಿಪ್ತವಾದ ಲಕ್ಷಣವಾಗಿದೆ. ಅದು ಸತ್ಯಕ್ಕಿಂತ ಭಿನ್ನವಾಗಿರುವುದಿಲ್ಲ. ಸಂಓಷದಲ್ಲಿ ಮಕ್ಕಳಿಂದ ಸಂತೋಷಬಂದಷ್ಟು ಬೇರೆ ಯಾವುದರಿಂದಲೂ ಬರುವುದಿಲ್ಲ. [illegible] ಷವಾದ ದಾನವಿಲ್ಲ. ಉಪಚಾರಗಳಲ್ಲಿ ನಮಸ್ಕಾರವು ಅತ್ಯಂತ ಶ್ರೇಷ್ಠವಾದ ಉಪಚಾರ[illegible] ಗೌರವದಿಂದ ಸ್ವಾಗತಿಸಿ ವಂದಿಸಿದರೆ ಉಳಿದ ಊಟ, ವಸತಿ, ವಸ್ತ್ರ, ಅಲ[illegible] ಸಂತೋಷವಾಗುವುದು.

ಮುಂದುವರಿಯುವುದು ............... ॐ



## ಸೂರ್ಯನಲ್ಲಿ ಉತ್ಪಾದನೆಯಾಗುವ ಶಕ್ತಿಯ ರೀತಿಯಲ್ಲಿ ಭೂಪ್ರದೇಶದಲ್ಲೂ ಉತ್ಪಾದನೆ ಮಾಡಿ ತಮ್ಮ ಪ್ರಯೋಗದಲ್ಲಿ ಅದ್ಭುತ ಸಾಧನೆಗೈದು ವಿಶ್ವದಾದ್ಯಂತ ಹೊಗಳಿಕೆಗೆ ಪಾತ್ರರಾದ ಕ್ಯಾಲಿಪೋರ್ನಿಯಾ ವಿಜ್ಞಾನಿಗಳು.

ಎಂ.ಕೆ. ರಾಮಸ್ವಾಮಿ, ಶೈಕ್ಷಣಿಕ ನಿರ್ದೇಶಕರು

ಅಮೇರಿಕಾದ ಕ್ಯಾಲಿಪೋರ್ನಿಯಾದ ವಿಜ್ಞಾನಿಗಳು ತಮ್ಮ ದೇಶದ ಶಕ್ತಿ ಉತ್ಪಾದನಾ ಇಲಾಖೆಯು ಸ್ಥಾಪಿಸಿರುವ ಲಾರೆನ್ಸ್ ಲಿವರ್ ಮೋರ್ ರಾಷ್ಟ್ರೀಯ ಪ್ರಯೋಗ ಶಾಲೆಯಲ್ಲಿ ಸಂಶೋಧನೆ ನಡೆಸಿ ಹಲವಾರು ದಶಕಗಳಿಂದ ಇದುವರೆವಿಗೂ ಸಾಧಿಸಲಾಗದೇ ಇದ್ದಂತಹ ಬೀಜಾಣು ಸಂಯೋಜನೆ ವಿಧಾನದಿಂದ ಹೆಚ್ಚು ಶಕ್ತಿಯನ್ನು ಉತ್ಪಾದಿಸುವ ವಿಧಾನ ಕಂಡುಹಿಡಿದು ವಿಶ್ವ ಬೆರಗಾಗುವ ಹಾಗೆ ಮಾಡಿದ್ದಾರೆ. ಇದು ವಿಶ್ವದ ಶಕ್ತಿಯ ಬೇಡಿಕೆಯನ್ನು ಈಡೇರಿಸುವಲ್ಲಿ ದಾಪುಗಾಲು ಇಡಲಿದೆ.

ಬೀಜಾಣು ಸಂಯೋಜನೆ ಕ್ರಿಯೆಯಿಂದಲೇ ನಮ್ಮ ಸೂರ್ಯನೂ ಸೇರಿ ಇತರ ನಕ್ಷತ್ರಗಳಲ್ಲಿ ಅಗಾಧವಾದ ಶಕ್ತಿ ಉತ್ಪತ್ತಿಯಾಗುತ್ತಿದೆ. ಅದನ್ನು ನಾವು ಬೆಳಕು ಹಾಗೂ ಶಾಖದ ರೂಪದಲ್ಲಿ ಕೋಟ್ಯಾಂತರ ವರ್ಷಗಳಿಂದ ನಿರಂತರವಾಗಿ ಪಡೆಯುತ್ತಿದ್ದೇವೆ. ಇದೇ ವಿಧಾನವನ್ನು ಭೂಮಿಯ ಮೇಲೆ ಅಳವಡಿಸಿ ವಾಣಿಜ್ಯಕ್ಕೆ ಬಳಸಿದ್ದೇ ಆದಲ್ಲಿ ಇದು ಇಂಗಾಲ ಮುಕ್ತ ವಿದ್ಯುಚ್ಛಕ್ತಿ ಉತ್ಪಾದಿಸುವ ಕ್ರಿಯೆಯಲ್ಲಿ ಒಂದು ಮೈಲಿಗಲ್ಲಾಗಲಿದೆ.

ಈ ಪ್ರಯೋಗದಲ್ಲಿ ಅತೀ ಗರಿಷ್ಠ ಉಷ್ಣತಾಸ್ಥಿತಿಯಲ್ಲಿರುವ ಜಲಜನಕದ ಸಮಸ್ಥಾನಿ (ಐಸೊಟೋಪ್ಸ್)ಗಳನ್ನು ಲೇಸರ್ ಕಿರಣದಿಂದ ಡಿಕ್ಕಿ ಹೊಡೆಯುವಂತೆ ಮಾಡಿ ಅವುಗಳಿಂದ ಹೀಲಿಯಂ ಪರಮಾಣು ಉತ್ಪತ್ತಿಸುವಂತೆ ಮಾಡಲಾಗುತ್ತದೆ. ಇದರ ಜೊತೆಯಲ್ಲಿ ನ್ಯೂಟ್ರಾನ್ ಮತ್ತು ಇಂಗಾಲ ಮುಕ್ತ ಶಕ್ತಿ ಬಿಡುಗಡೆಯಾಗುತ್ತದೆ. ಈ ಪ್ರಯೋಗ ವಿಶ್ವದಲ್ಲೇ ಒಂದು ದಾಖಲೆಯಾಗಿದೆ ಎಂದು ಕ್ಯಾಲಿಫೋರ್ನಿಯಾದ ವರದಿಗಾರ ಟೆಡ್ ಲಿಯು ಹೇಳಿದ್ದಾರೆ.

ಅನೇಕ ವಿಜ್ಞಾನಿಗಳು ಈ ತಂತ್ರಜ್ಞಾನದ ಅನ್ವೇಷಣೆ ಮಾಡಲು ಅನೇಕ ದಶಕಗಳಿಂದ ಶ್ರಮಿಸುತ್ತಿದ್ದಾರೆ. ಆದರೆ ಫಲಿತಾಂಶ ಇಷ್ಟು ಫಲಪ್ರದವಾಗಿರಲಿಲ್ಲ. ಹಿಂದೆ ನಡೆಸಿದ ಪ್ರಯೋಗಗಳಲ್ಲಿ ಅಂತಿಮವಾಗಿ ಹೊರ ಬೀಳುವ ಶಕ್ತಿ ಸಂಯೋಜನೆಗೆ ಬಳಸಿದ ಶಕ್ತಿಗಿಂತ ಹೆಚ್ಚಾಗಿರಲಿಲ್ಲ. ಆದರೆ ಈ ಕ್ಯಾಲಿಫೋರ್ನಿಯಾದ ವಿಜ್ಞಾನಿಗಳ ಸಂಶೋದನೆಯಲ್ಲಿ ಅಂತಿಮ ಉತ್ಪಾದನಾ ಶಕ್ತಿ ಬಳಸಿದ ಶಕ್ತಿಯಿಂದ ಹೆಚ್ಚಾಗಿರುವುದು ತಾಂತ್ರಿಕ ಲಾಭ ಎಂದು ಹೇಳಲಾಗುತ್ತಿದೆ. ಈ ಸಾಧನೆಯನ್ನು ತಿಳಿದ ಮೇಲೆ ವಿಶ್ವದ ನುರಿತ ಮತ್ತು ಹೆಸರುವಾಸಿಯಾದ ಕೈಗಾರಿಕೋದ್ಯಮಿಗಳಾದ ಜೆಪ್ ಬಿಜೋಸ್ ಮತ್ತು ಬಿಲ್ ಗೇಟ್ಸ್ ಮುಂತಾದವರು ಈ ರೀತಿಯ ಶಕ್ತಿಯ ಉತ್ಪಾದನೆಗೆ ತೊಡಗಿಸಿಕೊಳ್ಳಲು ಬೇಕಾದ ಆರ್ಥಿಕ ಸಂಪನ್ಮೂಲ ಹೂಡಲು ಇಚ್ಚೆ ವ್ಯಕ್ತಪಡಿಸಿದ್ದಾರೆ.

ಇದು ಈಗ ಪ್ರಯೋಗದಲ್ಲಿ ಮಾತ್ರ ಯಶಸ್ವಿಯಾಗಿದೆ. ಇದನ್ನು ಬೃಹತ್ ಗಾತ್ರದ ಉದ್ದಿಮೆ ರೂಪದಲ್ಲಿ ಉತ್ಪಾದಿಸಲು ಅದಕ್ಕೆ ಸೂಕ್ತ ತಂತ್ರಜ್ಞಾನ ಈಗ ರೂಪಿಸಲಾಗಿದೆ. ಇದುವರೆವಿಗೂ ಬಹುತೇಕ ಕಡೆ ಪುನರ್ ಬಳಕೆ ಇಂಧನಗಳಲ್ಲದ ಕಲ್ಲಿದ್ದಲು ಪೆಟ್ರೋಲ್ ಮೂಲಗಳಿಂದ ವಿದ್ಯುಚ್ಛಕ್ತಿ ಉತ್ಪಾದಿಸಲಾಗುತ್ತಿತ್ತು ಮತ್ತು ಜೊತೆಗೆ ನಮ್ಮ ಕರ್ನಾಟಕದ ಕೈಗಾ ರಿಯಾಕ್ಟರ್‌ನಂತೆ ಬೀಜಾಣು ವಿಭಜನೆ ಕೇಂದ್ರದಿಂದಲೂ ವಿದ್ಯುಚ್ಛಕ್ತಿ ಉತ್ಪಾದಿಸಲಾಗುತ್ತಿತ್ತು. ಈ ಬೀಜಾಣು ವಿಭಜನೆ ರಿಯಾಕ್ಟರ್‌ಗಳಲ್ಲಿ ಯುರೇನಿಯಂ ಬೀಜಕೋಶಗಳನ್ನು ಒಡೆದು ಹಗುರವಾದ ಮೂಲವಸ್ತುಗಳನ್ನು ಉತ್ಪಾದಿಸಲಾಗುತ್ತಿತ್ತು. ಭಾರವಾದ ಬೀಜಕೋಶಗಳನ್ನು ವಿದಳನ ಕ್ರಿಯೆಯಿಂದ ಒಡೆದಾಗ ರಿಯಾಕ್ಟರ್‌ಗಳಲ್ಲಿ ಶಕ್ತಿ ಉತ್ಪಾದಿಸಲಾಗುತ್ತಿತ್ತು. ಈ ಕ್ರಿಯೆಯಲ್ಲಿ ಅಪಾಯಕಾರಿ ರೇಡಿಯೋ ವಿಕಿರಣ ಪೂರಿತ ಕಸವೂ ಉತ್ಪತ್ತಿಯಾಗುತ್ತದೆ. ವಿಶ್ವದಲ್ಲಿ ನಾವು ಉತ್ಪತ್ತಿಸುವ ವಿದ್ಯುತ್‌ನ ಶೇ. 10 ಭಾಗ ಈ ವಿಧಾನದಿಂದ ಉತ್ಪತ್ತಿಸಲಾಗುತ್ತಿದೆ. ಇದು ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳಿಂದ ಉತ್ಪಾದಿಸುತ್ತಿರುವ ಒಟ್ಟು ವಿದ್ಯುತ್ ಪ್ರಮಾಣಕ್ಕೆ ಹೋಲಿಸಿದರೆ ಬೀಜಾಣು ವಿದಳನ ಕ್ರಿಯೆಯಿಂದ ಉತ್ಪಾದಿಸುವ ವಿದ್ಯುತ್ ಬಹಳ ಕಡಿಮೆ ಇದೆ.

ಈ ಸಂಶೋಧನೆ ಯಶಸ್ಸಿನಿಂದ ಇನ್ನು ಮುಂದೆ ಬೀಜಾಣು ಸಂಯೋಜನೆ ರಿಯಾಕ್ಟರ್ ರೂಪಿಸಿ ಅದರಿಂದ ವಿದ್ಯುಚ್ಛಕ್ತಿ ಉತ್ಪಾದಿಸಿದ್ದೇ ಆದರೆ ದಿವಸದ 24 ಗಂಟೆಯೂ ಶುದ್ಧರೂಪದ ಮತ್ತು ಅಪಾಯಕಾರಿ ಕಸ ಉತ್ಪಾದನೆಯಿಲ್ಲದೆ ನಿರಂತರ ವಿದ್ಯುತ್ ಪಡೆಯುವ ವಿಧಾನವಾಗಲಿದೆ. ಈ ಕಾರಣದಿಂದಲೇ ಈ ಸಂಶೋಧನೆ ವಿಜ್ಞಾನಿಗಳು ಜನರಿಗೆ ಕೊಡಬಹುದಾದ ಅದ್ಭುತ ಸಂಶೋಧನೆ ಆಗಲಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಓಂ



# ಸಾವಯವ ಕೃಷಿ

ಯೋಗಾನರಸಿಂಹ ಗುಂಗರಮೇಳೆ.

**ಗೊಬ್ಬರ ತಯಾರಿಸುವ ವಿಧಾನ :** ಕಲ್ಲಿನ ಚಪ್ಪಡಿ ಅಥವಾ ಇಟ್ಟಿಗೆಯಿಂದ ಮಾಡಿದ 3 ರಿಂದ 4 ಅಡಿ ಅಗಲ, 3 ಅಡಿ ಎತ್ತರ ಮತ್ತು 10 ಅಡಿ ಉದ್ದ ಇರುವ ತೊಟ್ಟಿಗಳಲ್ಲಿ ರಂಜಕಯುಕ್ತ ಕಾಂಪೋಸ್ಟ್ ತಯಾರಿಸಲಾಗುತ್ತದೆ. ತೊಟ್ಟಿಯ ತಳಭಾಗದಲ್ಲಿ ಅಂದರೆ ಮೊದಲನೆಯ ಪದರವಾಗಿ ಶೀಘ್ರ ವಿಭಜನೆಯಾಗದ, ಲಿಗ್ನಿನ್ ಅಂಶ ಹೆಚ್ಚಿನ ಪ್ರಮಾಣದಲ್ಲಿರುವ ಸಾವಯವ ಪದಾರ್ಥಗಳಾದ ಒಣ ಹುಲ್ಲು, ತೆಂಗಿನ ನಾರು, ಸೋಗೆ, ನೆಲಗಡಲೆ ಸಿಪ್ಪೆ, ಭತ್ತದ ಹೊಟ್ಟು ಮುಂತಾದವುಗಳನ್ನು ಹರಡಬೇಕು. ಎರಡನೆ ಪದರವಾಗಿ ಗಟ್ಟಿಯಾದ ಮತ್ತು ಒಣಗಿದ ಸಾಯಯವ ವಸ್ತುಗಳನ್ನು ಹರಡಬೇಕು. ಈ ಪದರದ ಮೇಲೆ ಸಗಣಿ, ಗಂಜಲ ಇವುಗಳನ್ನು ನೀರಿನಲ್ಲಿ ಕಲಸಿ ಸಿಂಪಡಿಸಬೇಕು. ಇವುಗಳ ಮೇಲೆ 100 ಕಿ. ಗ್ರಾಂ. ಶಿಲಾರಂಜಕವನ್ನು ಮತ್ತು ಒಂದು ಕಿ. ಗ್ರಾಂ. ಶಿಲಾರಂಜಕ ಕರಗಿಸುವ ಸೂಕ್ಷ್ಮ ಜೀವಿಗಳ ಗೊಬ್ಬರವನ್ನು (ಆಸ್ಪರ್‌ಜಿಲ್ಲಸ್ ಅವಮೋರಿ ಶಿಲೀಂಧ್ರ, ಮೆಗಟೋರಿಯಂ ಬ್ಯಾಕ್ಟೀರಿಯ) ಪ್ರತಿ 1 ಟನ್ ಸಾವಯವ ವಸ್ತುಗಳ ಮೇಲೆ ಹರಡಬೇಕು. ಇವುಗಳ ಮೇಲಿನ ಪದರವಾಗಿ ಕಳೆ ಅಥವಾ ಹಸಿರೆಲೆ ಗೊಬ್ಬರವನ್ನು ಹರಡಬೇಕು.

ಈ ರೀತಿ ಅನೇಕ ಪದರಗಳನ್ನು ತೊಟ್ಟಿಯ ಮೇಲೆ 30 ರಿಂದ 40 ಸೆಂ.ಮೀ. ಎತ್ತರ ಬರುವವರೆಗೂ ಹಾಕಬೇಕು. ಕೊನೆಯ ಅಥವಾ ಮೇಲಿನ ಪದರವಾಗಿ ಸಗಣಿಯ ಬಗ್ಗಡದಿಂದ ತೆಳುವಾಗಿ ಸಾರಿಸಬೇಕು. 30 ದಿವಸಗಳ ನಂತರ ಪದರಗಳನ್ನು ತಿರುವಿಹಾಕಬೇಕು ಮತ್ತು ಇದನ್ನು ಪ್ರತಿ ತಿಂಗಳಿಗೊಮ್ಮೆ ಪುನರಾವರ್ತಿಸಬೇಕು. ಈ ಕಾಂಪೋಸ್ಟ್ ತಯಾರಿಕೆಯ ಅವಧಿ 90 ರಿಂದ 120 ದಿವಸಗಳು. ಈ ವಿಧಾನದಲ್ಲಿ ಚೆನ್ನಾಗಿ ಕಳಿತ ರಂಜಕದ ಅಂಶ ಹೆಚ್ಚಿನ ಪ್ರಮಾಣದಲ್ಲಿರುವ ಕಾಂಪೋಸ್ಟ್ ಲಭ್ಯವಾಗುತ್ತದೆ.

**(6). ಎರೆಹುಳು ಗೊಬ್ಬರ :** ಎರೆಹುಳುಗಳು ಭೂಮಿಯಲ್ಲಿರುವ ಕೃಷಿ ತ್ಯಾಜ್ಯಗಳಾದ ತರಗೆಲೆ, ಕಸ, ಕಳೆ ಮುಂತಾದವುಗಳನ್ನು ತಿಂದು ಉಪಯುಕ್ತವಾದ ಸಾವಯುವ ಗೊಬ್ಬರವನ್ನು ಮಣ್ಣಿಗೆ ಸೇರಿಸುತ್ತವೆ. ಈ ಗೊಬ್ಬರದಲ್ಲಿ ಸಾರಜನಕ, ರಂಜಕ ಮತ್ತು ಪೊಟಾಷ್‌ಗಳಲ್ಲದೆ, ಅಲ್ಪ ಪ್ರಮಾಣದಲ್ಲಿ ಲಘು ಪೋಷಕಾಂಶಗಳಾದ ಸತು, ಕಬ್ಬಿಣ, ತಾಮ್ರ, ಸೂಕ್ಷ್ಮಾಣು ಜೀವಿಗಳು, ಕಿಣ್ವಗಳು ಮತ್ತು ಬೆಳೆ ಪ್ರಚೋದಕಗಳು (ಹಾರ್ಮೋನ್‌ಗಳು) ಇರುತ್ತವೆ. ಎರೆಹುಳು ಗೊಬ್ಬರದ ಉತ್ಪಾದನೆಯಲ್ಲಿ ಐಸೀನಿಯಾ, ಯೂಡ್ರಿಲಸ್ ಮತ್ತು ಪೆರಿಯೋನಿಕ್ಸ್ ಎರೆಹುಳುಗಳನ್ನು ಹೆಚ್ಚಿಗೆ ಬಳಕೆ ಮಾಡಲಾಗುತ್ತಿದೆ.

**ಉಪಯೋಗಿಸುವ ಸಾವಯವ ವಸ್ತುಗಳು:** ದನ, ಕುರಿ ಮತ್ತು ಮೇಕೆಗಳ ತ್ಯಾಜ್ಯ ವಸ್ತು, ಕಳೆ, ಕೂಳೆ, ಹೊಟ್ಟು, ತರಕಾರಿ ಕಸ, ಹಸಿರೆಲೆ, ತರಗು ಇತ್ಯಾದಿ.

**ಸಮೃದ್ಧಿ ಸುಜ್ಞಾನ**

ಜೀವನದಲ್ಲಿ ಏನೂ ಇಲ್ಲದಿರುವಾಗ ತಾಳ್ಮೆ ಮುಖ್ಯ. ಬೇಕಾದದ್ದು ಸಿಕ್ಕಮೇಲೆ ವಿನಯ ತುಂಬಾ ಮುಖ್ಯ.

**ತಯಾರಿಸುವ ವಿಧಾನ :** ಇಟ್ಟಿಗೆ ಮತ್ತು ಸಿಮೆಂಟ್, ಕಲ್ಲಿನ ಚಪ್ಪಡಿ ಅಥವಾ ಹಲಗೆಗಳನ್ನು ಬಳಸಿ 8 ಅಡಿ ಉದ್ದ x 4 ಅಡಿ ಅಗಲ x 3 ಅಡಿ ಎತ್ತರದ ಎರಡು ತೊಟ್ಟಿಗಳನ್ನು ನೆಲದ ಮೇಲೆ ಕಟ್ಟಿಕೊಳ್ಳಬೇಕು. ಈ ತೊಟ್ಟಿಗಳಲ್ಲಿ 1 ರಿಂದ 1.5 ಟನ್ ಕಸ ತುಂಬಬಹುದು. ಕಸಕ್ಕೆ ಸಗಣಿಯ ಬಗ್ಗಡವನ್ನು ಬೆರೆಸಬೇಕು. ತುಂಬಿದ 15 ದಿನಗಳ ನಂತರ ಪ್ರತಿ ಟನ್ ಕಸಕ್ಕೆ 1000 ಎರೆಹುಳುಗಳನ್ನು (1 ಕಿ.ಗ್ರಾಂ) ಬಿಡಬೇಕು. ಎರೆಹುಳುಗಳು ಪದರ ಪದರವಾಗಿ ಕಸವನ್ನು ತಿಂದು ಹಿಕ್ಕೆಯನ್ನು ಹಾಕುವವು. ಈ ಹಿಕ್ಕೆಯೇ ಎರೆಹುಳು ಗೊಬ್ಬರ. 6 ರಿಂದ 8 ವಾರಗಳಲ್ಲಿ ಎರಡು ತೊಟ್ಟಿಗಳಿಂದ 600 ರಿಂದ 800 ಕಿ.ಗ್ರಾಂ ಗೊಬ್ಬರ ದೊರೆಯುವುದು.

ಎರೆಹುಳುಗಳು ತಾವು ತಿಂದು ತ್ಯಜಿಸುವ ವಸ್ತುವಿನಲ್ಲಿ ಇರದೆ ತಳಕ್ಕೆ ಹೋಗುತ್ತವೆ. ಎರೆಹುಳುಗಳು ತಳ ಸೇರಿದ ನಂತರ, ಗೊಬ್ಬರವನ್ನು ಹೊರ ತೆಗೆದು, ತಳದಿಂದ ಹುಳುಗಳನ್ನು ಸ್ವಲ್ಪ ಗೊಬ್ಬರದೊಂದಿಗೆ ತೆಗೆದು, ಮತ್ತೆ ತೊಟ್ಟಿಗಳನ್ನು ಕಸದಿಂದ ತುಂಬಿ ಈ ಹುಳುಗಳನ್ನು ಬಿಡಬಹುದು. ಗೊಬ್ಬರದಲ್ಲಿ ಸಣ್ಣ ಮರಿಗಳು ಮತ್ತು ತತ್ತಿಗಳು ಇರುವುದರಿಂದ ಅವುಗಳನ್ನು 3 ರಿಂದ 4 ಮಿ. ಮೀ. ಜಾಲರಿಯಿಂದ ಬೇರ್ಪಡಿಸಿ ಮತ್ತೆ ಹೊಸ ಕಸಕ್ಕೆ ಬಿಡಬಹುದು. ಬದಲಾಗಿ ಗೊಬ್ಬರವನ್ನು ನೆರಳಿನಲ್ಲಿ ಒಂದು ಕೊಠಡಿಯಲ್ಲಿ ಶೇಖರಿಸಿ, ಬಿದಿರಿನ ಬುಟ್ಟಿಗಳಲ್ಲಿ ಸ್ವಲ್ಪ ಸಗಣಿ ಮತ್ತಿತರ ತ್ಯಾಜ್ಯಗಳ ಮಿಶ್ರಣವನ್ನು ತುಂಬಿ ಅಲ್ಲಲ್ಲಿ ಗೊಬ್ಬರದಲ್ಲಿ ಹೂತಿಟ್ಟರೆ ತತ್ತಿಗಳಿಂದ ಹೊರಬಂದ ಮರಿಗಳು ಈ ಬುಟ್ಟಿಗಳಲ್ಲಿ ಬಂದು ಸೇರುವವು. ಇಲಿ, ಹೆಗ್ಗಣದಿಂದ ಕಾಪಾಡಲು ತೊಟ್ಟಿಯನ್ನು ಜಾಲರಿಯಿಂದ ಮುಚ್ಚುವುದು ಒಳ್ಳೆಯದು. ಇರುವೆಯ ಬಾಧೆ ತಡೆಗಟ್ಟಲು ತೊಟ್ಟಿಯ ಸುತ್ತ ಸಣ್ಣ ಕಾಲುವೆ ಮಾಡಿ ಅದರಲ್ಲಿ ನೀರು ಅಥವಾ ಕೀಲ ಎಣ್ಣೆ ಬಿಟ್ಟಲ್ಲಿ ಇರುವೆಗಳು ತೊಟ್ಟಿಗೆ ಹತ್ತಲಾರವು. ಮಳೆಯ ನೀರು ತೊಟ್ಟಿಯಲ್ಲಿ ಬೀಳದಂತೆ ಚಪ್ಪರದಿಂದ ರಕ್ಷಿಸಬೇಕು ಅಥವಾ ಮಳೆ ಬರುವ ಮುನ್ನ ಪ್ಲಾಸ್ಟಿಕ್ ಹಾಳೆಯಿಂದ ತೊಟ್ಟಿಗಳನ್ನು ಮುಚ್ಚಬೇಕು. ಎರೆಹುಳು ಗೊಬ್ಬರದಲ್ಲಿ ಶೇ. 1.10 ಸಾರಜನಕ, ಶೇ. 0.86 ರಂಜಕ ಮತ್ತು ಶೇ. 0.98 ಪೊಟ್ಯಾಷಿಯಂ ಪೋಷಕಾಂಶಗಳಿರುತ್ತವೆ.

**(7). ಹಸಿರೆಲೆ ಗೊಬ್ಬರಗಳು :** ಮಳೆಗಾಲದ ಪ್ರಾರಂಭದಲ್ಲಿ ಹಸಿರು ಗೊಬ್ಬರದ ಬೆಳೆಗಳ ಬೀಜಗಳನ್ನು ಬಿತ್ತಿ ಹೂವಾಗುವುದಕ್ಕೆ ಮುಂಚೆ ಉಳುಮೆ ಮಾಡಿ ಮಣ್ಣಿಗೆ ಸೇರಿಸಬೇಕು. ಪ್ರಮುಖ ಹಸಿರೆಲೆ ಗೊಬ್ಬರದ ಬೆಳೆಗಳೆಂದರೆ ಸೆಣಬು, ಡಯಾಂಚ, ಅಲಸಂದೆ, ಹುರುಳಿ ಇತ್ಯಾದಿ. ಬಹುವಾರ್ಷಿಕ ಹಸಿರೆಲೆ ಗೊಬ್ಬರದ ಗಿಡಗಳಾದ ಗ್ಲಿರಿಸೀಡಿಯಾ, ಹೊಂಗೆ, ಸೂಬಾಬುಲ್‌ಗಳನ್ನು ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಬದು ಅಥವಾ ಬೇಲಿಯಲ್ಲಿ ಬೆಳೆದು ಅವುಗಳ ಎಳೆಯ ರೆಂಬೆ ಮತ್ತು ಸೊಪ್ಪನ್ನು ಹಸಿರೆಲೆ ಗೊಬ್ಬರಕ್ಕಾಗಿ ಉಪಯೋಗಿಸಬಹುದು.

ಹಸಿರು/ ಹಸಿರೆಲೆ ಗೊಬ್ಬರದ ಸಸ್ಯಗಳಲ್ಲಿ ದೊರೆಯುವ ಪೋಷಕಾಂಶಗಳ ಪ್ರಮಾಣ (ಶೇಕಡ)

| **ಹಸಿರು/ ಹಸಿರೆಲೆ ಗೊಬ್ಬರದ ಸಸ್ಯಗಳು** | **ಸಾರಜನಕ (ಶೇ.)** | **ರಂಜಕ (ಶೇ.)** | **ಪೊಟ್ಯಾಷ್ (ಶೇ.)** |
|---|---|---|---|
| ಸೆಣಬು | 0.89 | 0.12 | 0.51 |
| ಡಯಾಂಚ | 0.68 | 0.13 | 0.40 |
| ಅಲಸಂದೆ | 0.71 | 0.15 | 0.58 |
| ಹುರುಳಿ | 0.91 | 0.18 | 0.65 |
| ಉದ್ದು ಮತ್ತು ಹೆಸರು | 0.82 | 0.18 | 0.52 |
| ಗ್ಲಿರಿಸೀಡಿಯಾ | 0.68 | 0.16 | 0.30 |
| ಹೊಂಗೆ | 0.61 | 0.14 | 0.49 |

**(8). ಹಿಂಡಿ ಗೊಬ್ಬರಗಳು :** ಹಿಂಡಿ ಗೊಬ್ಬರಗಳು ಅಧಿಕ ಪೋಷಕಾಂಶಗಳನ್ನು ಹೊಂದಿರುವ ಸಾವಯವ ಗೊಬ್ಬರಗಳಾಗಿವೆ. ಬೇವು, ಹೊಂಗೆ, ಹಿಪ್ಪೆ, ಹತ್ತಿ ಕಾಳು, ಹರಳು, ಇತ್ಯಾದಿ. ಹಿಂಡಿ ಗೊಬ್ಬರಗಳನ್ನು ಪ್ರತಿ ಎಕರೆಗೆ ಸುಮಾರು 200 ಕಿ.ಗ್ರಾಂ ನಂತೆ ಮಣ್ಣಿಗೆ ಬೆರೆಸುವುದು ಸೂಕ್ತ. ಪೋಷಕಾಂಶಗಳ ಲಭ್ಯತೆ ನಿಧಾನವಾಗಿರುವುದರಿಂದ ಬಹುವಾರ್ಷಿಕ ಬೆಳೆಗಳಲ್ಲಿ ಇವುಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

**ವಿವಿಧ ಹಿಂಡಿ ಗೊಬ್ಬರಗಳಲ್ಲಿರುವ ಪೋಷಕಾಂಶಗಳ ಪ್ರಮಾಣ**

| ಹಿಂಡಿ ಗೊಬ್ಬರಗಳು | ಸಾರಜನಕ (%) | ರಂಜಕ (%) | ಪೊಟ್ಯಾಷಿಯಂ (%) |
|---|---|---|---|
| ಬೇವಿನ ಹಿಂಡಿ | 5.2 | 1.1 | 1.5 |
| ಹೊಂಗೆ ಹಿಂಡಿ | 4.0 | 0.9 | 1.3 |
| ಹಿಪ್ಪೆ ಹಿಂಡಿ | 2.5 | 0.8 | 1.9 |
| ಕುಸಬೆ ಹಿಂಡಿ | 7.9 | 2.2 | 1.9 |
| ಹತ್ತಿ ಕಾಳಿನ ಹಿಂಡಿ | 5.8 | 2.5 | 1.6 |
| ಹರಳು | 4.3 | 1.8 | 1.3 |

## II. ಜೈವಿಕ ಗೊಬ್ಬರಗಳು

ಪ್ರಯೋಜನಕಾರಿ ಸೂಕ್ಷ್ಮಾಣುಜೀವಿಗಳನ್ನು ಪೂರಕವಾದ ಮಾಧ್ಯಮಗಳಲ್ಲಿ ಬೆಳೆಸಿ ತಯಾರಿಸಿದ ಗೊಬ್ಬರವನ್ನು ಜೈವಿಕ ಗೊಬ್ಬರಗಳೆಂದು ಕರೆಯಲಾಗುತ್ತದೆ. ಭೂಮಿ ಮತ್ತು ವಾತಾವರಣದಲ್ಲಿ ನೈಸರ್ಗಿಕವಾಗಿ ಕಂಡುಬರುವ ಪೋಷಕಾಂಶಗಳು ಸಸ್ಯಗಳಿಗೆ ದೊರೆಯುವಂತೆ ಮಾಡುವಲ್ಲಿ ಜೈವಿಕ ಗೊಬ್ಬರಗಳು ಸಹಾಯಕವಾಗಿವೆ. ಪ್ರತಿಯೊಂದು ಸೂಕ್ಷ್ಮಾಣು ಜೀವಿಯು ತನ್ನದೇ ಆದ ಕಾರ್ಯಚಟುವಟಿಕೆ ಮತ್ತು ಸಾಮರ್ಥ್ಯ ಹೊಂದಿರುತ್ತದೆ. ಕಡಿಮೆ ಪ್ರಮಾಣದಲ್ಲಿ ಜೈವಿಕ ಗೊಬ್ಬರಗಳನ್ನು ಬಳಸಿ ಹೆಚ್ಚು ಲಾಭ ಪಡೆಯಬಹುದಾಗಿದೆ. ಇವುಗಳು ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಯನ್ನು ಹೆಚ್ಚಿಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಇವುಗಳು ಬೆಳೆ ಪ್ರಚೋದಕಗಳನ್ನು ಸಹಾಯಕಾರಿ ಅಚಿಟಿಬಯೋಟಿಕ್‌ಗಳನ್ನು ಬಿಡುಗಡೆ ಮಾಡಿ ರೋಗಗಳ ನಿರ್ವಹಣೆಗೆ ಸಹಾಯಕವಾಗಿವೆ.

ಜೈವಿಕ ಗೊಬ್ಬರ ಬಳಕೆಯನ್ನು ಬೀಜೋಪಚಾರ ಸಸ್ಯ ಬೇರುಗಳಿಗೆ ಉಪಚರಿಸುವುದು ಅಥವಾ ನೇರವಾಗಿ ಮಣ್ಣಿಗೆ ಹಾಕುವ ವಿಧಾನದಲ್ಲಿ ಮಾಡಬಹುದು.


**(1) ಸಾರಜನಕ ಸ್ಥಿರೀಕರಿಸುವ ಜೈವಿಕ ಗೊಬ್ಬರಗಳು**

**(ಅ) ರೈಜೋಬಿಯಂ :** ರೈಜೋಬಿಯಂ ಮಣ್ಣಿನಲ್ಲಿ ವಾಸಿಸುವ ಸೂಕ್ಷ್ಮಾಣುಜೀವಿಯಾಗಿದ್ದು ಎಲ್ಲಾ ದ್ವಿದಳ ಧಾನ್ಯ ಬೆಳೆಗಳ ಬೇರು ಮತ್ತು ಕಾಂಡಗಳಲ್ಲಿ ಗಂಟುಗಳನ್ನುಂಟುಮಾಡಬಲ್ಲ ಏಕಾಣು ಜೀವಿ. ದ್ವಿದಳಧಾನ್ಯ ಬೀಜಗಳನ್ನು ಸೂಕ್ತವಾದ ರೈಜೋಬಿಯಂ ಜೀವಾಣುವಿನಿಂದ ಉಪಚರಿಸಿದಾಗ, ಅವು ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ನೇರವಾಗಿ ಸಸ್ಯಗಳಿಗೆ ಒದಗಿಸಿಕೊಡುತ್ತವೆ.

**(ಆ) ಅಜೋಟೋಬ್ಯಾಕ್ಟರ್ :** ಅಜೋಟೋಬ್ಯಾಕ್ಟರ್ ಸೂಕ್ಷ್ಮಾಣುಜೀವಿಯು ಬೆಳೆಯ ಬೇರಿನ ಸಮೀಪ ಸಾರಜನಕವನ್ನು ಸ್ಥಿರೀಕರಿಸುತ್ತದೆ. ಇದನ್ನು ಧಾನ್ಯ ಬೆಳೆಗಳಾದ ರಾಗಿ, ಭತ್ತ, ಜೋಳ, ಮುಸುಕಿನ ಜೋಳ, ಗೋಧಿ ಬೆಳೆಗಳು, ತರಕಾರಿ ಬೆಳೆಗಳು, ಹೂ ಗಿಡಗಳು, ಹಣ್ಣಿನ ಗಿಡಗಳಾದ ಮಾವು, ಬಾಳೆ, ಹಲಸು ಮುಂತಾದವು ಹಾಗೂ ಪ್ಲಾಂಟೇಷನ್ ಬೆಳೆಗಳಾದ ಅಡಿಕೆ, ತೆಂಗು, ರಬ್ಬರ್, ಟೀ, ಕಾಫೀ, ಕೋಕೊ ಇತ್ಯಾದಿ ಮತ್ತು ವಾಣಿಜ್ಯ ಬೆಳೆಗಳಾದ ಕಬ್ಬು, ತಂಬಾಕು, ಮೆಣಸಿನಕಾಯಿ, ಹತ್ತಿ ಇತ್ಯಾದಿ ಬೆಳೆಗಳಿಗೆ ಉಪಯೋಗಿಸಬಹುದು.

ಈ ಸೂಕ್ಷ್ಮಾಣುಜೀವಿಯು ಸಾರಜನಕ ಸ್ಥಿರೀಕರಣದ ಜೊತೆಗೆ ಸಸ್ಯದ ಬೆಳವಣಿಗೆಗೆ ಬೇಕಾದ ಬೆಳವಣಿಗೆಕಾರಕಗಳಾದ ಇಂಡೋಲ್ ಅಸಿಟಿಕ್ ಆಮ್ಲ, ಜಿಬ್ಬರ್ಲಿಕ್ ಆಮ್ಲ, ಸೈಟೋಕೈನಿನ್ ಮತ್ತು ಜೀವಸತ್ವಗಳನ್ನು ಒದಗಿಸುತ್ತದೆ ಹಾಗೂ ಬೇರುಕೊಳೆ ರೋಗಗಳನ್ನು ತಡೆಗಟ್ಟುವಲ್ಲಿ ಸಹಾಯಕವಾಗುತ್ತದೆ.

**(ಇ) ಅಜೋಸ್ಪೈರಿಲಂ :** ಅಜೋಸ್ಪೈರಿಲಂ ಸೂಕ್ಷ್ಮಾಣುಜೀವಿಯು ಬೆಳೆಯ ಬೇರಿನ ಸಮೀಪ ಹಾಗೂ ಬೇರುಗಳಲ್ಲಿ ಪ್ರವೇಶಿಸಿ ಸಾರಜನಕ



ಸ್ಥಿರೀಕರಣ ಮಾಡುತ್ತದೆ. ಇದನ್ನು ಏಕದಳ ಧಾನ್ಯಗಳು, ಎಣ್ಣೆ ಕಾಳು ಬೆಳೆಗಳು, ತರಕಾರಿ ಬೆಳೆಗಳು, ಹಿಪ್ಪು ನೇರಳೆ, ಹುಲ್ಲು ಮತ್ತು ಅಲಂಕಾರಿಕ ಗಿಡಗಳಲ್ಲಿ ಬಳಸಬಹುದು.

**(2) ರಂಜಕ ಕರಗಿಸುವ (ಪಿ.ಎಸ್.ಎಮ್.) ಜೀವಾಣು ಗೊಬ್ಬರಗಳು :** ರಂಜಕ ಕರಗಿಸುವ (ಪಿ.ಎಸ್.ಎಮ್.) ಸೂಕ್ಷ್ಮಾಣುಗಳು ಸಾವಯವ ಪದಾರ್ಥಗಳ ಮೇಲೆ ಬೆಳೆದು ಗ್ಲುಕೋನಿಕ್, ಸಿಟ್ರಿಕ್, ಅಸಿಟಿಕ್ ಇತ್ಯಾದಿ ಸಾವಯವ ಆಮ್ಲಗಳನ್ನು ಉತ್ಪಾದಿಸುತ್ತವೆ. ಈ ಸಾವಯವ ಆಮ್ಲಗಳ ಕ್ರಿಯೆಯಿಂದ ಮಣ್ಣಿನಲ್ಲಿ ಸ್ಥಿರೀಕರಿಸಲ್ಪಟ್ಟ ರಂಜಕವು ಕರಗಿ ಬೆಳೆಗಳಿಗೆ ಲಭ್ಯವಾಗುವುದಕ್ಕೆ ಸಹಾಯವಾಗುತ್ತದೆ. ಈ ಸೂಕ್ಷ್ಮಾಣುಗಳೆಂದರೆ ಬ್ಯಾಸಿಲಸ್ ಮತ್ತು ಸೂಡೋಮೋನಾಸ್ ಪ್ರಭೇದಗಳ ರಂಜಕ ಕರಗಿಸುವ ದುಂಡಾಣುಗಳು ಹಾಗೂ ರಂಜಕ ಕರಗಿಸುವ ಶಿಲೀಂಧ್ರಗಳಾದ ಆಸ್ಪರ್ಜಿಲ್ಲಸ್ ಮತ್ತು ಪೆನ್ಸಿಲಿಯಂ ಪ್ರಭೇದಗಳು.

ರಂಜಕ ಕರಗಿಸುವ ಜೀವಾಣು ಗೊಬ್ಬರದ ಬಳಕೆಯಿಂದ ರಾಸಾಯನಿಕ ರಂಜಕ ಗೊಬ್ಬರದ ಖರ್ಚಿನಲ್ಲಿ ಉಳಿತಾಯವಾಗುವುದರ ಜೊತೆಗೆ ಬೆಳೆಗಳು ಮಣ್ಣಿನಿಂದ ಹೆಚ್ಚಿನ ರಂಜಕ ಪಡೆಯಲು ಹಾಗೂ ಬೆಳೆಯ ಹೆಚ್ಚಿನ ಇಳುವರಿ ಪಡೆಯಲು ಸಹಾಯವಾಗುತ್ತದೆ.

**(3) ರಂಜಕ ಒದಗಿಸುವ ಶಿಲೀಂಧ್ರಗಳು (ಮೈಕೋರೈಜಾ) :** ಮೈಕೋರೈಜಾ ಶಿಲೀಂಧ್ರವು ಕರಗಿದ ರೂಪದಲ್ಲಿರುವ ರಂಜಕವನ್ನು ನೇರವಾಗಿ ಗಿಡಕ್ಕೆ ಒದಗಿಸುವುದಲ್ಲದೆ, ಲಘು ಪೋಷಕಾಂಶಗಳಾದ ತಾಮ್ರ, ಕಬ್ಬಿಣ, ಸತು, ಅಲ್ಯೂಮಿನಿಯಂ, ಮೆಗ್ನೀಶಿಯಂ, ಮ್ಯಾಂಗನೀಸ್ ಮತ್ತು ಗಂಧಕವನ್ನು ಒದಗಿಸುವಲ್ಲಿ ಸಹಾಯಕವಾಗಿದೆ. ಈ ಶಿಲೀಂಧ್ರವು ಬೇರಿನ ಒಳ ಹೋಗುವುದರಿಂದ ಬೇರು ಹೋದೆಡೆಯಲ್ಲಿ ಇವೂ ಸಹ ನೆಲೆಸಿ ಹೆಚ್ಚಿನ ಪೋಷಕಾಂಶ ಮತ್ತು ನೀರನ್ನು ಸರಾಗವಾಗಿ ಎಳೆದು ಗಿಡಕ್ಕೆ ತಲುಪಿಸುತ್ತವೆ ಹಾಗೂ ಗಿಡದಲ್ಲಿ ರೋಗ ನಿರೋಧಕತೆಯನ್ನು ಪ್ರಚೋದಿಸಿ ಬೇರು ಕೊಳೆ ರೋಗಗಳನ್ನು ತಡೆಯುತ್ತವೆ.

**(4) ಸಸ್ಯ ಬೆಳವಣಿಗೆಕಾರಕ ಸೂಕ್ಷ್ಮಾಣುಜೀವಿಗಳು :** ಈ ಸೂಕ್ಷ್ಮಾಣುಜೀವಿಗಳು ಸಸ್ಯ ಬೆಳವಣಿಗೆಗೆ ಬೇಕಾದ ಪೋಷಕಾಂಶಗಳು, ಬೆಳವಣಿಗೆಕಾರಕಗಳಾದ ಬೆಳೆ ಪ್ರಚೋದಕ ವಸ್ತುಗಳು ಹಾಗೂ ಜೀವಸತ್ವಗಳನ್ನು ಗಿಡದ ಬೆಳವಣಿಗೆ ಒದಗಿಸುತ್ತವೆ. ಸಸ್ಯ ರೋಗಗಳನ್ನು ಉಂಟುಮಾಡುವ ಸೂಕ್ಷ್ಮಾಣುಜೀವಿಗಳನ್ನು ತಡೆಗಟ್ಟುವಲ್ಲಿ ಫಲಪ್ರದವಾಗಿ ಕೆಲಸಮಾಡುತ್ತವೆ. ಈ ಸೂಕ್ಷ್ಮಾಣುಜೀವಿಯನ್ನು ಎಲ್ಲಾ ಬೆಳೆಗಳಲ್ಲಿ ಬಳಸಬಹುದಾಗಿದ್ದು ಇದರ ಬಳಕೆಯಿಂದ ಸಸ್ಯವು ಸಮೃದ್ಧಿಯಾಗಿ ಬೆಳೆಯುವುದಲ್ಲದೆ ಉತ್ತಮ ಫಸಲನ್ನು ಪಡೆಯಬಹುದು. ಸಸ್ಯ ಬೆಳವಣಿಗೆಕಾರಕ ಶಿಲೀಂಧ್ರ ಟ್ರೈಕೋಡರ್ಮವನ್ನು ಬಾಳೆ, ಏಲಕ್ಕಿ ಮುಂತಾದ ಬೆಳೆಗಳಲ್ಲಿ ಬಳಸುವದರಿಂದ ಸೊರಗು ರೋಗವನ್ನು ತಡೆಗಟ್ಟಬಹುದು.

**III. ದ್ರವರೂಪದ ಸಾಯವಯ ಗೊಬ್ಬರಗಳು :** ಸ್ಥಳಿಯವಾಗಿ ಲಭ್ಯವಿರುವ ಕೃಷಿ ತ್ಯಾಜ್ಯ ವಸ್ತುಗಳು, ಪ್ರಾಣಿ ಜನ್ಯ ಮತ್ತು ಸಸ್ಯ ಜನ್ಯ ಪದಾರ್ಥಗಳನ್ನು ಬಳಸಿ ಚೆನ್ನಾಗಿ ಕಳಿಸಿ ತಯಾರಿಸಿದ ಮಿಶ್ರಣವನ್ನೇ ದ್ರವರೂಪದ ಗೊಬ್ಬರವೆಂದು ಕರೆಯುತ್ತಾರೆ. ದ್ರವರೂಪದ ಸಾವಯವ ಗೊಬ್ಬರಗಳಲ್ಲಿ ಉಪಯುಕ್ತ ಸೂಕ್ಷ್ಮಾಣುಜೀವಿಗಳು, ಸಸ್ಯ ಹಾರ್ಮೋನುಗಳು, ಜೀವಸತ್ವಗಳು ಹಾಗೂ ಪೋಷಕಾಂಶಗಳು ಇರುತ್ತವೆ. ದ್ರವರೂಪದ ಸಾವಯವ ಗೊಬ್ಬರಗಳ ಬಳಕೆಯಿಂದ ಮಣ್ಣಿನಲ್ಲಿ ಉಪಯುಕ್ತ ಸೂಕ್ಷ್ಮಾಣುಜೀವಿಗಳ ಸಂಖ್ಯೆ ವೃದ್ಧಿ ಆಗುತ್ತದೆ (ಸಾರಜನಕ ಸ್ಥಿರೀಕರಿಸುವ ಬ್ಯಾಕ್ಟೀರಿಯಾ, ರಂಜಕ ಕರಗಿಸುವ ಬ್ಯಾಕ್ಟೀರಿಯಾ, ಟ್ರೈಕೊಡರ್ಮ, ಸೂಡೊಮೊನಸ್ ಇತ್ಯಾದಿ). ಸೂಕ್ಷ್ಮಾಣುಜೀವಿಗಳು ಮಣ್ಣಿನಲ್ಲಿರುವ ಪೋಷಕಾಂಶಗಳು ಬೆಳೆಗಳಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತವೆ. ಬೆಳೆಗಳಿಗೆ ಸಸ್ಯ ಹಾರ್ಮೋನುಗಳು ಮತ್ತು ಜೀವಸತ್ವಗಳು ದೊರೆಯುವುದರಿಂದ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಬೆಳೆಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

ಪಂಚಗವ್ಯ ಸಿಂಪರಣೆಯಿಂದ ತೋಟಗಾರಿಕೆ ಬೆಳೆಗಳಲ್ಲಿ ಬೆಳವಣಿಗೆ ಮತ್ತು ಇಳುವರಿ ವೃದ್ಧಿಸುವುದು. ಪಂಚಗವ್ಯ ಸಿಂಪರಣೆಯು ತರಕಾರಿ ಮತ್ತು ಹಣ್ಣುಗಳ ರುಚಿಯನ್ನು ಹೆಚ್ಚಿಸುವುದಲ್ಲದೆ, ಇವುಗಳ ತಾಜಾತನವನ್ನು ದೀರ್ಘಕಾಲದವರೆಗೆ ಕಾಪಾಡುತ್ತದೆ ಮತ್ತು ಗಿಡಗಳಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

**(1). ಪಂಚಗವ್ಯ**

ಬೇಕಾಗುವ ಸಾಮಗ್ರಿಗಳು: ದೇಶಿ ಆಕಳ ಸಗಣಿ 7 ಕೆ.ಜಿ., ದೇಶಿ ಆಕಳ ತುಪ್ಪ 1 ಕೆ.ಜಿ., ದೇಶಿ ಆಕಳ ಗಂಜಲ 3 ಲೀ., ದೇಶಿ ಆಕಳ ಹಾಲು 2 ಲೀ., ದೇಶಿ ಆಕಳ ಮೊಸರು 2 ಲೀ., ತೆಂಗಿನ ಎಳೆ ನೀರು 3 ಲೀ., ಕಬ್ಬಿನ ಹಾಲು 3 ಲೀ., ಕಳಿತ ಬಾಳೆ ಹಣ್ಣು 1 ಡಜನ್, ಮತ್ತು ನೀರು 10 ಲೀ.

ಒಂದು ಮಣ್ಣಿನ ಗಡಿಗೆಯಲ್ಲಿ ದೇಶಿ ಆಕಳ ಸಗಣಿಗೆ ತುಪ್ಪವನ್ನು ಚೆನ್ನಾಗಿ ಬೆರೆಸಬೇಕು. ಈ ಮಿಶ್ರಣವನ್ನು ಎರಡು ದಿವಸಗಳವರೆಗೆ ಮುಚ್ಚಿ ಇಡಬೇಕು. ಈ ಮಿಶ್ರಣಕ್ಕೆ ಮೂರು ಲೀಟರ್ ದೇಶಿ ಆಕಳ ಗಂಜಲ ಹಾಗೂ 10 ಲೀಟರ್ ನೀರು ಬೆರಸಿ 15 ದಿವಸಗಳವರೆಗೆ ಮುಚ್ಚಿ ಇಡಬೇಕು. ಮೇಲಿನ ಮಿಶ್ರಣಕ್ಕೆ 2 ಲೀ. ದೇಶಿ ಆಕಳ ಹಾಲು, 2 ಲೀ. ದೇಶಿ ಆಕಳ ಮೊಸರು, 3 ಲೀ. ತೆಂಗಿನ ಎಳೆ ನೀರು, 3 ಲೀ. ಕಬ್ಬಿನ ಹಾಲು ಮತ್ತು 1 ಡಜನ್ ಕಳಿತ ಬಾಳೆ ಹಣ್ಣು ಇವುಗಳನ್ನು ಸೇರಿಸಿ ಚೆನ್ನಾಗಿ ಬೆರೆಸಬೇಕು. ಈ ಮಿಶ್ರಣವನ್ನು 15 ದಿನಗಳವರೆಗೆ ಮುಚ್ಚಿಡಬೇಕು. ಬೆಳಿಗ್ಗೆ ಹಾಗೂ ಸಾಯಂಕಾಲ ಮಿಶ್ರಣವನ್ನು ಚೆನ್ನಾಗಿ ಕಲಸಬೇಕು. ಮಿಶ್ರಣದ ತಿಳಿಯನ್ನು ನೀರಿನೊಂದಿಗೆ ಶೇಕಡ 3 ರ ಪ್ರಮಾಣದಲ್ಲಿ ಬಳಸಬೇಕು. ಪಂಚಗವ್ಯ ದ್ರಾವಣವನ್ನು 15 ದಿನಗಳಿಂದ 1 ತಿಂಗಳ ಅಂತರದಲ್ಲಿ ಮಣ್ಣಿಗೆ ಬೆರೆಸಬಹುದು ಅಥವಾ ಸಿಂಪರಣೆ ಮಾಡಬಹುದು.

ಪಂಚಗವ್ಯ ಸಿಂಪರಣೆಯಿಂದ ತೋಟಗಾರಿಕೆ ಬೆಳೆಗಳಲ್ಲಿ ಬೆಳವಣಿಗೆ ಮತ್ತು ಇಳುವರಿ ವೃದ್ಧಿಸುವುದು, ಪಂಚಗವ್ಯ ಸಿಂಪರಣೆಯು ತರಕಾರಿ ಮತ್ತು ಹಣ್ಣುಗಳ ರುಚಿಯನ್ನು ಹೆಚ್ಚಿಸುವುದಲ್ಲದೆ, ಇವುಗಳ ತಾಜಾತನವನ್ನು ದೀರ್ಘಕಾಲದವರೆಗೆ ಕಾಪಾಡುತ್ತದೆ ಮತ್ತು ಗಿಡಗಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮಲ್ಲಿಗೆಯಲ್ಲಿ ಪಂಚಗವ್ಯ ಸಿಂಪರಣೆಯಿಂದ ವರ್ಷವಿಡಿ ಹೂ ಬಿಡುವುದರ ಜೊತೆಗೆ ಸುಗಂಧಿತ ಪರಿಮಳವನ್ನು ಹೆಚ್ಚಿಸುತ್ತದೆ.


**(2). ಅಮೃತ ಪಾಣಿ**

ಬೇಕಾಗುವ ಸಾಮಗ್ರಿಗಳು: ದೇಶಿ ಆಕಳ ಸಗಣಿ 10 ಕೆ.ಜಿ., ದೇಶಿ ಆಕಳ ತುಪ್ಪ 250 ಗ್ರಾಂ., ಮತ್ತು ಜೇನು ತುಪ್ಪ 500 ಗ್ರಾಂ. ದೇಶಿ ಆಕಳ ಸಗಣಿ ಮತ್ತು ತುಪ್ಪವನ್ನು ಚೆನ್ನಾಗಿ ಬೆರೆಸಬೇಕು. ಈ ಮಿಶ್ರಣಕ್ಕೆ ಜೇನು ತುಪ್ಪ ಸೇರಿಸಬೇಕು. ಒಂದು ಬಕೇಟ್/ಟಬ್/ಮಣ್ಣಿನ ಗಡಿಗೆಯಲ್ಲಿ ಮೇಲಿನ ಮಿಶ್ರಣವನ್ನು 18–24 ಗಳ ಕಾಲ ಮುಚ್ಚಿ ಇಡಬೇಕು. ಮಿಶ್ರಣದ ತಿಳಿಯನ್ನು ನೀರಿನೊಂದಿಗೆ ಶೇಕಡ 3 ರ ಪ್ರಮಾಣದಲ್ಲಿ ಬಳಸಬೇಕು. ಅಮೃತ ಪಾಣಿ ದ್ರಾವಣವನ್ನು 15 ದಿನಗಳಿಂದ 1 ತಿಂಗಳ ಅಂತರದಲ್ಲಿ ಮಣ್ಣಿಗೆ ಬೆರೆಸಬಹುದು ಅಥವಾ ಸಿಂಪಡಣೆ ಮಾಡಬಹುದು.

**(3). ಜೀವಾಮೃತ**

ಬೇಕಾಗುವ ಸಾಮಗ್ರಿಗಳು: ನೀರು 200 ಲೀ., ದೇಶಿ ಹಸುವಿನ ಸಗಣಿ 10 ಕೆ.ಜಿ., ದೇಶಿ ಹಸುವಿನ ಗಂಜಲ 10 ಲೀ., ದೇಶಿ ಬೆಲ್ಲ 2 ಕೆ.ಜಿ., ದ್ವಿದಳ ಧಾನ್ಯದ ಹಿಟ್ಟು 2 ಕೆ.ಜಿ., ಮತ್ತು ಒಂದು ಬೊಗಸೆ ಜಮೀನಿನ ಅಥವಾ ಕಾಡಿನ ಮಣ್ಣು. ಬ್ಯಾರೆಲ್/ಡ್ರಮ್/ಸಿಮೆಂಟ್ ತೊಟ್ಟಿಯಲ್ಲಿ 200 ಲೀ ನೀರು ತೆಗೆದುಕೊಂಡು ಅದಕ್ಕೆ 10 ಕೆ.ಜಿ. ಸಗಣಿ, 2 ಕೆ.ಜಿ ಬೆಲ್ಲ, 2 ಕೆ.ಜಿ ದ್ವಿದಳ ಧಾನ್ಯದ ಹಿಟ್ಟು, 10 ಲೀ ಗಂಜಲ ಮತ್ತು ಒಂದು ಬೊಗಸೆ ಮಣ್ಣನ್ನು ಸೇರಿಸಬೇಕು. ತೆಳುವಾದ ಒದ್ದೆ ಗೋಣಿಚೀಲದಿಂದ ಮುಚ್ಚಿ ಮರದ ಕೆಳಗೆ ಅಥವಾ ನೆರಳಿನಲ್ಲಿಡಬೇಕು. ಈ ಮಿಶ್ರಣವನ್ನು ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ (ದಿನಕ್ಕೆ 3 ಬಾರಿ) ಕೋಲಿನಿಂದ ವೃತ್ತಾಕಾರವಾಗಿ ತಿರುಗಿಸಬೇಕು ಹಾಗು 7 ದಿನಗಳ ನಂತರ ಉಪಯೋಗಿಸಬೇಕು.

ಜೀವಾಮೃತವನ್ನು ನೇರವಾಗಿ ಭೂಮಿಗೆ ಹಾಕಬಹುದು ಅಥವಾ ನೀರಾವರಿ ಜೊತೆ ಕೊಡಬಹುದು. ಸೋಸಿದ ಜೀವಾಮೃತವನ್ನು ನೇರವಾಗಿ ಬೆಳೆಗಳಿಗೆ ಸಿಂಪಡಿಸಬಹುದು. ವಾರ್ಷಿಕ ಬೆಳೆಗಳಿಗೆ ಎಕರೆಗೆ ಪ್ರತಿ ಬಾರಿಗೆ 200 ಲೀ. ನಂತೆ 10–15 ದಿನಗಳ ಅಂತರದಲ್ಲಿ ಕೊಡಬೇಕು. ಬಹು ವಾರ್ಷಿಕ ಬೆಳೆಗಳಿಗೆ ಪ್ರತಿ 8–10 ದಿನಗಳಿಗೊಮ್ಮೆ ಪ್ರತಿ ಗಿಡದ ಸುತ್ತ 2–3 ಲೀ. ಹಾಕಬೇಕು.




ಮುಂದುವರೆಯುವುದು........ ಓಂ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**

# ANNIE BEASANT
## CONVENT & HIGH SCHOOL(R)

# 90/91, 12th Main Road, Srinivasanagar,
Sunkadakatte Pipe Line, Bangalore - 560 091



Mob.: 8884570511





**A. Gangaiah**
Secretary



Registered with Registrar of News Papers for India No.KARKAN/2018/76081, **Sampreethi Samruddhi,** March - 2023.
License to post without prepayment. License No.**KA/BG/CNA/119/2022-2024,**
Date of publication: **28.02.2023.** Posted at **Magadi Sub Post Office-562120** on **29th** of every month

## ರಾಮನಗರ ಜಿಲ್ಲಾ
## ೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ

ಆಯ್ಕೆಯಾಗಿರುವ ಹಿರಿಯ ಸಾಹಿತಿ ಹಾಗೂ ಸಮೃದ್ಧಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಗೌ॥ ಅಧ್ಯಕ್ಷರು, ಸಂಪ್ರೀತಿ ಸಮೃದ್ಧಿ ಮಾಸ ಪತ್ರಿಕೆಯ ಸಂಪಾದಕರಾದ

# ಡಾ. ಸಿ. ನಂಜುಂಡಯ್ಯ

ಅವರಿಗೆ

## ಹೃದಯಪೂರ್ವಕ ಅಭಿನಂದನೆಗಳು



**ಶುಭಕೋರುವವರು;**

**ಶ್ರೀ ಬಿ. ಟಿ. ನಾಗೇಶ್,** ಜಿಲ್ಲಾಧ್ಯಕ್ಷರು ಕ. ಸಾ. ಪ.
**ಶ್ರೀ ತಿ. ನಾ. ಪದ್ಮನಾಭ,** ಅಧ್ಯಕ್ಷರು ಕ. ಸಾ. ಪ. ಮಾಗಡಿ
**ಶ್ರೀ ಡಿ. ಜಿ. ಗಂಗಾಧರ,** ನಿಕಟಪೂರ್ವ ಕಾರ್ಯದರ್ಶಿಗಳು ಕ.ಸಾ. ಪ.
**ಸಾಹಿತ್ಯಾಸಕ್ತರು ಸ್ನೇಹಿತರು, ಅಭಿಮಾನಿಗಳು ಹಾಗೂ ದೊಡ್ಡಸೋಮನಹಳ್ಳಿ ಗ್ರಾಮಸ್ಥರು**

To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120